ಶನಿವಾರ, ಜೂನ್ 1, 2024 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಾಲೀಮು
ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಕ್ಕಾಗಿ ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಅವರು ಕೋಲ್ಕತ್ತದಲ್ಲಿ ಅಭ್ಯಾಸ ನಡೆಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

MH PROMOTERS
BBMP A KHATA Sites @ Hemmigepura
Mysore Road, Kengeri
Clear Legal Titles, Ready for Registration & Construction, Bank Loan Avbl
Call for Site Visit: 95138 50029
www.mhpromoters.in

SAMRUDDHI DEVELOPERS
AMRUTHADAMA ENCLAVE PHASE - 3
@ BANGALORE NORTH RAJANKUNTE, YELAHANKA
GATED COMMUNITY SITE FOR SALE
NEIGHBOURING PRESTIGE OASIS VILLAS, ATMOS SILVERWOOD VILLAS, PRESIDENCY UNIVERSITY
AMENITIES
Entrance Arch | 24 Hour Water Facility
Underground Electricity
Plantations / Underground Drainage
White Top Roads / Gated Community
DC CONVERSION SITES
'E' Khata Bank loan 90% Just pay 10%
9741126375 / 9066578786

REAL ESTATE SELLING

Sites

Anjanapura

BDA SITE for Sale 30x40 East Facing site Located at Anjanapura Extension, 9th Block, Bangalore. Genuine Buyers Contact-9481545729/ 9036167265/ 9449457861

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES-9980863245/ 9945333993

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

FOR SALE 30X40 BDA Site at Banashakari 6th Stage 11th Block Contact: 9739109093 / 9449164392

Intl Airport Road

LAND SALE North Bangalore 60*40 Airport Park, NRI World, Chikkajala, Devanahalli Taluk, Bangalore. Contact: 9844045517

Bannerghatta Road

SITE 30X40 for sale at NISARGA layout Bannerghatta Road West facing, Near to Lotus Restaurant Entrance, Interested buyers Contact:7676858184

LIVING SPACE
Rs. 6600/- per sqft.
MAHANIDHI RESIDENCY
BBMP - "A" Khata Sites
Rs. 6600/- per sqft
Akshaya Nagar - Begur Road
Call : +91 98451 47703

Basavanagudi

SHANKAR PURAM MAIN ROAD 1248sft SITE FOR SALE EAST 43000/-`sft NEG ALSO BTM`6th-STAGE 50x80 EAST 15000/-`sft`NEG CALL:9886673794 6364580004

Jayanagar

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

Kanakapura Road

SITE FOR SALE
30×40. DC CONVERSATION EAST FACING
At Nelaguli Village Uthharahalli Hobali. Kanakapura to Bangalore Main Road within 150 Mtrs Near Somanahalli Gate Square Feet 2900/- Negotiable
Contact No. 9148687983 / 9591496983

SITE FOR SALE NarayanaNagar 1st Block, 40x60 S/F BDA Approved, 40 Feet Road. Call: 6363726250.

Kempegowda Layout

***NAADAPRABHU* KEMPEGOWDA** LAYOUT 1st Block 'H' Sector 30x40 East Facing Site Price: 82,50,000/-. Contact: 9686469799

KEMPEGOWDA LAYOUT, BDA SITE FOR SALE 20X30, 30X40, 40X60, 50X80 CONTACT KUMAR: 9945119449

RAECOM DEVELOPERS
#411, Innovative Enclave, Alur Cricket Stadium Road, Alur, Bengaluru North Tq. - 562 162
RAECOM
Industrial Converted Sites
"Ready for Registration & Construction"
BANK LOAN AVAILABLE



- For Industry Godown Construction
- At Huskur Main Road(APMC Main Road)
- Just 500meters From Tumkur Road
- 2 km from New BIEC Metro Station
- 1 Km From Proposed Bangalore Business Corridor (PRR Ring Road)

SCAN FOR LOCATION
ಕೈಗಾರಿಕಾ ಭೂಪರಿವರ್ತನಾ ಸೈಟುಗಳು
CONTACT: CHANDAN GOWDA
93419 03159
DC Converted Residential Plots are Also Available

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

BMRDA CORNER site Upkar Layout 30'x40' plus two service Roads 40 lakhs Owner 9632821296

R T Nagar

ON BELLARY Main-Road Commercial Property East 25,000sft Converted Near Nandi Upchar Hotel Clear Titles 9738111222

Sarjapur Road

SHUBH ENCLAVE Haralur Road Site- 80X120, 50x70, 45x80. Price: 11000/- to 12500/- sft. Call: 9945689847.

Vishweshwariah Layout

BDA 8TH Block, Very Good Location,30x40 South Facing Site, Sale Price 12500/-sft, Payment mode Reasonable, Direct Registration Contact Genuine buyers only: 9945564769 (Brokers Excuse)

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

KEMPEGOWDA LAYOUT 50X80 Site Sale Site No. 3281, 3282, 7th Block F Sector, 30x40 Vishweshwaraiah Layout 7th Block Site No 826 Contact: 7899933039

AVAILABLE ANY Measurement (BDA, Revenue A and E khatha),Sites Vishvesvaraiah layout, Ullal, Kengeri road. 9945636067

AVAILABLE 40X60 BDA Site North Facing 1st Block 40ft Road Vishveshwariah Layout Contact Buyers: 9844603127

BDA VISHWESHWARAYA Layout, 6th Block, Site #2571, 30x40 West Facing, Good Location Direct Owner. 9945266212

Bidadi

BIDADI SITES with amenities Converted + BMRDA, HighwayService 80 ft road & Cocacola Rs. 3150 Negotiable. 9743865623 Mallesh

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha, Rs.5.50 Crores (negotiable). Party going out of station, one time settlement (more negotiable) Immediate Registration. 9845765559/ 9845043282

Basavanagudi

SALE BDA Old House 31x35 W/F 30ft Road Sukenahalli Hanumantha Nagar Basavanagudi, Prime Location 8050705145

Jayanagar

40X30 SITE 1200sft Duplex House G+2, LIC-Colony Jayanagar EF 3.20cr Brokers Excuse: 9148162188/ 8197196958

J P Nagar

HOUSE SALE: J.P.Nagar, 6th Phase, BDA site, E/F, 4 bedroom, Seperate card shed. Contact: 9880402575.

R T Nagar

COMMERCIAL & RESIDENTIAL BUILDING FOR SALE 40X60 NORTH FACING WITH RENTAL INCOME CALL DEVARAJ 9845169306

Vidyaranyapura

HOUSE SALE for 1800 sqft (Site 20x55), 1.10 Crore, Singapura, Vidyaranyapura, Bangalore. Owner Sunil: 7353353377.

Flat

Banashankari

NEWLY CONSTRUCTED East facing 3BHK flat including car park for sale at Sapthagirinagara, Hosakerehalli. Contact: 9606976551

Bannerghatta Road

SALE READY TO Occupy Flats-in Bannerghatta Road Spacious 2&3 BHK With 100%`Vaastu Compliance Near Decathlon Store Call:8050044748 9880594643

Sarjapur Road

3 AND Half BHK new Apartment for sale at 40 acres Confident Meadows on Sarjapur Main Road. Contact:- B.K.Reddy:- 9845039547.

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote-Chintamani-Malur surroundings, minimum Road width 40 feet plus. Flexible Payment. 9916592400

Commercial Building

Banashankari

30X40 BDA Commercial Property for Sale.Next to PES College Hosakerehalli, Good Rental Income. 9731115176/ 9845119946

Commercial Land

Airport Road

2 PLOTS 37 by 60 feet in posh area Near Airport Hubli contact 9060500502

Commerical

Jayanagar

SALE, 2363SFT. Commercial Office Space, 1st Floor, Suraj Towers, Jayanagar 3rd Block, Prime Location: 9343782958.

Kengeri

COMMERCIAL PROPERTY for Sale 20,000/- Sqf, Adjacent Kengeri Metro Station for Hotel, Theater. Kumar:- 9945119449

Vidyaranyapura

EXCELLENT SEMI Commercial Site, 2000 SQFT South West Corner for sale at Vidyaranyapura. Contact:98455 83070

REAL ESTATE BUYING

General

General

WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton Centre, MG Road.

Sites

Nagarabhavi

"WANTED ITI, MPM, Nagarabhavi Vishveshwaraiah any measurements we have Direct Registration. Feel free Contact: 7259675150"

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. Genuine Sellers Contact: 9902038118, 9449060605

WANTED BDA Site Anjanapura, Banashankari 6th Stage, Vishweshwaraiah layout, Kempegowda Layout & any BDA Katha Sites, immediate settlement. Genuine Sellers Contact: 9972223222, 9606632777

BDA-SITES WANTED @ Banashankari 6th`Stg, Anjanapura Visveshwaraiah Lyt Narayananagar 20x30,30x40, 40x60,50x80 Immediate Settlement Rajesh: 9945610779

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th Stage, Balaj`Layout, Agent Excuse Contact: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweshwaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

RENT COMMERCIAL OFFICE SPACE JARAGANAHALLI 80Meters from J.P.Nagar Metro Station GF-2500 Sq.ft, TF-4500 Sq.ft, FF-4500 Sq.ft, FF-4500 Sq.ft, With Lift/ Parking 24Hrs Water, DG Back-up Contact Owner- 9845006172

House

PADMANABHANAGR WELL FURNISHED 2BEDROOM ATTACHED BATH`1st FLOOR`RENT 20000/-`NEG`ALSO FULLY-FURNISHED ROOM WITH ATTACHED BATH RENT`7000/-`NEG Call:9886673794 6364580004

NEW 2BHK 1st Floor Semi Furnished Bike Parking Rent:32,000 Bapuji Chandra Layout Contact:7795494932

BUSINESS

Business to Business

Medical

SUPER STOCKIST Mahendra Labs Vet, Elder Labs, Wings Biotech, Surgicals, My Pharma 9738465160 / 6361028639

LAND FOR SALE
Mysore Road, Dodda Aaladamara 9.5 Acre Land, Yellow Zone, Prime land, clear title, General Property 2,25,00,000/- Per acre, near Chandrappa Circle ISRO
Contact- 9845000299

COMMERCIAL SPACE AVAILABLE
12,000 sqft Available for Rent in Oklypuram.
Well Ventilated, 24hr Security, Ample Parking.
Suitable for 2 Wheeler Showrooms, Service Center & Super Market etc.
Interested Tenants Can Contact on: 7892914631 / 9845067328 / 9341904488
Address: Oklypuram, 5th Main Road, Srirampura, Bangalore-560021

Business Offers

Dealers And Stockists

DEALERS WANTED IN KARNATAKA & ANDRA PRADESH
A leading manufacturing company for Antibacterial Body wipes, Baby wipes & Adult diapers required experienced dealers from the same industry
Contact 7892003537 9847433530

EDUCATIONAL

Admission

CHRIST ACADEMY INSTITUTE OF LAW
(Affiliated to Karnataka State Law University, Hubballi and Approved by Bar Council of India)
Invites applications for the 5 Year integrated
B.A LL.B, B.B.A LL.B and B.Com LL.B Courses — Admissions Open
Note: Reservation policy for admission will be followed as per the Government of Karnataka orders.
Christ Nagar, Begur - Koppa Road, Hullahalli, Sakkalawara Post, Bangalore – 560083
Contact: 9513817755 / 9513867755 / 9513517755
www.calaw.in

JOB OPPORTUNITIES

Teachers/ Professors

FRESHER TEACHERS required for High school and Primary subject Maths trained untrained contact Kenmore school Basavanagudi, whatsapp 9901501185 or email kenmoreschool@gmail.com

WANTED LECTURERS, Kannada, English, Commerce, Srinivasa College (M.A. M.Com.), Hosur Main Road, Kudlu Gate, Bengaluru. 9341948860, 9449979054.

PERSONAL

Change of Name

CHANGE OF NAME
We, **S ELENGOVAN & SARITHA ELENGOVAN** Residing at # 519. 8th Main, 2nd Cross, Sadananda Nagar, NGEF Layout, Bengaluru-560038 have changed our daughter's name from **GUNASELA T E** to **ANKITHA ELENGOVAN** vide affidavit dated 2.5.2024 before notary Sivakumara. M.N, Bengaluru.

I, MALLAPPA Kurubar S/o Late Nagappa aged 74 Years residing at Kannamangala Gate, Kannamangala post, Madhure Hobli, Doddaballapura Taluk, Bangalore Rural Dist. My Name is entered as Mallappa Kurubar in the Pension Payment Order Copy, PAN and other Documents, but in my Adhar Copy it is entered as MALLAPPA only. Please change my name as MALLAPPA KURUBAR instead MALLAPPA in my Aadhar bearing No.8835 9446 1640. Vide affidavit Dated : 09-05-2024. Sworn before Notary V. Rangaramu Bengalruru.

CHANGE OF NAME
I, **WAZIR AHMED NAZIR,** S/o Late Nazir Ahmed, aged 63 years, Residing at # 2025, Ground Floor, 4th Main Road, Bismillah Nagar, Bannerghatta Raod, Bangalore-560029 have changed my name to **WAZIR AHMED** vide affidavit dated 22.04.2024, before notary C.V.Earappa, Bangalore. Henceforth I shall be called **WAZIR AHMED** only.

I, HEMLATA BABULAL JAIN, R/a, #201, Arihant Apartments, 2nd floor, Subramanya Swamy Temple Road, Sajjan Rao Circle, V.V.Puram, Bangalore-560004 Have Changed My Name to SONIYA BAFNA Vide Affidavit Dated 31/05/2024 before Notary R. Basavaraja Bangalore

WEEKEND CORNER



bookmyshow.com
ದೂ: 7907442664, 6352419244
ರೂ. 500 ಮತ್ತು ರೂ.350 ಮತ್ತು
TICKET: 150 200 250 350

Handloom INDIA
ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
1ರಿಂದ 9 ಜೂನ್
ಪ್ರತಿದಿನ ಬೆಳಗ್ಗೆ 11 ರಿಂದ ರಾತ್ರಿ 9 ಗಂಟೆ
ಶ್ರೀನಿವಾಸ ಸಾಗರ ಕಲ್ಯಾಣ ಮಂಟಪ
ಅಶೋಕ ಸ್ತಂಭದ ಹತ್ತಿರ, 2ನೇ ಬ್ಲಾಕ್, ಜಯನಗರ, ಬೆಂಗಳೂರು–11



ENTRY FREE • M: 9412258826 • ALL DEBIT & CREDIT CARDS ACCEPTED

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331


ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com



Admired by All Owned by You!

Architectural Excellence | Superior Locations
Outstanding Conveniences | Best-in-Class Amenities
Excellent Connectivity | Lifetime Support and Assurance

AS YOUR TRUSTED BUILDER
We Assure You A Living Experience That Surpasses Your Expectations.

ಡಿಎಸ್ ಮ್ಯಾಕ್ಸ್



2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/310/PR/150223/005721 MYSORE ROAD NR. R R DENTAL COLLEGE ₹ 49.63 - 79.66 Lakhs* 8088 445 445	PRM/KA/RERA/1251/308/PR/201201/003733 ELECTRONIC CITY HOSA ROAD JUNCTION ₹ 54.10 L - 1.15 Cr* 9164 045 000	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* 8880 013 310	PRM/KA/RERA/1251/309/PR/211209/004576 YELAHANKA NEAR RAJANAKUNTE TOLL ₹ 37.52 - 88.58 Lakhs* 8880 758 758
PRM/KA/RERA/1250/304/PR/150224/006622 WHITEFIELD 10 MINS. HOPEFARM METRO ₹ 45.63 - 1.00 Cr* 8088 773 773	PRM/KA/RERA/1251/309/PR/060923/006244 TUMKUR ROAD NEAR HIMALAYA FACTORY ₹ 41.89 - 64.12 Lakhs* 8880 465 465	PRM/KA/RERA/1251/310/PR/151223/006489 UTTARAHALLI OPP. NPS SCHOOL ₹ 77.77 L - 1.74 Cr.* 8050 161 222	PRM/KA/RERA/1251/309/PR/030524/006841 HENNUR MAIN RD. NEAR HENNUR DECATHLON ₹ 53.40 - 1.04 Cr* 8880 003 003
PRM/KA/RERA/1251/310/PR/210324/006724 BEGUR 10 MINS. TO SILK BOARD ₹ 71.36 L - 1.16 Cr* 8880 472 472	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 49.80 Lakhs* 9164 122 000	PRM/KA/RERA/1251/446/PR/210312/004002 K R PURAM NEAR GARDEN CITY UNIVERSITY ₹ 60.15 - 87.72 Lakhs* 8880 438 000	PRM/KA/RERA/1251/309/PR/220223/005748 THANISANDRA 10 MINS. MANYATA TECH PARK ₹ 59.56 - 86.79 Lakhs* 8880 461 461

*T & C Apply


FACILITY MANAGEMENT SERVICES



For Apartments & Commercial Complexes
MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory
Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000


REFER & EARN



Refer Us To Your Friends & Relatives And Get Handsomely Rewarded
2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN



Refer Us To A Landowner For JV / Outright Purchase In Any Part Of Bengaluru And Get A 2-BHK ABSOLUTELY FREE*
Residential Land | Commercial Land
*T & C Apply

CALL : 8880 463 463

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ವಿರಾಜಪೇಟೆ- ಕೇರಳ ರಸ್ತೆ ಸಂಪರ್ಕ ಕಡಿತ

ಮಡಿಕೇರಿ: ವಿರಾಜಪೇಟೆ- ಕೇರಳ ರಸ್ತೆಗೆ ಶುಕ್ರವಾರ ರಾತ್ರಿ ಭಾರಿ ಗಾತ್ರದ ಮರವೊಂದು ಉರುಳಿ ಬಿದ್ದಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿದೆ.

ಮಾಕುಟ್ಟ ಚೆಕ್ ಪೋಸ್ಟ್ ಸಮೀಪ ಬಿದ್ದಿರುವ ಈ ಮರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜೇನುಗೂಡುಗಳು ಇದ್ದವು. ಜೇನ್ನೊಣಗಳೆಲ್ಲವೂ ಹಾರಾಡುತ್ತಿದ್ದು ವಾಹನಗಳಲ್ಲಿರುವ ಪ್ರಯಾಣಿಕರು ಪರದಾಡುತ್ತಿದ್ದಾರೆ.

ತಕ್ಷಣವೆ ಮರ ತೆರವುಗೊಳಿಸುವಂತೆ ಅರಣ್ಯ ಇಲಾಖೆಯ ಸಿಬ್ಬಂದಿಗೆ ತಿಳಿಸಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.





1. ಚಿಕ್ಕಪೇಟೆಯ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಮಾಡಲು ರಸ್ತೆಯನ್ನು ಅಗೆದಿರುವುದು 2. ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವುದರಿಂದ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿದೆ
–ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಬಿವಿಕೆ ಅಯ್ಯಂಗಾರ್ ರಸ್ತೆಯ ಕಾಮಗಾರಿ ಮುಂಗಾರು ಪೂರ್ವ ಆರಂಭಿಸಿದಕ್ಕೆ ಆಕ್ಷೇಪ

ವೈಟ್‌ಟಾಪಿಂಗ್: ನೆಲಕಚ್ಚಿದ ವ್ಯಾಪಾರ

• ಖಲೀಲಅಹ್ಮದ ಶೇಖ

ಬೆಂಗಳೂರು: ಎತ್ತ ನೋಡಿದರತ್ತ ಅಗೆದಿರುವ ರಸ್ತೆ, ಅಲ್ಲಲ್ಲಿ ತೋಡಿರುವ ಗುಂಡಿಗಳು, ಬಟ್ಟೆ, ಅಲಂಕಾರಿಕ ಮತ್ತು ಎಲೆಕ್ಟ್ರಿಕಲ್ ವಸ್ತುಗಳ ಮೇಲೆ ಕುಳಿತಿರುವ ದೂಳನ್ನು ಸ್ವಚ್ಛಗೊಳಿಸುತ್ತಿರುವ ವ್ಯಾಪಾರಿಗಳು...

ನಗರದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಒಂದಾಗಿರುವ ಚಿಕ್ಕಪೇಟೆಯ ಬಿವಿಕೆ ಅಯ್ಯಂಗಾರ್ ರಸ್ತೆಯ ದುಃಸ್ಥಿತಿ ಇದು.

ಒಂದೂವರೆ ತಿಂಗಳ ಹಿಂದೆ ಚಿಕ್ಕಪೇಟೆಯ ಬಿವಿಕೆ ಅಯ್ಯಂಗಾರ್ ರಸ್ತೆಯ ಏಕ್ ಮೀನಾರ್ ಮಸೀದಿಯಿಂದ ಕಂಚಿ ಅಪೆಕ್ಸ್ ಸೊಸೈಟಿವರೆಗೆ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿದೆ. ಕಾಮಗಾರಿಗಾಗಿ ಈ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಿರುವುದರಿಂದ, ಸ್ಥಳೀಯ ವಾಹನ ಓಡಾಟ ಹಾಗೂ ನಿಲುಗಡೆಗೆ ಅಡ್ಡಿಯಾಗಿದೆ. ವಾಹನಗಳ ಸಂಚಾರಕ್ಕಾಗಿ ಬದಲಿ ಮಾರ್ಗವನ್ನು ಕಲ್ಪಿಸಲಾಗಿದೆ. ಆದರೆ, ಮಳಿಗೆಗೆ ಬರುವ ಗ್ರಾಹಕರ ಸಂಖ್ಯೆ ಕಡಿಮೆಯಾಗಿದ್ದು, ಶೇ 30-40ರಷ್ಟು ವ್ಯಾಪಾರ-ವಹಿವಾಟು ಕುಸಿದಿದೆ.

ಬಿವಿಕೆ ಅಯ್ಯಂಗಾರ್ ರಸ್ತೆಯ ಮೂಲಕವೇ ಚಿಕ್ಕಪೇಟೆಗೆ ಸಾವಿರಾರೂ ಜನ ಭೇಟಿ ನೀಡುತ್ತಾರೆ. ಇಲ್ಲಿನ ಕಾಂಕ್ರೀಟ್ ರಸ್ತೆಯನ್ನು ನಾಲ್ಕೈದು ಅಡಿವರೆಗೆ ಅಗೆದು ಹಾಕಲಾಗಿದೆ.



ನಗರದ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕೆಲಸ ನಡೆಯುತ್ತಿರುವ ಜಾಗದಲ್ಲೇ 20 ವರ್ಷಗಳಿಂದ ಸತತವಾಗಿ ಬಾಳೆಹಣ್ಣು ವ್ಯಾಪಾರ ಮಾಡುತ್ತಿದ್ದ ಅಂಬಿಕಾ ಅವರು ವ್ಯಾಪಾರ ಕಡಿಮೆಯಾದರೂ ಕೂಡ ಬೇರೆ ಸ್ಥಳ ಸಿಗದ ಕಾರಣ ಕೆಲಸ ನಡೆಯುತ್ತಿರುವ ರಸ್ತೆಯಲ್ಲೇ ವ್ಯಾಪಾರ ಮಾಡುತ್ತಿದ್ದಾರೆ
–ಪ್ರಜಾವಾಣಿ ಚಿತ್ರ

ರಸ್ತೆಯ ಪಕ್ಕದಲ್ಲಿರುವ ವಾಣಿಜ್ಯ ಮಳಿಗೆಗಳು ಹಾಗೂ ಹೋಟೆಲ್‌ಗಳಿಗೆ ಹೋಗಲು ರಸ್ತೆ ಇಲ್ಲ. ಮಳೆಗಾಲದಲ್ಲಿ ಕಾಮಗಾರಿ ಪ್ರಾರಂಭಿಸಿರುವುದರಿಂದ ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇದೆ ಎನ್ನುತ್ತಾರೆ ವ್ಯಾಪಾರಿಗಳು.

'ಈ ರಸ್ತೆಯಲ್ಲಿ ಜವಳಿ, ಪಾದರಕ್ಷೆಗಳು, ಮಹಿಳೆಯರ ಅಲಂಕಾರಿಕ ಹಾಗೂ ದಿನಬಳಕೆ ವಸ್ತುಗಳ ಅಂಗಡಿಗಳಿವೆ. ಕಾಮಗಾರಿ ನಡೆಯುತ್ತಿರುವುದರಿಂದ ಇಲ್ಲಿ ಜನ ಓಡಾಡದಂತಹ ಪರಿಸ್ಥಿತಿ ಇದೆ. ಇದರಿಂದ, ವ್ಯಾಪಾರ ವಹಿವಾಟು ಸಂಪೂರ್ಣವಾಗಿ ಕುಸಿದಿದೆ. ಅಂಗಡಿಗಳ ಬಾಡಿಗೆ ಹಾಗೂ ಕಾರ್ಮಿಕರಿಗೆ ವೇತನ ನೀಡಲು ಆಗುತ್ತಿಲ್ಲ' ಎಂದು ವ್ಯಾಪಾರಿಗಳು ಅವಲತ್ತು ತೋಡಿಕೊಂಡರು.

'ರಸ್ತೆ ಬದಿ ಬಾಳೆಹಣ್ಣು ಮಾರಿಕೊಂಡು ಜೀವನ ನಡೆಸುತ್ತಿದ್ದೇನೆ. ಕಾಮಗಾರಿಯಿಂದ ಒಳ್ಳೆಯ ರಸ್ತೆಯೇನೋ ಬರುತ್ತಿದೆ. ಇದಕ್ಕೆ ನನ್ನ ವಿರೋಧವಿಲ್ಲ. ಒಂದು ತಿಂಗಳಿನಿಂದ ವ್ಯಾಪಾರವೇ ಇಲ್ಲ. ಅಗೆದ ರಸ್ತೆಯ ಮಧ್ಯದಲ್ಲಿಯೇ ಕುಳಿತುಕೊಂಡು ಬಾಳೆಹಣ್ಣು ಮಾರುತ್ತಿದ್ದೇನೆ. ಬೆರಳೆಣಿಕೆಯಷ್ಟು ಗ್ರಾಹಕರು ಮಾತ್ರ ಬರುತ್ತಿದ್ದಾರೆ. ಜೀವನ ನಿರ್ವಹಣೆ ಕಷ್ಟವಾಗಿದೆ' ಎಂದು ಬಾಳೆಹಣ್ಣು ವ್ಯಾಪಾರಿ ಅಂಬಿಕಾ ಸಂಕಟ ಹೊರಹಾಕಿದರು.

'₹1 ಕೋಟಿ ವೆಚ್ಚದಲ್ಲಿ ಬಿವಿಕೆ ಅಯ್ಯಂಗಾರ್ ರಸ್ತೆಯ 200 ಮೀಟರ್ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಮೂರು ತಿಂಗಳ ಒಳಗೆ ಕಾಮಗಾರಿ ಮುಗಿಸಲು ಗಡುವು ನೀಡಲಾಗಿದೆ. ರಸ್ತೆ ಮಧ್ಯೆ ಒಳಚರಂಡಿ ಪೈಪ್ ಮತ್ತು ಬೆಸ್ಕಾಂ ಕೇಬಲ್ ಮತ್ತು ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು (ಒಎಫ್‌ಸಿ) ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಇದು ಪೂರ್ಣಗೊಂಡ ನಂತರ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭವಾಗಲಿದೆ' ಎಂದು ಬಿಬಿಎಂಪಿ ಎಂಜಿನಿಯರ್‌ರೊಬ್ಬರು ತಿಳಿಸಿದ್ದಾರೆ.

ವ್ಯಾಪಾರಿಗಳು ಏನಂತಾರೆ?



ಬಿವಿಕೆ ಅಯ್ಯಂಗಾರ್ ರಸ್ತೆಯ ಕಾಮಗಾರಿ ಕೈಗೊಂಡ ಪರಿಣಾಮ ನಮ್ಮ ವ್ಯಾಪಾರ ಕುಸಿತಗೊಂಡಿದೆ. ಪ್ರತಿನಿತ್ಯ ದೂಳಿನ ಸಮಸ್ಯೆ ಹೆಚ್ಚಾಗುತ್ತಿದ್ದು, ಇಲ್ಲಿನ ವ್ಯಾಪಾರಿಗಳು ನಾನಾ ರೋಗಗಳಿಗೆ ತುತ್ತಾಗುತ್ತಿದ್ದಾರೆ.
ಖಲೀಲ್ ಅಹ್ಮದ್, ವ್ಯಾಪಾರಿ



ಅಭಿವೃದ್ಧಿಯ ಹೆಸರಿನಲ್ಲಿ ಚೆನ್ನಾಗಿದ್ದ ರಸ್ತೆ ಅಗೆದು ಹಾಗಿಯೇ ಬಿಡಲಾಗಿದೆ. ಇಲ್ಲಿನ ವ್ಯಾಪಾರಿಗಳಿಗೆ ತಿಂಗಳಿಗೆ ₹1 ಲಕ್ಷ ನಷ್ಟವಾಗುತ್ತಿದೆ. ಕಾರ್ಮಿಕರಿಗೆ ವೇತನ ನೀಡಲು ಆಗುತ್ತಿಲ್ಲ. ಆದ ಬೇಗ ಕಾಮಗಾರಿ ಪೂರ್ಣಗೊಳಿಸಬೇಕು.
ಭರತ್ ಕುಮಾರ್, ಎಲೆಕ್ಟ್ರಿಕಲ್ ಅಂಗಡಿ ಮಾಲೀಕ

ಅಂಕಿ ಅಂಶಗಳು

200 ಮೀಟರ್ ಕಾಮಗಾರಿ ನಡೆಯುತ್ತಿರುವ ರಸ್ತೆಯ ಉದ್ದ

₹1 ಕೋಟಿ ಕಾಮಗಾರಿಯ ಅಂದಾಜು ವೆಚ್ಚ

ಸುದ್ದಿ 2 ನಿಮಿಷ

'ಗುತ್ತಿಗೆದಾರ ಆತ್ಮಹತ್ಯೆ: ತನಿಖಾ ಸಮಿತಿ ನೇಮಿಸಲು ಸೂಚನೆ'

ಬೆಂಗಳೂರು: ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದ (ಕೆಆರ್‌ಐಡಿಎಲ್) ಬಾಕಿ ಪಾವತಿಯಾಗಿಲ್ಲ ಎಂಬ ಪತ್ರ ಬರೆದಿಟ್ಟು ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದ ಕುರಿತು ತನಿಖೆಗೆ ಹಿರಿಯ ಅಧಿಕಾರಿಗಳ ಸಮಿತಿ ರಚಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.



ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಕೆಆರ್‌ಐಡಿಎಲ್‌ನಿಂದ ಬಾಕಿ ಪಾವತಿಯಾಗಿಲ್ಲ ಎಂಬ ಕಾರಣಕ್ಕೆ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವರದಿಗಳು ಬಂದಿವೆ. ಈ ಬಗ್ಗೆ ತನಿಖೆ ನಡೆಸಲು ಹಿರಿಯ ಅಧಿಕಾರಿಗಳ ಸಮಿತಿ ರಚಿಸಲು ಸೂಚಿಸಿದ್ದೇನೆ' ಎಂದು ಹೇಳಿದರು.

'ಇದು ಕೂಡ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ರೀತಿಯದ್ದಾಗಿದೆ. ಈ ಗುತ್ತಿಗೆದಾರ ಕೈಗೊಂಡ ಕಾಮಗಾರಿಗಳಿಗೆ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲೇ ಅನುಮೋದನೆ ನೀಡಲಾಗಿತ್ತು. ಸ್ಪಷ್ಟ ಮಾಹಿತಿ, ದಾಖಲೆ ಸಿಕ್ಕ ಬಳಿಕ ಈ ಪ್ರಕರಣದಲ್ಲಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದರು.

'ಎಲೆಕ್ಟ್ರಿಕ್ ಬಸ್‌ಗಳಲ್ಲಿ ಕನ್ನಡಿಗರೇ ಚಾಲಕರಾಗಿರಲಿ'

ಬೆಂಗಳೂರು: ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್‌ಗಳಲ್ಲಿ ಕನ್ನಡ ಬಾರದ ಚಾಲಕರ ಬದಲು ಕನ್ನಡಿಗರನ್ನೇ ನೇಮಕ ಮಾಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಮನು ಬಳಿಗಾರ್ ಅವರು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್‌ಗೆ ಪತ್ರ ಬರೆದಿದ್ದಾರೆ.

ಬಿಎಂಟಿಸಿಯಲ್ಲಿ ಖಾಸಗಿ ಎಲೆಕ್ಟ್ರಿಕ್ ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿದ್ದು, ಅದರ ಚಾಲಕರು ಕೂಡ ಖಾಸಗಿಯವರಾಗಿದ್ದಾರೆ. ಅವರಿಗೆ ಕನ್ನಡ ಬರುವುದಿಲ್ಲ. ಕನ್ನಡ ನಾಡಿನ ಜನರು ಉದ್ಯೋಗ ವಂಚಿತರಾಗಿದ್ದಾರೆ. ಎಲ್ಲ ಖಾಸಗಿ ಎಲೆಕ್ಟ್ರಿಕ್ ಬಸ್‌ಗಳಿಗೆ ಬಿಎಂಟಿಸಿಯಿಂದಲೇ ಚಾಲಕರನ್ನು ನೇಮಿಸಬೇಕು ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಬೆಂಗಳೂರು: ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ರಾಜ್ಯ ಸರ್ಕಾರಿ ನೌಕರರ ಸಂಘ ಅರ್ಜಿ ಆಹ್ವಾನಿಸಿದೆ.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 90 ಹಾಗೂ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳು ಅರ್ಜಿ ಸಲ್ಲಿಸಲು ಜೂನ್ 2 ಕೊನೆಯ ದಿನ. ಸಂಘದ ಸಾಮಾಜಿಕ ಜಾಲತಾಣದ ಮೂಲಕ ಅಥವಾ ಮೊಬೈಲ್ ಸಂಖ್ಯೆ 99021 35813 ಮೂಲಕ ಲಿಂಕ್ ಪಡೆದು ಅರ್ಜಿ ಸಲ್ಲಿಸಬಹುದು ಎಂದು ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದ್ದಾರೆ.

'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆರು ಮಂದಿಗೆ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಎಚ್.ಎಸ್.ಎಂ.ಪ್ರಕಾಶ್, ಎಚ್.ಟಿ.ಪೋತೆ, ಫಾತಿಮಾ ರಲಿಯಾ, ಸಂತೋಷ ನಾಯಕ, ಇಂದಿರಾ ಕೃಷ್ಣಪ್ಪ ಹಾಗೂ ಎಂ.ಎಸ್.ಮಣಿ ಅವರ ಕೃತಿಗಳು ಪ್ರಶಸ್ತಿಗೆ ಭಾಜನವಾಗಿದ್ದವು. ಕೃತಿಯ ಲೇಖಕರು ಹಾಗೂ ಲೇಖಕಿಯರಿಗೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದರು. ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಒಳಗೊಂಡಿದೆ.

'ಪುಸ್ತಕ ಎನ್ನುವುದು ನಮ್ಮ ಸ್ನೇಹಿತನಿದ್ದಂತೆ. ನಾವು ವಾರಪತ್ರಿಕೆಗಳಿಗೆ ಕಾಯುತ್ತಿದ್ದೆವು. ಆದರೆ, ಇಂದಿನ ಯುವಪೀಳಿಗೆ ಓದುವ ಹವ್ಯಾಸವನ್ನು ಅಷ್ಟಾಗಿ ಬೆಳೆಸಿಕೊಂಡಿಲ್ಲ' ಎಂದು ಕೆ.ವಿ.ಪ್ರಭಾಕರ್ ಬೇಸರ ವ್ಯಕ್ತಪಡಿಸಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ, 'ನಮ್ಮ ಭಾಷೆಯನ್ನು ಉಳಿಸಿ ಬೆಳೆಸುವುದಕ್ಕೆ ಪ್ರತಿಭಟನೆ, ಮುಷ್ಕರವೊಂದೇ ಮಾರ್ಗವಲ್ಲ. ಸಾಹಿತ್ಯಿಕ ಚಟುವಟಿಕೆಗಳಿಂದಲೂ ಭಾಷೆಯನ್ನು ಉಳಿಸಿ ಬೆಳೆಸಬಹುದು. ಆದ್ದರಿಂದ ನಾವು ಕಳೆದ ಮೂರು ವರ್ಷಗಳಿಂದ ಈ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದೇವೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ ಬಲಕ್ಕೆ) ಸಂತೋಷ ನಾಯಕ, ಎಚ್.ಎಸ್.ಎಂ.ಪ್ರಕಾಶ್, ಎಚ್.ಟಿ.ಪೋತೆ, ಎಂ.ಎಸ್.ಮಣಿ, ಇಂದಿರಾ ಕೃಷ್ಣಪ್ಪ ಹಾಗೂ ಫಾತಿಮಾ ರಲಿಯಾ ಅವರಿಗೆ 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ದಾಸರಹಳ್ಳಿಯ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ವೈ.ಬಿ. ಎಚ್. ಜಯದೇವ್, ದ್ವಾರನಕುಂಟೆ ಪಾತಣ್ಣ, ನಿವೃತ್ತ ಐಎಎಸ್ ಅಧಿಕಾರಿ ಸಿ. ಸೋಮಶೇಖರ್, ಕೆ.ವಿ. ಪ್ರಭಾಕರ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಹಾಗೂ ಕವಿ ಸತ್ಯಮಂಗಲ ಮಹಾದೇವ ಪಾಲ್ಗೊಂಡಿದ್ದರು

ಪ್ರಶಸ್ತಿ ಪುರಸ್ಕೃತ ಎಚ್.ಎಸ್.ಎಂ.ಪ್ರಕಾಶ್, 'ಮೂಲ ಕೃತಿಗೆ ಚ್ಯುತಿ ಬಾರದಂತೆ ಅದರ ಜೀವಾಳವನ್ನು ಓದುಗರಿಗೆ ತಲುಪಿಸುವುದು ಸುಲಭವಲ್ಲ. ಹೀಗಾಗಿ, ಲೇಖಕರ ಜತೆಗೆ ಅನುವಾದಕರನ್ನೂ ಗುರುತಿಸುವ ಕೆಲಸವಾಗಬೇಕು' ಎಂದು ತಿಳಿಸಿದರು.

ಮತ್ತೊರ್ವ ಪ್ರಶಸ್ತಿ ಪುರಸ್ಕೃತ ಎಚ್.ಟಿ.ಪೋತೆ, 'ಈ ಹಿಂದೆ ನಾನು ಅಂಬೇಡ್ಕರ್ ಅವರ ಲಂಡನ್ ಮನೆಗೆ ಭೇಟಿ ನೀಡಿ, ಆ ಬಗ್ಗೆ ಪ್ರವಾಸ ಕಥನವನ್ನು 'ಪ್ರಜಾವಾಣಿ'ಗೆ ಬರೆದಿದ್ದೆ. ಅದಕ್ಕೆ 'ಬಾಬಾ ಸಾಹೇಬರ ಲಂಡನ್ ಮನೆಯಲ್ಲಿ' ಎಂಬ ಶೀರ್ಷಿಕೆಯನ್ನು ನೀಡಲಾಗಿತ್ತು. ಅದೇ ಶೀರ್ಷಿಕೆಯಡಿ ಪುಸ್ತಕವನ್ನೂ ಹೊರತರಲಾಗಿದೆ' ಎಂದು ಸ್ಮರಿಸಿಕೊಂಡರು.

ಮೀನುಗಳ ಸಾವು: ಪಿಸಿಬಿ, ಬಿಬಿಎಂಪಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ವಿವಿಧ ಕೆರೆಗಳಲ್ಲಿ ಮೀನುಗಳು ಮೃತಪಟ್ಟಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ (ಪಿಸಿಬಿ) ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ನೋಟಿಸ್ ಜಾರಿಗೊಳಿಸಿದೆ.

ಮೀನುಗಳ ಮಾರಣಹೋಮಕ್ಕೆ ಸಂಬಂಧಿಸಿದಂತೆ ಮಾಧ್ಯಮ ವರದಿಗಳನ್ನು ಆಧರಿಸಿ ಎನ್‌ಜಿಟಿ ಅಧ್ಯಕ್ಷರಾದ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪ್ರಧಾನ ಪೀಠವು ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡಿತು.

ಮಾಧ್ಯಮ ವರದಿಗಳ ಪ್ರಕಾರ, 2017ರಿಂದ 2023ರ ನಡುವೆ ಬೆಂಗಳೂರಿನಲ್ಲಿ ಮೀನುಗಳ ಮಾರಣಹೋಮ ಸಂಭವಿಸಿರುವ 61 ಪ್ರಕರಣಗಳು ನಡೆದಿವೆ. ಭಟ್ಟರಹಳ್ಳಿ, ಮುನ್ನೇಕೋಳಲ, ಚೇಳಕೆರೆ ಮತ್ತು ಇಬ್ಬಲೂರು ಕೆರೆಗಳಲ್ಲಿ ವಿಶೇಷವಾಗಿ ಒಳಚರಂಡಿ ಸಂಸ್ಕರಣ ಘಟಕಗಳಿದ್ದರೂ ಮೀನುಗಳು ಮೃತಪಟ್ಟಿವೆ ಎಂಬುದು ವಿಶ್ಲೇಷಣೆಯಿಂದ ಗೊತ್ತಾಗಿದೆ ಎಂದು ಎನ್‌ಜಿಟಿ ಹೇಳಿದೆ.

2023ರಲ್ಲಿ 15 ಕೆರೆಗಳಲ್ಲಿ ಒಟ್ಟು 20 ಬಾರಿ ಮೀನುಗಳು ಮೃತಪಟ್ಟ ವರದಿಯಾಗಿವೆ. ಕೊತ್ತನೂರು, ಕುಂದಲಹಳ್ಳಿ, ಭಟ್ಟರಹಳ್ಳಿ ಕೆರೆಗಳಲ್ಲಿ ಈ ರೀತಿಯ ಘಟನೆಗಳು ಪುನರಾವರ್ತನೆಯಾಗಿವೆ. ಕೆರೆಗೆ ಚರಂಡಿ ನೀರು ಸೇರುತ್ತಿರುವುದು ಈ ಘಟನೆಗಳಿಗೆ ಕಾರಣ ಎಂಬುದನ್ನು ನೀರಿನ ಗುಣಮಟ್ಟದ ಪರೀಕ್ಷೆಗಳು ದೃಢಪಡಿಸಿವೆ.

ಈ ಕೆರೆಗಳು ಯುಜಿಡಿ ಸಂಪರ್ಕವಿಲ್ಲದ 110 ಹಳ್ಳಿಗಳ ಸುತ್ತಲೂ ನೆಲೆಗೊಂಡಿವೆ ಎಂದು ಮಾಧ್ಯಮ ವರದಿಗಳು ಹೇಳುತ್ತವೆ. ಸಂಸ್ಕರಣೆ ಮಾಡದ ಕೊಳಚೆ ನೀರು ಈ ಕೆರೆಗಳನ್ನು ಸೇರುತ್ತಿರುವುದರಿಂದ ಮೀನುಗಳು ಸಾಯುತ್ತಿವೆ ಎನ್ನಲಾಗಿದೆ.

ಮೀನುಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಬೆಂಗಳೂರಿನ ಜಿಲ್ಲಾಧಿಕಾರಿಗೂ ನೋಟಿಸ್ ಜಾರಿ ಮಾಡಲಾಗಿದೆ. ಪ್ರಕರಣವನ್ನು ಎನ್‌ಜಿಟಿಯ ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಲಾಗಿದ್ದು, ಮುಂದಿನ ವಿಚಾರಣೆ ಜುಲೈ 26ರಂದು ನಡೆಯಲಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕನಕಶ್ರೀ ಚಾರಿಟಬಲ್ ಟ್ರಸ್ಟ್ ಪ್ರತಿಭಾ ಪುರಸ್ಕಾರಕ್ಕಾಗಿ ಹಾಲುಮತ ಸಮಾಜದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ 95ಕ್ಕಿಂತ ಅಧಿಕ, ಪಿಯುಸಿಯಲ್ಲಿ ಶೇ 90ಕ್ಕಿಂತ ಅಧಿಕ ಅಂಕ ಪಡೆದಿರುವ, ಬಾಗಲಕೋಟೆ, ಬೆಳಗಾವಿ, ಗದಗ, ಧಾರವಾಡ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಕುರುಬ (ಹಾಲುಮತ) ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿಯ ಜೊತೆಗೆ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ ಅಥವಾ ಜಾತಿ ಪ್ರಮಾಣ ಪತ್ರಗಳ ದೃಢೀಕೃತ ನಕಲು ಪ್ರತಿ, ಆಧಾರ್ ಕಾರ್ಡ್ ನಕಲು ಪ್ರತಿ ಮತ್ತು ಭಾವಚಿತ್ರಗಳೊಂದಿಗೆ ಅರ್ಜಿಸಲ್ಲಿಸಬೇಕು. ಅರ್ಜಿಯಲ್ಲಿ ತಂದೆ, ತಾಯಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇರಬೇಕು. ದಾಖಲೆಗ ಅರ್ಜಿಯನ್ನು ಜೂನ್ 15ರೊಳಗೆ ಟಿ.ಬಿ.ಬಳಗಾವಿ, ಅಧ್ಯಕ್ಷ, ಕನಕಶ್ರೀ ಚಾರಿಟಬಲ್ ಟ್ರಸ್ಟ್, ಕೇರ್ ಆಫ್ ಕನಕಶ್ರೀ ಗೃಹ ನಿರ್ಮಾಣ ಸಹಕಾರ ಸಂಘ, ನಂ.20/31, 6ನೇ ಮುಖ್ಯರಸ್ತೆ, 80 ಅಡಿ ರಸ್ತೆ, ಕೆ.ಎಚ್.ಬಿ ಕಾಲೊನಿ– 1ನೇ ಹಂತ, ಬಸವೇಶ್ವರ ನಗರ, ಬೆಂಗಳೂರು – 560079 ಇಲ್ಲಿಗೆ ಅಂಚೆಯ ಮೂಲಕ ಅಥವಾ ಖುದ್ದಾಗಿ ತಲುಪಿಸಬಹುದು. ಹೆಚ್ಚಿನ ಮಾಹಿತಿಗೆ 9483425046, 94845101696 ಸಂಪರ್ಕಿಸಬಹುದು ಎಂದು ಟ್ರಸ್ಟ್ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ

ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದ್ದ ಶರಣರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು 12ನೇ ಶತಮಾನದಲ್ಲಿ ಶರಣರು ನೀಡಿದ್ದರು ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ತಿಳಿಸಿದರು.

ಬಸವೇಶ್ವರ ಸೇವಾ ಸಮಿತಿ, ಅಕ್ಕನ ಬಳಗ ಮಹಿಳಾ ಸಮಾಜ, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಬೆಂಗಳೂರು ನಗರ ಘಟಕ ಶುಕ್ರವಾರ ಹಮ್ಮಿಕೊಂಡಿದ್ದ ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ ಮತ್ತು ವಿವಿಧ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮ್ಮ ಮನದೊಳಗಿನ ಕಸವನ್ನು, ಕತ್ತಲನ್ನು ದೂರ ಮಾಡಲು ಇರುವ ಬೆಳಕು ಬಸವಣ್ಣ. ಜಾತಿ, ಲಿಂಗ, ಪ್ರದೇಶ, ಧರ್ಮಗಳನ್ನು ಮೀರಿದ ಮಾನವೀಯ ತತ್ವಗಳನ್ನು ಸಾರಿದ್ದರು. ಅನುಭವ ಮಂಟಪದಲ್ಲಿ ಹೆಣ್ಣುಮಕ್ಕಳಿಗೂ ಸಮಾನ ಸ್ಥಾನಮಾನ ನೀಡಿದ್ದರು. ನಾವು ಬದುಕಬೇಕು. ಬೇರೆಯವರನ್ನು ಬದುಕಿಸಬೇಕು. ಅದಕ್ಕಾಗಿ ಕಾಯಕ ಮತ್ತು ದಾಸೋಹ ತತ್ವವನ್ನು ನೀಡಿದ್ದರು' ಎಂದು ಅವರು ನೆನಪು ಮಾಡಿಕೊಂಡರು.



ತಿಪ್ಪೇಶಪ್ಪ (ಕಾಯಕ ಯೋಗಿ), ಡಾ. ಶಾಲಿನಿ (ಅಕ್ಕಮಹಾದೇವಿ ಪ್ರಶಸ್ತಿ), ಅರವಿಂದ ಜತ್ತಿ(ಬಸವಶ್ರೀ) ಮತ್ತು ಟಿ.ಪಿ. ಕಲ್ಲೇಶ್ (ಕಾಯಕ ರತ್ನ) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು
– ಪ್ರಜಾವಾಣಿ ಚಿತ್ರ

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರಿಗೆ 'ಬಸವಶ್ರೀ' ಪ್ರಶಸ್ತಿ, ಐಸಿಎಟಿಟಿ ಫೌಂಡೇಶನ್ ಅಧ್ಯಕ್ಷೆ ಡಾ. ಶಾಲಿನಿ ಅವರಿಗೆ 'ಅಕ್ಕಮಹಾದೇವಿ' ಪ್ರಶಸ್ತಿ, ಫೈನ್ ಟೂಲ್ಸ್ ಇಂಡಿಯಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಟಿ.ಪಿ. ಕಲ್ಲೇಶ್ ಅವರಿಗೆ ಶಿವಕುಮಾರ ಸ್ವಾಮೀಜಿ ನೆನಪಿನಲ್ಲಿ 'ಕಾಯಕ ರತ್ನ' ಪ್ರಶಸ್ತಿ, ಕೈಗಾರಿಕೋದ್ಯಮಿ ತಿಪ್ಪೇಶಪ್ಪ ಅವರಿಗೆ ಸಿದ್ಧಲಿಂಗ ಸ್ವಾಮೀಜಿ ಹೆಸರಿನಲ್ಲಿ 'ಕಾಯಕ ಯೋಗಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ವಿಶ್ವನಾಥಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ವೀರಶೈವ–ಲಿಂಗಾಯತ ಮಹಾಸಭಾ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ, ಕಾಯಕ ಸೇವಾ ಟ್ರಸ್ಟ್ ಅಧ್ಯಕ್ಷ ಸಿ. ಮಹಾಂತೇಶ್, ಅಬ್ಬಿಗೆರೆ ವೀರಶೈವ ಸಂಘದ ಅಧ್ಯಕ್ಷ ರಾಜೇಂದ್ರ, ಅಕ್ಕನ ಬಳಗದ ಅಧ್ಯಕ್ಷೆ ಜಗದಾಂಬ ಸಿದ್ಧವೀರಪ್ಪ ಭಾಗವಹಿಸಿದ್ದರು.

ಬಸ್ ಚಾಲಕನ ಮೇಲೆ ಕಾನ್‌ಸ್ಟೆಬಲ್ ಹಲ್ಲೆ

ಚಿಂತಾಮಣಿ: ಕಾನ್‌ಸ್ಟೆಬಲ್ ಒಬ್ಬರು ರಸ್ತೆಯಲ್ಲಿ ಖಾಸಗಿ ಬಸ್ ಚಾಲಕರೊಬ್ಬರ ಮೇಲೆ ಶುಕ್ರವಾರ ಹಿಗ್ಗಾಮುಗ್ಗಾ ಥಳಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ಬಾಲಾಜಿ ಎಂಬುವರು ಖಾಸಗಿ ಬಸ್ ಚಾಲಕ ಮಂಜುನಾಥ್ ಮೇಲೆ ಹಲ್ಲೆ ನಡೆಸಿದ್ದು ದೂರು ದಾಖಲಾಗಿದೆ.

ಬಸ್ ಶುಕ್ರವಾರ ಬೆಳಗ್ಗೆ 6ಕ್ಕೆ ಚೇಳೂರು ತಾಲ್ಲೂಕಿನ ಬಿಳ್ಳೂರಿನಿಂದ ಹೊರಟು ಚಿಂತಾಮಣಿ ತಾಲ್ಲೂಕಿನ ಸಿದ್ದೇಪಲ್ಲಿ ಕ್ರಾಸ್ ಬಳಿ ಬಸ್‌ಗೆ ನಾಯಿ ಅಡ್ಡಬಂದು ಮೃತಪಟ್ಟಿದೆ.

ಚಾಲಕ ಮಂಜುನಾಥ್ ಬಸ್ ನಿಲ್ಲಿಸಿ ಇಳಿದು ಬರುತ್ತಿದ್ದಾಗ ಕಾನ್‌ಸ್ಟೆಬಲ್ ಬಾಲಾಜಿ ಅಡ್ಡಗಟ್ಟಿ, 'ನಮ್ಮ ನಾಯಿಯನ್ನು ಸಾಯಿಸಿದ್ದೀಯಾ' ಎಂದು ಬಾಯಿಗೆ ಬಂದಂತೆ ನಿಂದಿಸಿದ್ದಾರೆ. ಕ್ಷಮೆ ಕೇಳಿದರೂ ಸಾರ್ವಜನಿಕ ರಸ್ತೆಯಲ್ಲೇ ಹಲ್ಲೆ ನಡೆಸಿದ್ದಾರೆ.

ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಐಐಎಚ್‌ಆರ್: ಒಂದೇ ಸೂರಿನಡಿ ಮಾವು, ಬಾಳೆ, ಹಲಸಿನ ನೂರಾರು ತಳಿಗಳ ಪ್ರದರ್ಶನ

ತ್ರಿಫಲ ಮೇಳದಲ್ಲಿ 'ತಳಿ ವೈವಿಧ್ಯದ' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಾಯ್ಲೆಂಡ್‌ನ ನ್ಯಾಮ್‌ಡಕ್, ಗೌರಮತಿ, ರೆಡ್ ಐವರಿ, ಜಪಾನಿನ ಮಿಯಾಜಾಕಿ ಸೇರಿದಂತೆ ಭಾರತದ ವಿವಿಧ ಪ್ರದೇಶಗಳಲ್ಲಿ ಬೆಳೆಯುವ ಮಾವಿನ ತಳಿಯ ಹಣ್ಣುಗಳು, ನೂರಾರು ತಳಿಗಳ ಬಾಳೆ–ಹಲಸಿನ ಹಣ್ಣುಗಳನ್ನು ಒಂದೇ ವೇದಿಕೆಯಲ್ಲಿ ನೋಡುವ ಅವಕಾಶ ಕಲ್ಪಿಸಿದೆ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್).

ಹೌದು, ಹೆಸರಘಟ್ಟದ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ತಿರುಚ್ಚಿಯ ಬಾಳೆ ಸಂಶೋಧನಾ ಕೇಂದ್ರ ಸಹಯೋಗದಲ್ಲಿ ಆಯೋಜಿಸಿರುವ 'ತ್ರಿಫಲ ವೈವಿಧ್ಯ ಮೇಳ'ದಲ್ಲಿ ಬಾಳೆ, ಮಾವು ಹಾಗೂ ಹಲಸಿನ ತಳಿ ವೈವಿಧ್ಯ ಲೋಕವೇ ಅನಾವರಣಗೊಂಡಿದೆ. ಶುಕ್ರವಾರದಿಂದ ಶುರುವಾಗಿರುವ ಈ ಮೇಳ ಮೂರು ದಿನಗಳವರೆಗೂ ನಡೆಯಲಿದೆ. ಮೇಳಕ್ಕೆ ಭೇಟಿ ನೀಡಿದವರಿಗೆ ತಳಿಗಳ ವೈವಿಧ್ಯದ ದರ್ಶನದ ಜೊತೆಗೆ, ಮಾಹಿತಿಯೂ ಲಭ್ಯವಿದೆ.

ಮೇಳದಲ್ಲಿ ಭೌಗೋಳಿಕ ಮಾನ್ಯತೆ ಹೊಂದಿರುವ (ಜಿಐ ಟ್ಯಾಗ್) ಕರ್ನಾಟಕದ ನಂಜನಗೂಡಿನ ರಸಬಾಳೆ, ಕಮಲಾಪುರದ ಕೆಂಪುಬಾಳೆ, ಕನ್ಯಾಕುಮಾರಿಯ ಮಟ್ಟಿ ಸಿರುಮಲೈ, ತಮಿಳುನಾಡಿನ ವಿರೂಪಾಕ್ಷಿ ಬಾಳೆ, ಗೋವಾದ ಮೈನಡೋಲಿ, ಕೇರಳದ ತ್ರಿಶೂರನ ಚಂಗಲಿಕೊಡನ್ ಬಾಳೆ, ಮಹಾರಾಷ್ಟ್ರದ ಜಲಗಾಂವ್ ಜಿಐ ಟ್ಯಾಗ್ ಪಡೆದ ಬಾಳೆ ಹಣ್ಣುಗಳ ದರ್ಬಾರ ಜೋರಾಗಿದೆ. 100ಕ್ಕೂ ಹೆಚ್ಚಿನ ಬಾಳೆ ಹಣ್ಣುಗಳ ಪ್ರದರ್ಶನ ನೋಡಗರ ಗಮನ ಸೆಳೆಯುತ್ತಿದೆ.

ಈ ಬಾಳೆ ವೈವಿಧ್ಯದಲ್ಲಿ 'ಪರಿಮಳ'ದಿಂದಲೇ ಗಮನ ಸೆಳೆದಿದ್ದು ಕಾವೇರಿ ಸುಗಂಧಂ ಬಾಳೆ. ಇದು ತಮಿಳುನಾಡಿನ ಕೊಲ್ಲಿ ಬೆಟ್ಟಗಳ ಪ್ರದೇಶದಲ್ಲಿ ಬೆಳೆಯುವ ತಳಿ. ಈ ತಳಿಯ ಹಣ್ಣನ್ನು ಕತ್ತರಿಸಿ ಇಟ್ಟರೆ,100 ಮೀಟರ್‌ವರೆಗೂ ಪರಿಮಳ ಪಸರಿಸುತ್ತದೆ.

ಮಾವಿನ ತಳಿಗಳ ಲೋಕ: ಪ್ರದರ್ಶನದಲ್ಲಿ ಮಹಾರಾಷ್ಟ್ರದ ಅಲ್ಫಾನ್ಸೊ, ಅಂಕೋಲಾದ ಕರಿಇಶಾದ್, ರತ್ನಗಿರಿ ಸೇರಿದಂತೆ 10ಕ್ಕೂ ಹೆಚ್ಚು ಬಗೆಯ ಜಿಐ ಟ್ಯಾಗ್ ಪಡೆದಿರುವ ಮಾವಿನ ಹಣ್ಣುಗಳಿವೆ. ದೇಶ–ವಿದೇಶ, ಪ್ರಾದೇಶಿಕವಾಗಿ ಬೆಳೆಯುವ 300ಕ್ಕೂ ಹೆಚ್ಚು ಮಾವಿನ ತಳಿಗಳ ಹಣ್ಣುಗಳು ಪ್ರದರ್ಶನದಲ್ಲಿವೆ. ಇವುಗಳ ಜೊತೆಗೆ, ಕರ್ನಾಟಕದ ವಿಶಿಷ್ಟ ತಳಿ ಅಪ್ಪೆಮಿಡಿಯೂ ಇದೆ. ಉಪ್ಪಿನಕಾಯಿಗೆ ಬಳಸುವ ಮಾವಿನ ತಳಿಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುವ ಫಲಕಗಳನ್ನು ಅಳವಡಿಸಲಾಗಿದೆ. ಇದರ ಜೊತೆಗೆ ಮಾವಿನ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳು ಪ್ರದರ್ಶನದಲ್ಲಿವೆ.

ಹಲಸು ವೈವಿಧ್ಯ : ನೂರು ವಿವಿಧ ಬಗೆಯ ಹಲಸಿನ ಹಣ್ಣು ಹಾಗೂ ಅದರ ಸಸಿಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಹಲಸಿನ ಹಣ್ಣಿನ ತೊಳೆಯ ಬಣ್ಣ, ತೂಕ, ರುಚಿ, ಗಾತ್ರದ ಆಧಾರದ ವೈಶಿಷ್ಟ್ಯದ ಮೇಲೆ ಆಯ್ಕೆ ಮಾಡಲಾದ ಹಣ್ಣುಗಳ ಮೇಳದಲ್ಲಿವೆ. 40 ಕೆ.ಜಿಗಿಂತ ಹೆಚ್ಚು ತೂಕವಿರುವ ಹಾಗೂ ದೊಡ್ಡ ಗಾತ್ರದ ಹಲಸಿನ ಹಣ್ಣು ಮತ್ತು ನೂರಾರು ಬಗೆಯ ಮಾವು ಮತ್ತು ಬಾಳೆ ಹಣ್ಣುಗಳನ್ನು ಮೇಳಕ್ಕೆ ಬಂದಿದ್ದ ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸಿದರು.

ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದ ರೈತರು ಮೇಳದಲ್ಲಿ ಭಾಗವಹಿಸಿ, ವಿಜ್ಞಾನಿಗಳಿಂದ ಹಣ್ಣುಗಳು ಮತ್ತು ಅವುಗಳ ಬೆಳೆಯುವ ವಿಧಾನದ ಬಗ್ಗೆ ಮಾಹಿತಿ ಪಡೆದುಕೊಂಡರು.



ಮೇಳದಲ್ಲಿ ಹಲಸಿನ ಹಣ್ಣನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ಮಕ್ಕಳು –ಪ್ರಜಾವಾಣಿ ಚಿತ್ರ / ಕಿಶೋರ್ ಕುಮಾರ್ ಬೋಳಾರ್

ಬಾಳೆ ಹಣ್ಣಿನ ಶಾಂಪೂ, ಸಾಬೂನ್

ತಿರುಚ್ಚಿಯ ಬಾಳೆ ಸಂಶೋಧನಾ ಕೇಂದ್ರದವು ಬಾಳೆಯಿಂದ ತಯಾರಿಸಿದ ಶಾಂಪೂ, ಸಾಬೂನ್, ಮುಖಕ್ಕೆ ಹಚ್ಚುವ ಕ್ರೀಂ ಸೇರಿದಂತೆ ಇತರೆ ಮೌಲ್ಯವರ್ಧಿತ ಉತ್ಪನ್ನಗಳು ಮೇಳದಲ್ಲಿ ನೋಡುಗರ ಗಮನ ಸೆಳೆಯುತ್ತಿವೆ.

ಮುಖಕ್ಕೆ ಹಚ್ಚುವ 50 ಗ್ರಾಂ ಕ್ರೀಂಗೆ ₹399, 100 ಎಂ.ಎಲ್ ಶ್ಯಾಂಪೂಗೆ ₹349, 100 ಗ್ರಾಂ ಸಾಬೂನಿಗೆ ₹149 ದರವಿದೆ. ಬಾಳೆ ಹಣ್ಣಿನಲ್ಲಿ ವಿಟಮಿನ್ ಬಿ6, ವಿಟಮಿನ್ ಸಿ, ಪೊಟ್ಯಾಸಿಯಂ, ಡಯಟರಿ ಫೈಬರ್ ಮತ್ತು ಮೆಗ್ನೀಷಿಯಂ ಅಧಿಕ ಪ್ರಮಾಣದಲ್ಲಿ ಇರುತ್ತದೆ. ವಿವಿಧ ಪೋಷಕಾಂಶಗಳನ್ನು ಒಳಗೊಂಡಿರುವ ಬಾಳೆ ಹಣ್ಣು ಕೇವಲ ತಿನ್ನುವುದಕ್ಕಷ್ಟೇ ಅಲ್ಲದೇ, ಸೌಂದರ್ಯ ಚಿಕಿತ್ಸೆಗೂ ಬಳಸಬಹುದು ಎಂದು ಕೇಂದ್ರದ ಹರೀಶ್ವರ ಮಾಹಿತಿ ಮಾಹಿತಿ ನೀಡಿದರು.

ಕಡಿಮೆ ಕೊಬ್ಬಿನಂಶದ ಬಾಳೆ ಚಿಪ್ಸ್

ಬಾಳೆ ಹಣ್ಣಿನಿಂದ ತಯಾರಿಸುವ ಲೋಫ್ಯಾಟ್ ಬಾಳೆ ಚಿಪ್ಸ್ ತಂತ್ರಜ್ಞಾನವನ್ನು ತಮಿಳುನಾಡಿನ ತಿರುಚ್ಚಿಯ ರಾಷ್ಟ್ರೀಯ ಬಾಳೆ ಸಂಶೋಧನಾ ಕೇಂದ್ರ ಮಾರುಕಟ್ಟೆಗೆ ಪರಿಚಯಿಸಿದೆ. 'ಈ ತಂತ್ರಜ್ಞಾನದ ಮೂಲಕ ಶೇ 25ರಷ್ಟು ಕಡಿಮೆ ಎಣ್ಣೆ ಬಳಸಿಕೊಂಡು ಕಡಿಮೆ ಕೊಬ್ಬಿನಂಶವಿರುವ ಬಾಳೆ ಚಿಪ್ಸ್ ತಯಾರಿಸಲಾಗುತ್ತಿದೆ. ಈ ಚಿಪ್ಸ್‌ನಲ್ಲಿ ರುಚಿ, ಪರಿಮಳ, ಬಣ್ಣದಲ್ಲಿ ಯಾವುದೇ ರೀತಿಯ ವ್ಯತ್ಯಾಸವಿಲ್ಲ' ಎಂದು ವಿಜ್ಞಾನಿಗಳು ತಿಳಿಸಿದರು.



ವಿವಿಧ ಬಗೆಯ ಬಾಳೆಹಣ್ಣು ತಳಿಗಳನ್ನು ವೀಕ್ಷಿಸುತ್ತಿರುವ ಸಾರ್ವಜನಿಕರು –ಪ್ರಜಾವಾಣಿ ಚಿತ್ರ



'ಒಂದೆಡೆ' ಸಂಸ್ಥೆ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಅಕ್ಕಯ್_ಕರುಣೆಗೊಂದು ಸವಾಲು' ಪುಸ್ತಕವನ್ನು ನಟ 'ಡಾಲಿ' ಧನಂಜಯ್ ಬಿಡುಗಡೆ ಮಾಡಿದರು. ರಕ್ಷಿತಾ, ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಮಂಜುನಾಥ್ ಗೌಡ ಮತ್ತು ಲಕ್ಷ್ಮಣ್ ಮಾಳವಿಕಾ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

8, 9ಕ್ಕೆ ಸಂಧಿವಾತ ತಪಾಸಣಾ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಕಾಲಭೈರವೇಶ್ವರ ಸ್ವಾಮಿ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಜೂನ್ 8 ಮತ್ತು 9ರಂದು ಸಂಧಿವಾತ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬೆರಳ ಸಂಧಿ, ಮಂಡಿ, ಭುಜಗಳಲ್ಲಿ ನೋವು, ಊತ, ಮುಂಜಾನೆ ಸಮಯದಲ್ಲಿ ಹಿಡಿತ ಉಂಟಾಗುವುದೆಲ್ಲ ಸಂಧಿವಾತದ ಲಕ್ಷಣಗಳಾಗಿವೆ. ಆಸಕ್ತರು ಶಿಬಿರದಲ್ಲಿ ಭಾಗವಹಿಸಬಹುದು. ತಪಾಸಣೆ, ರಕ್ತ ಪರೀಕ್ಷೆ, ಚಿಕಿತ್ಸಾ ಯೋಜನೆಗಳು, ಫಿಸಿಯೋಥೆರಪಿ ಮತ್ತು ವ್ಯಾಯಾಮದ ಮಾರ್ಗದರ್ಶನಗಳನ್ನು ಶಿಬಿರದಲ್ಲಿ ನೀಡಲಾಗುವುದು.

ಆಸಕ್ತರು ಮಾಹಿತಿಗಾಗಿ 080 23384666, ಮೊಬೈಲ್: 94823 98296 ಸಂಪರ್ಕಿಸಬಹುದು ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ.

ಬೈಕ್ ಕದ್ದು ತಮಿಳುನಾಡಿನಲ್ಲಿ ಮಾರಾಟ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ಬೈಕ್ ಕದ್ದುಕೊಂಡು ಹೋಗಿ ತಮಿಳುನಾಡಿನ ಗ್ರಾಮಗಳಲ್ಲಿ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ರವಿಚಂದ್ರ ಅಲಿಯಾಸ್ ಕುಂಟ (21), ಮೋಹನ್ ಕುಮಾರ್ ಅಲಿಯಾಸ್ ಬುಲೆಟ್ (29) ಬೆಂಗಳೂರಿನ ನಾಗನಾಥಪುರದ ಗೋವಿಂದರಾಜು ಅಲಿಯಾಸ್ ಶಿವ (19) ಹಾಗೂ ಗೋವಿಂದಶೆಟ್ಟಿಪಾಳ್ಯದ ಅಮೃತ್ ಕುಮಾರ್ (26) ಬಂಧಿತರು. ಇವರಿಂದ ₹ 45 ಲಕ್ಷ ಮೌಲ್ಯದ 31 ಬೈಕ್‌ಗಳು, 10 ಗ್ರಾಂ ತೂಕದ ಚಿನ್ನದ ಸರ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸುಲಿಗೆ, ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಮೋಹನ್ ಕುಮಾರ್ ಹಾಗೂ ಅಮೃತ್ ಕುಮಾರ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಜೈಲಿಗೆ ಹೋಗಿದ್ದ ಇವರಿಬ್ಬರು ಜಾಮೀನು ಮೇಲೆ ಹೊರಬಂದು ಬೈಕ್ ಕಳ್ಳತನ ಮಾಡಲಾರಂಭಿಸಿದ್ದರು' ಎಂದು ತಿಳಿಸಿದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಬೈಕ್‌ಗಳನ್ನು ಗುರುತಿಸುತ್ತಿದ್ದರು. ಹ್ಯಾಂಡಲ್ ಲಾಕ್ ಮುರಿದು ಬೈಕ್ ಕದ್ದೊಯ್ಯುತ್ತಿದ್ದರು. ತಮಿಳುನಾಡಿನ ವೇಲೂರು ಜಿಲ್ಲೆಯ ಗುಡಿಯಾತ್ತಂ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಬೈಕ್ ಮಾರಿದ್ದರು' ಎಂದರು.

ಕದ್ದ ಮೊಬೈಲ್ ಮಾರಾಟ ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಮೊಬೈಲ್‌ಗಳನ್ನು ಕದ್ದು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿ ಸಾಗರ್ (21) ಎಂಬುವವರನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನೇಪಾಳದ ಸಾಗರ್, ಮಹದೇವಪುರದಲ್ಲಿ ನೆಲೆಸಿದ್ದ. ಹಲವು ದಿನಗಳಿಂದ ಕೃತ್ಯ ಎಸಗುತ್ತಿದ್ದ ಮಾಹಿತಿ ಇದೆ. ಈತನಿಂದ ₹ 2 ಲಕ್ಷ ಮೌಲ್ಯದ 18 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಗ್ಗದಾಸನಪುರ ಬಾಲಾಜಿ ಬಡಾವಣೆಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರೊಬ್ಬರ ಮೊಬೈಲ್ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದು ತಿಳಿಸಿದರು.

'ಕಿಟಕಿ ತೆರೆದಿರುತ್ತಿದ್ದ ಮನೆಗಳು ಹಾಗೂ ಜನಸಂದಣಿ ಪ್ರದೇಶಗಳಲ್ಲಿ ಜನರ ಮೊಬೈಲ್‌ಗಳನ್ನು ಆರೋಪಿ ಕಳ್ಳತನ ಮಾಡುತ್ತಿದ್ದ. ಕದ್ದ ಮೊಬೈಲ್‌ಗಳನ್ನು ಬೆನ್ನಿಗಾನಹಳ್ಳಿಯಲ್ಲಿ ರಸ್ತೆ ಮೇಲೆ ನಿಂತು ಮಾರಾಟ ಮಾಡುತ್ತಿದ್ದ' ಎಂದು ಹೇಳಿದರು.

ಹಲ್ಲೆ ಮಾಡಿ ಪರಾರಿ: 10 ವರ್ಷದ ಬಳಿಕ ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನುಮಂತನಗರ ಠಾಣೆ ವ್ಯಾಪ್ತಿಯಲ್ಲಿ 2014ರಲ್ಲಿ ನಡೆದಿದ್ದ ಹಲ್ಲೆ ಪ್ರಕರಣದಲ್ಲಿ ಭಾಗಿಯಾಗಿ ಪರಾರಿಯಾಗಿದ್ದ ಆರೋಪಿ ಬಿ.ಆರ್. ನಟರಾಜ್ (51) ಎಂಬುವವರನ್ನು 10 ವರ್ಷಗಳ ಬಳಿಕ ಪೊಲೀಸರು ಬಂಧಿಸಿದ್ದಾರೆ.

'ಬನಶಂಕರಿ ಭವಾನಿನಗರದ ಬಿ.ಆರ್.ನಟರಾಜ್, ತಲೆಮರೆಸಿಕೊಂಡು ಓಡಾಡುತ್ತಿದ್ದ. ಇತ್ತೀಚೆಗೆ ಈತನ ಬಗ್ಗೆ ಮಾಹಿತಿ ಕಲೆಹಾಕಿ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ಮಾಡಿದ್ದ ನಟರಾಜ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಈತನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಜೈಲಿನಿಂದ ಜಾಮೀನು ಮೇಲೆ ಬಿಡುಗಡೆಗೊಂಡಿದ್ದ ಈತ, ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ' ಎಂದು ತಿಳಿಸಿದರು.

'ಆರೋಪಿ ಬಂಧನಕ್ಕೆ ನ್ಯಾಯಾಲಯದಿಂದ ವಾರಂಟ್ ಸಹ ಜಾರಿಯಾಗಿತ್ತು. ಚನ್ನಮ್ಮನಕೆರೆ ಅಚ್ಚುಕಟ್ಟು ಸಮೀಪದ ಗೌಡರಪಾಳ್ಯದಲ್ಲಿ ಇತ್ತೀಚೆಗೆ ಆರೋಪಿ ಕಾಣಿಸಿಕೊಂಡಿದ್ದ. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಸ್ಥಳಕ್ಕೆ ಹೋಗಿ ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಹೇಳಿದರು.



ಲೇಖಕಿ ರೋಹಿಣಿ ಎಸ್.ಮೂರ್ತಿ ರಚಿತ ಕೊಳಲು ಮಾಂತ್ರಿಕ ದಿ.ವಿದ್ವಾನ್ ಶಂಕರ್‌ರಾವ್ ಜೀವನ ಕುರಿತ 'ನಾದ ಯೋಗಿ ಶಂಕರ' ಪುಸ್ತಕ ಬಿಡುಗಡೆಗೊಂಡಿತು. ವಿದ್ವಾನ್ ಎ.ಶಂಕರ ರಾಮನ್, ವಿದ್ವಾನ್ ಎ.ಪಿ.ಪಾಟಕ್, ವಿದ್ವಾನ್ ಅಮೃತ್ ಎನ್., ವಿದ್ವಾನ್ ಡಿ.ವಿ.ನಾಗರಾಜ್, ಡಾ.ಹೇಮಾ ದಿವಾಕರ್, ಡಾ.ದಿವಾಕರ್ ಉಪಸ್ಥಿತರಿದ್ದರು.

ಕಾನೂನು ಬಾಹಿರವಾಗಿ ಮಕ್ಕಳು–ಯುವಜನರಿಗೆ ಮಾರಾಟ • ತಂಬಾಕು ನಿಯಂತ್ರಣ ಘಟಕದಿಂದ ಕಾರ್ಯಾಚರಣೆ

ಶಿಕ್ಷಣ ಸಂಸ್ಥೆಗಳ ಆವರಣದಲ್ಲೇ ತಂಬಾಕು ಉತ್ಪನ್ನ!

• ವರುಣ ಹೆಗಡೆ

ಬೆಂಗಳೂರು: ಶಾಲಾ–ಕಾಲೇಜುಗಳ ಆವರಣದಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆ ನಿಷೇಧಿಸಲ್ಪಟ್ಟಿದ್ದರೂ ಕಾನೂನು ಬಾಹಿರವಾಗಿ ಪೂರೈಕೆ ನಡೆಯುತ್ತಿದೆ. ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಘಟಕವು ಕೋಟ್ಪಾ ಕಾಯ್ದೆಯಡಿ (ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ ನಿಯಂತ್ರಣ ಕಾಯ್ದೆ) ಮೂರು ವರ್ಷಗಳಲ್ಲಿ 30 ಸಾವಿರಕ್ಕೂ ಅಧಿಕ ಪ್ರಕರಣ ದಾಖಲಿಸಿದೆ.

ತಂಬಾಕು ಉತ್ಪನ್ನಗಳ ಕಂಪನಿಗಳು ಮಕ್ಕಳು ಮತ್ತು ಯುವಜನರನ್ನೇ ಗುರಿಯಾಗಿಸಿಕೊಂಡು ಶಾಲಾ–ಕಾಲೇಜು ಆವರಣದಲ್ಲಿ ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡುತ್ತಿವೆ. ಇದರಿಂದಾಗಿ ಮಕ್ಕಳು ಹಾಗೂ ಯುವಜನರು ತಂಬಾಕು ಉತ್ಪನ್ನಗಳ ಸೇವನೆಯ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ರಾಜ್ಯ ತಂಬಾಕು ನಿಯಂತ್ರಣ ಘಟಕವು ಶ್ರಮಿಸುತ್ತಿದ್ದು, 2021–22ರಿಂದ 2023–24ರ ಅವಧಿಯಲ್ಲಿ ಕೋಟ್ಪಾ ಕಾಯ್ದೆಯ 6ಎ ಸೆಕ್ಷನ್ ಅಡಿ 21 ಸಾವಿರಕ್ಕೂ ಅಧಿಕ ಪ್ರಕರಣಗಳನ್ನು ದಾಖಲಿಸಿದೆ. ಈ ಪ್ರಕರಣಗಳಲ್ಲಿ ₹21 ಲಕ್ಷಕ್ಕೂ ಅಧಿಕ ದಂಡ ಸಂಗ್ರಹಿಸಿದೆ. ಕಾಯ್ದೆಯ 6ಬಿ ಸೆಕ್ಷನ್ ಅಡಿ 11 ಸಾವಿರಕ್ಕೂ ಅಧಿಕ ಪ್ರಕರಣಗಳನ್ನು ದಾಖಲಿಸಿ, ₹11 ಲಕ್ಷಕ್ಕೂ ಅಧಿಕ ದಂಡವನ್ನು ಕಲೆಹಾಕಿದೆ.

ಕೋಟ್ಪಾ ಕಾಯ್ದೆಯ 6ಎ ಸೆಕ್ಷನ್ ಪ್ರಕಾರ 18 ವರ್ಷದ ಮಕ್ಕಳಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ಅಪರಾಧ. ಕಾಯ್ದೆಯ 6ಬಿ ಸೆಕ್ಷನ್ ಪ್ರಕಾರ ಶಿಕ್ಷಣ ಸಂಸ್ಥೆಗಳ 100 ಗಜ (300 ಅಡಿ) ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಹಾಗೂ ಸೇವನೆ ಮಾಡುವಂತಿಲ್ಲ. ಸಾರ್ವಜನಿಕರ ದೂರಿನ ಆಧಾರ ಕಾನೂನು ಬಾಹಿರವಾಗಿ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿರುವ ಸ್ಥಳಕ್ಕೆ ತಂಬಾಕು ನಿಯಂತ್ರಣ ಘಟಕದ ತಂಡವು ಭೇಟಿ ನೀಡಿ, ಕೋಟ್ಪಾ ಕಾಯ್ದೆ ಅನುಸಾರ ಕ್ರಮ ಕೈಗೊಳ್ಳುತ್ತಿದೆ. ಕೆಲ ಪ್ರಕರಣಗಳಲ್ಲಿ ಸ್ವಯಂಪ್ರೇರಿತವಾಗಿಯೂ ದೂರು ದಾಖಲಿಸಿಕೊಂಡು, ದಂಡ ಹಾಕಿದೆ. ಇದರಿಂದಾಗಿ ರಾಜ್ಯದಲ್ಲಿ ಕಾಯ್ದೆಯಡಿ ದಾಖಲಾಗುತ್ತಿರುವ ಪ್ರಕರಣ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.

ಕ್ಯಾನ್ಸರ್ ಪ್ರಕರಣ ಹೆಚ್ಚಳ: ತಂಬಾಕು ಉತ್ಪನ್ನಗಳ ಬಳಕೆಯು ಕ್ಯಾನ್ಸರ್ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ವಾರ್ಷಿಕ 87 ಸಾವಿರಕ್ಕೂ ಅಧಿಕ ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿವೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪ್ರಕಾರ ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ದೃಢಪಡುತ್ತಿರುವ ಒಟ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 31.9ರಷ್ಟು ಪ್ರಕರಣಗಳು ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳಾಗಿವೆ.

ಕಿದ್ವಾಯಿ ಸಂಸ್ಥೆಯಲ್ಲಿ ವಾರ್ಷಿಕ ಸರಾಸರಿ 21 ಸಾವಿರ ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ವರದಿಯಾಗುತ್ತಿದ್ದು, 3.6 ಲಕ್ಷ ಮಂದಿ ಫಾಲೋ ಅಪ್ ಚಿಕಿತ್ಸೆಗೆ ಭೇಟಿ ನೀಡುತ್ತಿದ್ದಾರೆ. ಪುರುಷರಲ್ಲಿ ವರದಿಯಾಗುತ್ತಿರುವ ಒಟ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 10.5ರಷ್ಟು ಬಾಯಿಗೆ ಸಂಬಂಧಿಸಿದ ಕ್ಯಾನ್ಸರ್ ಪ್ರಕರಣಗಳಾದರೆ, ಶೇ 10.2 ರಷ್ಟು ಪ್ರಕರಣಗಳು ಶ್ವಾಸಕೋಶಕ್ಕೆ ಸಂಬಂಧಿಸಿದ ಪ್ರಕರಣಗಳಾಗಿವೆ.

'ತಂಬಾಕು ಕಂಪನಿಗಳು ಆಕರ್ಷಕ ಜಾಹೀರಾತುಗಳ ಮೂಲಕ ಜನರನ್ನು ಸೆಳೆಯುತ್ತಿವೆ. ತಂಬಾಕು ಉತ್ಪನ್ನಗಳನ್ನು ಬಳಸುವಂತೆ ಯುವಜನರು ಮತ್ತು ಮಕ್ಕಳಿಗೆ ಆಮಿಷ ಒಡ್ಡಲಾಗುತ್ತಿದೆ. ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಶಿಕ್ಷಣ ಸಂಸ್ಥೆಗಳು, ಪೋಷಕರು ಕೈಜೋಡಿಸಬೇಕು' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.



ಕಾನೂನು ಬಾಹಿರವಾಗಿ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ

ಡಾ. ರಜನಿ ಪಿ., ಮಾನಸಿಕ ಆರೋಗ್ಯ ವಿಭಾಗ ಹಾಗೂ ರಾಜ್ಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಉಪನಿರ್ದೇಶಕಿ, ಆರೋಗ್ಯ ಇಲಾಖೆ

ಆ್ಯಪ್ ಮೂಲಕ ದೂರು ದಾಖಲು

ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆ ತಡೆಗೆ ರಾಜ್ಯ ತಂಬಾಕು ನಿಯಂತ್ರಣ ಘಟಕ 'ಸ್ಟಾಪ್ ಟೊಬ್ಯಾಕೊ' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವವರು ಮತ್ತು ಸೇವಿಸುತ್ತಿರುವವರ ವಿರುದ್ಧ ಈ ಆ್ಯಪ್ ನೆರವಿನಿಂದ ಜನರೇ ದೂರು ದಾಖಲಿಸಬಹುದಾಗಿದೆ. ಕಳೆದ ಆರು ತಿಂಗಳಲ್ಲಿ ಈ ಆ್ಯಪ್ ಮೂಲಕ ಘಟಕವು ನೂರಕ್ಕೂ ಅಧಿಕ ದೂರುಗಳನ್ನು ಸ್ವೀಕರಿಸಿದೆ. ದೂರಿನ ಆಧಾರದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ತಂಡ ಸ್ಥಳಕ್ಕೆ ಭೇಟಿ ನೀಡಿ, ಕೋಟ್ಪಾ ಕಾಯ್ದೆ ಅನುಸಾರ ಕ್ರಮ ಕೈಗೊಳ್ಳುತ್ತಿದೆ.

'ಈ ಆ್ಯಪ್ ಮೂಲಕ ಸುಲಭವಾಗಿ ದೂರು ದಾಖಲಿಸುವ ಅವಕಾಶ ನೀಡಲಾಗಿದೆ. ನಿಗದಿತ ಸ್ಥಳದಿಂದ ಸೆಲ್ಫಿ ಕೂಡ ಅಪ್ಲೋಡ್ ಮಾಡಬಹುದಾಗಿದೆ. ದಾಖಲಾದ ಪ್ರಕರಣ ಯಾವ ಹಂತದಲ್ಲಿದೆ ಎಂಬ ಮಾಹಿತಿಯೂ ದೊರೆಯುತ್ತದೆ. ನಿಗದಿತ ಸ್ಥಳದ ಫೋಟೊ ದೊಂದಿಗೆ ದೂರು ದಾಖಲಿಸಿದ ಬಳಿಕ ಆ್ಯಪ್‌ನಲ್ಲಿ ದೂರಿಗೆ ಸಂಬಂಧಿಸಿದ ಕೆಲವೊಂದು ಪೂರಕ ಮಾಹಿತಿ ಸಲ್ಲಿಸುವ ಅವಕಾಶವಿದೆ. ದೂರು ನೀಡಿದವರ ಮಾಹಿತಿಯನ್ನು ತಂಬಾಕು ನಿಯಂತ್ರಣ ತಂಡ ಗೌಪ್ಯವಾಗಿ ಇಡಲಿದೆ' ಎಂದು ಘಟಕದ ಅಧಿಕಾರಿಯೊಬ್ಬರು ತಿಳಿಸಿದರು.

ಕೋಟ್ಪಾ ಕಾಯ್ದೆಯಡಿ ದಾಖಲಾದ ಪ್ರಕರಣ

ವರ್ಷ	6ಎ ಅಡಿ ದಾಖಲಾದ ಪ್ರಕರಣ	ದಂಡ	6ಬಿ ಅಡಿ ದಾಖಲಾದ ಪ್ರಕರಣ	ದಂಡ
2021-22	6,790	₹6.43 ಲಕ್ಷ	3,404	₹3.63 ಲಕ್ಷ
2022-23	7,173	₹7.19 ಲಕ್ಷ	4,077	₹4.32 ಲಕ್ಷ
2023-24	7,651	₹7.64 ಲಕ್ಷ	3,856	₹3.60 ಲಕ್ಷ



'ಸ್ಟಾಪ್ ಟೊಬ್ಯಾಕೊ' ಮೊಬೈಲ್ ಆ್ಯಪ್ ಕ್ಯೂಆರ್ ಕೋಡ್

ಸುದ್ದಿ 2 ನಿಮಿಷ

ಶಾಮನೂರು ಆರೋಗ್ಯದಲ್ಲಿ ಏರುಪೇರು: ಆಸ್ಪತ್ರೆಗೆ ದಾಖಲು

ದಾವಣಗೆರೆ: ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಅನಾರೋಗ್ಯದಿಂದ ಶುಕ್ರವಾರ ಆಸ್ಪತ್ರೆಗೆ ದಾಖಲಾದರು.

ಎರಡು ದಿನಗಳಿಂದ ಅವರಿಗೆ ಸುಸ್ತಾಗಿತ್ತು. ಇಲ್ಲಿನ ಎಸ್‌.ಎಸ್‌. ಹೈಟೆಕ್ ಆಸ್ಪತ್ರೆಯಲ್ಲಿ ತಪಾಸಣೆ ಒಳಪಡಿಸಿದಾಗ ಹೃದಯ ಬಡಿತದಲ್ಲಿ ತುಸು ಸಮಸ್ಯೆ ಇರುವುದು ಕಂಡುಬಂತು. ವೈದ್ಯರು ತಾತ್ಕಾಲಿಕ ಪೇಸ್‌ಮೇಕರ್ ಅಳವಡಿಸಿದ ನಂತರ ಹೃದಯ ಬಡಿತ ಸಹಜ ಸ್ಥಿತಿಗೆ ಮರಳಿದೆ. ನಂತರ ಅವರನ್ನು ಕಾರಿನಲ್ಲಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅಲ್ಲಿ ಅವರಿಗೆ ಶಾಶ್ವತ ಪೇಸ್‌ಮೇಕರ್ ಅಳವಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

'ಇದು ವಯೋಸಹಜ ಆರೋಗ್ಯ ಸಮಸ್ಯೆಯಾಗಿದೆ. ಅವರು ಮಾತನಾಡುತ್ತಿದ್ದು, ಆತಂಕಪಡುವ ಅಗತ್ಯವಿಲ್ಲ. ಒಂದೆರಡು ದಿನಗಳಲ್ಲಿ ಅವರು ದಾವಣಗೆರೆಗೆ ವಾಪಸಾಗಲಿದ್ದಾರೆ' ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.



ಎಸ್‌.ಎಸ್‌. ಮಲ್ಲಿಕಾರ್ಜುನ್ ಆಸ್ಪತ್ರೆಗೆ ದಾಖಲಾಗಿಲ್ಲ: ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ಅವರು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಕೆಲವು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದು, ಇದು ಸತ್ಯಕ್ಕೆ ದೂರವಾಗಿದೆ. ಅವರು ಆರೋಗ್ಯವಾಗಿದ್ದಾರೆ. ಪಕ್ಷದ ಮುಖಂಡರು, ಕಾರ್ಯಕರ್ತರು, ಎಸ್‌.ಎಸ್‌.ಎಂ ಅಭಿಮಾನಿಗಳು ಯಾರೂ ಆತಂಕಕ್ಕೆ ಒಳಗಾಗ ಬಾರದು ಎಂದು ಮಲ್ಲಿಕಾರ್ಜುನ್ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿ ಸಾವು: ಆತ್ಮಹತ್ಯೆ ಶಂಕೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯಲ್ಲಿರುವ ವೆಗಾಸಿಟಿ ಮಾಲ್‌ನ ನಾಲ್ಕನೇ ಮಹಡಿಯಿಂದ ಜಿಗಿದು ಸುಹಾಸ್ ಅಡಿಗ (21) ಎಂಬುವವರು ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಜೆ.ಪಿ. ನಗರದ ಸುಹಾಸ್ ಅಡಿಗ, ನಗರದ ಕಾಲೇಜೊಂದರಲ್ಲಿ ಬಿ.ಕಾಂ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಶುಕ್ರವಾರ ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಕಟ್ಟಡದ ಮಹಡಿಯಿಂದ ಜಿಗಿದು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಮೈಕೊ ಲೇಔಟ್ ಠಾಣೆ ಪೊಲೀಸರು ಹೇಳಿದರು.

'ಕಾಲೇಜಿನಲ್ಲಿ ಇತ್ತೀಚೆಗೆ ಕ್ಯಾಂಪಸ್ ಸಂದರ್ಶನ ಏರ್ಪಡಿಸಲಾಗಿತ್ತು. ಇದರಲ್ಲಿ ಪಾಲ್ಗೊಂಡಿದ್ದ ಸುಹಾಸ್ ಅವರಿಗೆ ಯಾವುದೇ ಕೆಲಸ ಸಿಕ್ಕಿರಲಿಲ್ಲ. ಇದರಿಂದ ಅವರು ನೊಂದಿದ್ದರು ಎನ್ನಲಾಗುತ್ತಿದೆ.'

'ಶುಕ್ರವಾರ ಮಧ್ಯಾಹ್ನ ಸ್ನೇಹಿತರೊಬ್ಬರಿಗೆ ಕರೆ ಮಾಡಿದ್ದ ಸುಹಾಸ್, 'ಕ್ಯಾಂಪಸ್ ಸಂದರ್ಶನ ಆಗದಿರುವುದಕ್ಕೆ ಬೇಸರವಾಗಿದೆ' ಎಂಬುದಾಗಿ ಅಳಲು ತೋಡಿಕೊಂಡಿದ್ದರು. ಸುಹಾಸ್ ಸ್ನೇಹಿತರು, ಕುಟುಂಬಸ್ಥರಿಂದ ಹೇಳಿಕೆ ಪಡೆಯಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಅಗ್ನಿಕುಂಡ ಪ್ರವೇಶ 34 ಮಂದಿಗೆ ಸುಟ್ಟ ಗಾಯ

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ತಾಲ್ಲೂಕಿನ ಕೆರಸಿಮಂಗಲ ಗ್ರಾಮದಲ್ಲಿ ಗುರುವಾರ ರಾತ್ರಿ ಅಗ್ನಿಕುಂಡ ಹಾಯುವಾಗ 34 ಮಂದಿಗೆ ಸುಟ್ಟ ಗಾಯ ಆಗಿದೆ.

ಚೌಡೇಶ್ವರಿ ದೀಪೋತ್ಸವ ಹಾಗೂ ಅಗ್ನಿಕುಂಡ ಪ್ರವೇಶ ಸಂಪ್ರದಾಯದಂತೆ 40 ವರ್ಷಗಳಿಂದ ಆಚರಿಸಲಾಗುತ್ತಿದೆ. ಎಂದಿನಂತೆ ಗುರುವಾರ ರಾತ್ರಿ ದೀಪೋತ್ಸವ ನಂತರ ಮಹಿಳೆಯರು ಹಾಗೂ ಪುರುಷರು ಅಗ್ನಿಕುಂಡ ಹಾಯ್ದು ಮೇಲೆ ಕಾಲುಗಳಿಗೆ ಸುಟ್ಟ ಗಾಯ ಆಗಿದೆ.

ಘಟನೆಯಲ್ಲಿ 34 ಮಂದಿಗೆ ಸಣ್ಣ ಪ್ರಮಾಣದಲ್ಲಿ ಕಾಲುಗಳು ಸುಟ್ಟಿವೆ. ಮೂವರು ಮಹಿಳೆಯರಿಗೆ ಹೆಚ್ಚು ಪ್ರಮಾಣದಲ್ಲಿ ಸುಟ್ಟಿವೆ. ನಂಗಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಯಿತು.

ತಂಬಾಕು ಉತ್ಪನ್ನ ದುಷ್ಪರಿಣಾಮ: ಅರಿವು ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಬಾಕು ಉತ್ಪನ್ನಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳು ಅವರ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರಲ್ಲಿ ಅರಿವು ಮೂಡಿಸಬೇಕು ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ಹೇಳಿದರು.

ಬಿಬಿಎಂಪಿ ಹಾಗೂ ಇತರೆ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ 'ವಿಶ್ವ ತಂಬಾಕು ರಹಿತ ದಿನ'ದ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

'ತಂಬಾಕು ಉದ್ಯಮದ ಪ್ರಭಾವದಿಂದ ಮಕ್ಕಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಎಲ್ಲಾ ನಾಗರಿಕರು ಉತ್ತಮ ಆರೋಗ್ಯಕ್ಕಾಗಿ ಮುಂದಿನ ಆರೋಗ್ಯಕರ ಸಮಾಜಕ್ಕಾಗಿ ತಂಬಾಕು ರಹಿತ ಜೀವನ ನಡೆಸಬೇಕು' ಎಂದು ಮನವಿ ಮಾಡಿದರು.

ಸ್ವಾತಂತ್ರ್ಯ ಉದ್ಯಾನದಿಂದ ಕೆ.ಆರ್ ವೃತ್ತದ ಮೂಲಕ ಕಬ್ಬನ್ ಪಾರ್ಕ್‌ನಿಂದ ಕಸ್ತೂರಬಾ ರಸ್ತೆ, ಹಡ್ಸನ್ ವೃತ್ತದಿಂದ ಟೌನ್‌ಹಾಲ್‌ವರೆಗೂ ವಾಕಥಾನ್ ಸಾಗಿತು.

ಯುನಿವರ್ಸಲ್ ನರ್ಸಿಂಗ್ ಕಾಲೇಜು, ರಾಜೀವ್ ಗಾಂಧಿ ನರ್ಸಿಂಗ್ ಕಾಲೇಜು, ಬಿಎನ್‌ಎಂ ಪದವಿ ಕಾಲೇಜು, ವೃದ್ಧಿ ನರ್ಸಿಂಗ್ ಕಾಲೇಜು, ನಾರಾಯಣ ನರ್ಸಿಂಗ್ ಕಾಲೇಜು, ಬಿಎಂಎಸ್ ಎಂಜಿನಿಯರಿಂಗ್–ನರ್ಸಿಂಗ್ ಕಾಲೇಜು, ಆರ್.ವಿ. ನರ್ಸಿಂಗ್ ಕಾಲೇಜು ಸೇರಿದಂತೆ ವಿವಿಧ ಕಾಲೇಜುಗಳಿಂದ 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮುಖ್ಯ ಆರೋಗ್ಯಾಧಿಕಾರಿ ಡಾ. ಮದನಿ, ತಂಬಾಕು ನಿಯಂತ್ರಣದ ಕಾರ್ಯಕ್ರಮ ಅಧಿಕಾರಿ ಡಾ. ಕುಮಾರ್ ಉಪಸ್ಥಿತರಿದ್ದರು.

ಬಹುಮಾನ: ವಿಶ್ವ ತಂಬಾಕು ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ನಿಧಿ ಬೇಟೆ, ರೀಲ್ಸ್ ಸ್ಪರ್ಧೆ/ಕಿರು ಚಿತ್ರ ಸ್ಪರ್ಧೆ ಹಾಗೂ ಪೋಸ್ಟರ್ ಸ್ಪರ್ಧೆ ವಿಜೇತರಿಗೆ ವಾಕಥಾನ್ ಬಳಿಕ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಯಿತು.

ನಿಧಿ ಬೇಟೆ ವಿಜೇತರು: ಪ್ರಥಮ– ನಯನ ಹಾಗೂ ಕೀರ್ತನಾ, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ₹25,000

ರನ್ನರ್ ಅಪ್: ಕೀರ್ತನಾ, ಎಐಟಿ ಎಂಜಿನಿಯರಿಂಗ್ ಕಾಲೇಜು, ₹ 5,000

ರೀಲ್ಸ್/ಕಿರು ಚಿತ್ರ ವಿಜೇತರು: ಪ್ರಥಮ– ಸಂಗೀತಾ, ₹20,000. ದ್ವಿತೀಯ– ನಾಗೇಶ್ವರಿ, ₹12,500. ತೃತೀಯ– ಅಮಲ್ ಖೈಜ್,₹7,500.

ಪೋಸ್ಟರ್ ಸ್ಪರ್ಧೆ ವಿಜೇತರು: ಪ್ರಥಮ– ಶಾಲಿನಿ ಹಾಗೂ ಮಹೇಶ, ₹ 5,000. ದ್ವಿತೀಯ– ಲಿನೇಶಾ, ₹ 3,000. ತೃತೀಯ– ಸಾಂಡ್ರಾ ಸಾಲ್ವಿಯಸ್ ಹಾಗೂ ಸೋನಾ ಆಂಟೋನಿ, ₹2,000.



'ವಿಶ್ವ ತಂಬಾಕು ರಹಿತ ದಿನ'ದ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು

ಬೇಕರಿ ಮಾಲೀಕನ ಪತ್ನಿ ಕೊಲೆ ಯತ್ನ 19 ವರ್ಷಗಳ ಬಳಿಕ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೆಲಸ ಮಾಡುತ್ತಿದ್ದ ಬೇಕರಿಯ ಮಾಲೀಕನ ಪತ್ನಿಯ ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ಆರೋಪಿ ದೊಡ್ಡೇಗೌಡ ಅಲಿಯಾಸ್ ಚಂದ್ರು (45) ಎಂಬುವವರನ್ನು ಹನುಮಂತನಗರ ಠಾಣೆ ಪೊಲೀಸರು 19 ವರ್ಷಗಳ ಬಳಿಕ ಬಂಧಿಸಿದ್ದಾರೆ.

'ಹಾಸನ ಜಿಲ್ಲೆ ಆಲೂರು ಗ್ರಾಮದ ದೊಡ್ಡೇಗೌಡ, 2005ರಲ್ಲಿ ಕೃತ್ಯ ಎಸಗಿ ಪರಾರಿಯಾಗಿದ್ದ. ಪ್ರಕರಣದ ತನಿಖೆ ಕೈಗೊಂಡಾಗ ಈತನ ಸುಳಿವು ಪತ್ತೆ-ಆಗಿರಲಿಲ್ಲ. ಬಾಕಿ ಪ್ರಕರಣಗಳ ಬಗ್ಗೆ ಇತ್ತೀಚೆಗೆ ಮರು ತನಿಖೆ ಆರಂಭಿಸಲಾಗಿತ್ತು. ಸುಳಿವು ಲಭ್ಯವಾಗುತ್ತಿದ್ದಂತೆ ಸ್ವಂತ ಊರಿನಲ್ಲಿಯೇ ದೊಡ್ಡೇಗೌಡನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಆರೋಪಿ, ಹನುಮಂತ ನಗರದ 50 ಅಡಿ ರಸ್ತೆಯ ಬೇಕರಿಯಲ್ಲಿ ಕೆಲಸಕ್ಕಿದ್ದ. ಹಣಕಾಸು ವಿಚಾರಕ್ಕಾಗಿ ಮಾಲೀಕರ ಜೊತೆ ಜಗಳ ಮಾಡಲು ಆರಂಭಿಸಿದ್ದ. ಮಾಲೀಕರು ಕೆಲಸ ಬಿಡಿಸಿದ್ದರು. ಇದರಿಂದ ಸಿಟ್ಟಾದ ಆರೋಪಿ, 2005ರ ಜನವರಿ 13ರಂದು ರಾತ್ರಿ ಮಾಲೀಕನ ಮನೆಗೆ ನುಗ್ಗಿದ್ದ. ಮಾಲೀಕರ ಪತ್ನಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ' ಎಂದರು.


ವ್ಯವಸಾಯದ ಜೊತೆ ಆಟೊ ಚಾಲನೆ: 'ನಗರ ತೊರೆದು ಸ್ವಂತ ಊರಿಗೆ ಹೋಗಿದ್ದ ಆರೋಪಿ, ಆಟೊ ಚಾಲಕನಾಗಿದ್ದ. ಜೊತೆಗೆ, ವ್ಯವಸಾಯ ಮಾಡುತ್ತಿದ್ದ. ಈ ಬಗ್ಗೆ ಮಾಹಿತಿ ಸಂಗ್ರಹಿಸಿ ಇತ್ತೀಚೆಗೆ ಈತನನ್ನು ಸೆರೆ ಹಿಡಿಯಲಾಯಿತು. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಹೇಳಿದರು.

ಬಿಸಿಯುಗೆ 2 ಘಟಕ ಕಾಲೇಜು: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕಲಾ ಕಾಲೇಜು ಹಾಗೂ ಸರ್ಕಾರಿ ರಾಮನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜುಗಳನ್ನು (ಆರ್‌.ಸಿ. ಕಾಲೇಜು) ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ಸೇರ್ಪಡೆ ಮಾಡಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಇಲಾಖೆಯ ನಿರ್ಧಾರಕ್ಕೆ ಎರಡೂ ಕಾಲೇಜುಗಳ ಅಧ್ಯಾಪಕರು, ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈಗಿರುವಂತೆಯೇ ಸ್ವತಂತ್ರವಾಗಿರಲು ಬಿಡಬೇಕು. ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿ ಸೇರ್ಪಡೆ ಮಾಡುವ ಮೂಲಕ ಮತ್ತಷ್ಟು ಸಮಸ್ಯೆಗಳಿಗೆ ದಾರಿ ಮಾಡಿಕೊಡಬಾರದು. ನಿರ್ಧಾರವನ್ನು ಪುನರ್ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ.



'ಸರ್ಕಾರಿ ಕಲಾ ಕಾಲೇಜಿನಲ್ಲಿ ಎರಡೂವರೆ ಸಾವಿರ ವಿದ್ಯಾರ್ಥಿಗಳು, ಆರ್‌.ಸಿ. ಕಾಲೇಜಿನಲ್ಲಿ ಮೂರು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪಠ್ಯಕ್ರಮ, ವಿಷಯಗಳ ಸಂಯೋಜನೆ ಮತ್ತಿತರ ಶೈಕ್ಷಣಿಕ ವಿಷಯಗಳಿಗೆ ವಿಶ್ವವಿದ್ಯಾಲಯದ ಮಾರ್ಗಸೂಚಿಗಳ ಅನ್ವಯ ಕಾರ್ಯ ನಿರ್ವಹಿಸಲಾಗುತ್ತಿದೆ. ಆದರೆ, ಯಾವುದೇ ಆಡಳಿತಾತ್ಮಕ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಕಾಲೇಜಿನ ಪ್ರಾಂಶುಪಾಲರಿಗಿದೆ. ಇದರಿಂದ ಅನುಕೂಲವಾಗಿದೆ. ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿ ಸೇರ್ಪಡೆಯಾದರೆ ಎಲ್ಲದಕ್ಕೂ ಮೇಲಿನ ಆದೇಶಕ್ಕೆ ಕಾಯಬೇಕು. ಇದು ವಿಳಂಬಕ್ಕೆ ಕಾರಣವಾಗುತ್ತದೆ' ಎನ್ನುತ್ತಾರೆ ವಿದ್ಯಾರ್ಥಿಗಳಾದ ರೋಹನ್, ಅಶೋಕ್ ರಾಜ್, ನಿರಂಜನ ಮೂರ್ತಿ.

ಘಟಕ ಕಾಲೇಜುಗಳ ಪ್ರಾಂಶುಪಾಲರು, ಪ್ರಾಧ್ಯಾಪಕರು ಅದೇ ವಿಶ್ವವಿದ್ಯಾಲಯಗಳ ಘಟಕ ಕಾಲೇಜುಗಳಿಗೆ ಮಾತ್ರ ವರ್ಗಾವಣೆ ಪಡೆಯಬಹುದು. ಈಗಿರುವಂತೆ ರಾಜ್ಯದ ಯಾವುದೇ ಕಾಲೇಜುಗಳಿಗೆ ವರ್ಗಾವಣೆ ಪಡೆಯುವ ಅವಕಾಶ ಇರುವುದಿಲ್ಲ. ಇದರಿಂದ ಕೆಲವರು ವಿರೋಧ ವ್ಯಕ್ತಪಡಿಸುತ್ತಾರೆ ಎನ್ನುವುದು ಒಂದು ವಲಯದ ಅಧ್ಯಾಪಕರ ಅನಿಸಿಕೆ.

ಐದೂವರೆ ಸಾವಿರದಷ್ಟು ವಿದ್ಯಾರ್ಥಿಗಳನ್ನು ಒಳಗೊಂಡ ಘಟಕ ಕಾಲೇಜುಗಳು ಸೇರ್ಪಡೆಯಾಗುವುದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಸಂಪನ್ಮೂಲ ಹೆಚ್ಚುವ ಜತೆಗೆ, ನಗರದ ಪ್ರಮುಖ ಸ್ಥಳಗಳಲ್ಲಿ ಇರುವ ಕಾಲೇಜುಗಳನ್ನು ಬಳಸಿಕೊಂಡು ಹೆಚ್ಚುವರಿ ಕೋರ್ಸ್‌ಗಳನ್ನು ಆರಂಭಿಸಬಹುದು. ಸಾಕಷ್ಟು ಅಭಿವೃದ್ಧಿ ಮಾಡಬಹುದು ಎನ್ನುವುದು ವಿಶ್ವವಿದ್ಯಾಲಯದ ಲೆಕ್ಕಾಚಾರ.



'ವಿಶ್ವ ತಂಬಾಕು ರಹಿತ ದಿನ'ದ ಅಂಗವಾಗಿ ಬೆಂಗಳೂರು ನಗರ ಪೊಲೀಸ್ ಚಿಕ್ಕಪೇಟೆ ಉಪವಿಭಾಗದಲ್ಲಿ ಉಪ್ಪಾರಪೇಟೆ ಪೊಲೀಸ್ ಇನ್‌ಸ್ಪೆಕ್ಟರ್ ಬಿ. ಮಾರುತಿ ನೇತೃತ್ವದಲ್ಲಿ ಪೊಲೀಸರು ಮೆಜೆಸ್ಟಿಕ್ ಸುತ್ತ ಜಾಗೃತಿ ಜಾಥಾ ನಡೆಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ವಕೀಲರ ಸರ ಕಿತ್ತೊಯ್ದಿದ್ದವರ ಬಂಧನ

ಬೆಂಗಳೂರು: ವಕೀಲರೊಬ್ಬರ ಮೇಲೆ ಹಲ್ಲೆ ನಡೆಸಿ ಅವರ ಚಿನ್ನದ ಸರವನ್ನು ಕಿತ್ತಕೊಂಡು ಹೋಗಿದ್ದ ಇಬ್ಬರು ಆರೋಪಿಗಳನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಘ್ನೇಶ್ವರನಗರದ ಜೀವನ್ (26) ಮತ್ತು ಉಲ್ಲಾಳ ಮುಖ್ಯರಸ್ತೆಯ ನಿವಾಸಿ ನಿತಿನ್ (24) ಬಂಧಿತರು. ಇವರಿಬ್ಬರಿಂದ 1 ಬೈಕ್ ಮತ್ತು 2 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಶ್ರೀನಿವಾಸನಗರದ ವಕೀಲ ಹೇಮಂತ್ ಭಾರದ್ವಾಜ್ ಅವರು ಆರಾಧನಾ ಗಾರ್ಮೆಂಟ್ಸ್ ಕಾರ್ಖಾನೆ ಬಳಿಯ ರಸ್ತೆಯಲ್ಲಿ ಮೇ 3ರಂದು ರಾತ್ರಿ 11.30 ಗಂಟೆ ಸುಮಾರಿಗೆ ಹೊರಟಿದ್ದರು. ಅದೇ ಮಾರ್ಗದಲ್ಲಿ ಆರೋಪಿಗಳು ಬೈಕ್‌ನಲ್ಲಿ ಬಂದಿದ್ದರು. ಹೇಮಂತ್ ಅವರ ಬೈಕ್‌ಗೆ ತಮ್ಮ ಬೈಕ್ ಡಿಕ್ಕಿ ಹೊಡೆಸಿದ್ದರು' ಎಂದು ತಿಳಿಸಿದರು.

'ಡಿಕ್ಕಿ ಹೊಡೆದಿದ್ದನ್ನು ಪ್ರಶ್ನಿಸಿದ್ದ ಹೇಮಂತ್ ಅವರ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರು. ನಂತರ, 40 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದರು.

ನಾಳೆವರೆಗೆ ರೆಸಾರ್ಟ್‌ನಲ್ಲಿ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಎಚ್‌.ಡಿ.ಕೋಟೆ: ತಾಲ್ಲೂಕಿನ ಬೀರಂಬಳ್ಳಿ ಗ್ರಾಮದಲ್ಲಿರುವ ಎವಾಲ್ವ್ ಬ್ಯಾಕ್ ಕಬಿನಿ ಕುರುಬ ಸಫಾರಿ ಲಾಡ್ಜ್ (ಆರೆಂಜ್ ಕೌಂಟಿ)ನಲ್ಲಿ ತಂಗಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮತ್ತು ಕುಟುಂಬದವರು ಇನ್ನೂ ಎರಡು ದಿನ ಇಲ್ಲೇ ವಿಶ್ರಾಂತಿ ತೆಗೆದುಕೊಳ್ಳಲಿದ್ದಾರೆ.

ಬುಧವಾರ ತಡ ರಾತ್ರಿ ಆಗಮಿಸಿದ್ದ ಅವರು ನಿಗದಿತ ಕಾರ್ಯಕ್ರಮದ ಅನುಸಾರ ಶುಕ್ರವಾರ ಬೆಳಿಗ್ಗೆ ರೆಸಾರ್ಟನಿಂದ ಹೊರಡಬೇಕಿತ್ತು. ಆದರೆ ಇತರ ಕಾರ್ಯಕ್ರಮಗಳನ್ನು ರದ್ದು ಪಡಿಸಿದ್ದು, ಪತ್ನಿ ಅನಿತಾ ಕುಮಾರಸ್ವಾಮಿ, ಮಗ ನಿಖಿಲ್, ಸೊಸೆ ಮತ್ತು ಮೊಮ್ಮಗನೊಂದಿಗೆ ಜೂನ್ 2ರ ತನಕ ಇರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶುಕ್ರವಾರ ಮಧ್ಯಾಹ್ನ ಸುಮಾರು 3 ಗಂಟೆಗೆ ಆರೆಂಜ್ ಕೌಂಟಿಯಿಂದ ಕಬಿನಿ ಹಿನ್ನೀರಿನಲ್ಲಿ ಪ್ರಸಿದ್ದ ಜಂಗಲ್ ಲಾಡ್ಜಸ್‌ಗೆ ಬಂದ ಅವರು, ಇಲ್ಲಿನ ಸಿಬ್ಬಂದಿಯೊಂದಿಗೆ ಫೋಟೊ ಕ್ಲಿಕ್ಕಿಸಿಕೊಂಡು, ನಂತರ ಸಫಾರಿಗೆ ತೆರಳಿದ್ದಾರೆ.

ಗುರುವಾರದಂದು ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಡಿ.ಬಿ.ಕುಪ್ಪೆ ವನ್ಯ ಜೀವಿ ವಲಯದದಲ್ಲಿ ಹುಲಿಯನ್ನು ನೋಡಿ ಸಂಭ್ರಮಿಸಿದ್ದರು.

ಸಫಾರಿ ನಡುವೆ ಕಾರಾಪುರ ಗ್ರಾಮದಲ್ಲಿ ಸಾರ್ವಜನಿಕರೊಂದಿಗೆ ಕುಮಾರಸ್ವಾಮಿ ಮಾತನಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ನಗರದಲ್ಲಿ ಇಂದು

ವಾರ್ಷಿಕ ಅಥ್ಲೆಟಿಕ್ಸ್ ಕ್ರೀಡಾಕೂಟ 2023–24: ಉದ್ಘಾಟನೆ: ಸುಂದರ್‌ರಾಜ್ ಅರಸ್, ಅತಿಥಿಗಳು: ಮೋಹನ್.ಜಿ.ಕೆ., ಅಧ್ಯಕ್ಷತೆ: ಮುದ್ದುಕೃಷ್ಣ ಕೆ.ಆರ್., ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಸ್ಥಳ: ಭಾರತೀಯ ಕ್ರೀಡಾ ಪ್ರಾಧಿಕಾರ, ಬೆಳಿಗ್ಗೆ 9

ಆಲ್ಟರ್‌ನೇಟಿವ್–24: ಉದ್ಘಾಟನೆ: ಎನ್. ಮಂಜುನಾಥ್ ಪ್ರಸಾದ್, ತುಷಾರ್ ಗಿರಿನಾಥ್, ಅತಿಥಿಗಳು: ವಿನಯ್ ಶಿಂಧೆ, ಎಂ.ಆರ್. ಶ್ರೀನಿವಾಸಮೂರ್ತಿ, ಪ್ರಿಯಾ ವೆಂಕಟೇಶ್, ಆಯೋಜನೆ: ರಾಮಯ್ಯ ವಿಶ್ವವಿದ್ಯಾಲಯ, ಸ್ಥಳ: ರಾಮಯ್ಯ ವೈದ್ಯಕೀಯ ಆಸ್ಪತ್ರೆಯ ಸಭಾಂಗಣ, ಮತ್ತಿಕೆರೆ, ಬೆಳಿಗ್ಗೆ 10ರಿಂದ

ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ 2024–2025: ಅತಿಥಿಗಳು: ರೋಹಿಣಿ ಸಿಂಧೂರಿ, ಎನ್‌.ಬಿ. ಭಟ್, ಅಧ್ಯಕ್ಷತೆ: ಅನಂತ ಕೆ. ಅತ್ರೆ, ಉಪಸ್ಥಿತಿ: ಪಿ.ಸಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ವಿಜಯ ಪದವಿ ಪೂರ್ವ ಕಾಲೇಜು, 4ನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30

ಬಿ.ಆರ್. ರೋಹಿತ್ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ: ಕೆ.ವಿ.ಲಲಿತ, ಸಿ. ರಾಜಣ್ಣ, ಪ್ರಶಸ್ತಿ ಪುರಸ್ಕೃತರು: ವಿಜಯಕುಮಾರ್ ಎಸ್.ಕೆ., ಅತಿಥಿಗಳು: ಕೆ.ಪಿ. ಕೃಷ್ಣ ಪ್ರಸಾದ್, ಉದಯ ಶಂಕರ ಪುರಾಣಿಕ್, ಅಧ್ಯಕ್ಷತೆ: ಕೆ.ವಿ.ನಾಗರಾಜ್, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಮೀಡಿಯಾ ಸ್ಟಡೀಸ್ ಆ್ಯಂಡ್ ರಿಸರ್ಚ್, ಸ್ಥಳ: ದಿ ಗ್ರೀನ್ ಪಾತ್ ಆರ್ಗಾನಿಕ್– ಹಸಿರು ತೋಟ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣದ ಎದುರು, ಬೆಳಿಗ್ಗೆ 10.30

'ಡೈವ್ ಬ್ರೌನ್' ಅವರ ವ್ಯಂಗ್ಯಚಿತ್ರಗಳ ಪ್ರದರ್ಶನ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 11

ಲಕ್ಕೂರು ಆನಂದ–ಕಾವ್ಯ ಓದು ಮತ್ತು ನುಡಿ ನೆನಪು: ಭಾಗವಹಿಸುವವರು: ಕೋಟಿಗಾನಹಳ್ಳಿ ರಾಮಯ್ಯ, ಸಿ.ಬಿ. ಹೊನ್ನು ಸಿದ್ಧಾರ್ಥ, ನಂದಕುಮಾರ್, ಸಿ.ಜಿ. ಲಕ್ಷ್ಮೀಪತಿ, ಸುಬ್ಬು ಹೊಲೆಯಾರ್, ಕಾವ್ಯ ಓದುವವರು: ಟಿ.ಎಚ್. ಲವಕುಮಾರ್, ಕೆ.ಪಿ. ಲಕ್ಷ್ಮಣ್, ಶ್ವೇತಾಮಣಿ, ಚಂದ್ರಕಲಾ, ರವಿಕುಮಾರ್ ಬಾಗಿ, ಟಿ. ಹನುಮಂತರಾಯ, ಮಂಜು ನಾರಾಯಣ್, ಎಸ್. ನರಸಿಂಹಸ್ವಾಮಿ, ಡಿ.ಆರ್. ದೇವರಾಜ್, ಆಯೋಜನೆ: ಬಯಲು ಬಳಗ, ಸ್ಥಳ: ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸಭಾಂಗಣ, ಬೆಂಗಳೂರು ವಿ.ವಿ, ಜ್ಞಾನಭಾರತಿ ಆವರಣ, ಮಧ್ಯಾಹ್ನ 3

'ಒಬ್ಬ ಇನ್ನೊಬ್ಬ', 'ಸಿದ್ಧತೆ' ನಾಟಕಗಳ ಪ್ರದರ್ಶನ: ನಿರ್ದೇಶನ: ಕಾಸರಗೋಡು ಚಿನ್ನಾ, ಉದ್ಘಾಟನೆ: ಸುದರರಾಜ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ನಾ. ದಾಮೋದರ ಶೆಟ್ಟಿ, ಆರ್.ಕೆ. ಹೆಗಡೆ, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಸಿ. ರವೀಂದ್ರನಾಥ್ ಅವರು ಅನುವಾದಿಸಿದ 'ಬಾಶೋ ಹಾಯ್ಕು', ಸುನಂದಾ ಕಡಮೆ ಅವರ 'ಹೈವೇ 63' ಪುಸ್ತಕಗಳ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಪುಸ್ತಕಗಳ ಪರಿಚಯ: ಕೆ.ವೈ. ನಾರಾಯಣಸ್ವಾಮಿ, ಪಿ. ಭಾರತಿದೇವಿ, ಆಯೋಜನೆ: ಆಕೃತಿ ಪುಸ್ತಕ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿಭವನ, ಕುಮಾರ ಪಾರ್ಕ್ ಈಸ್ಟ್, ಸಂಜೆ 5



ಬಂಜಗೆರೆ ಜಯಪ್ರಕಾಶ್

ಮುಂಗಾರು ಸಂಗೀತ ರಸಗ್ರಹಣ ಸಪ್ತಾಹದ ಚಾಲನೆ: ಅಪ್ಪಗೆರೆ ತಿಮ್ಮರಾಜು, ಅಧ್ಯಕ್ಷತೆ: ಶ್ರೀರಾಮೇಗೌಡ, ಉಪಸ್ಥಿತಿ: ಎಲ್. ವೆಂಕಟಪ್ಪ, ಹರೀಶ ಜರಸಿಂಹ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

ಊಂಜಲ್ ಸಂಗೀತೋತ್ಸವ: ಗಾಯನ: ದಿವ್ಯಾ ಗಿರಿಧರ್ ಮತ್ತು ತಂಡ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ವಯ್ಯಾಲಿ ಕಾವಲ್, ಸಂಜೆ 6

'ಸುಮ್ ಸುಮ್ಕೆ' ನಾಟಕ ಪ್ರದರ್ಶನ: ರಚನೆ: ಕೋಟಿಗಾನಹಳ್ಳಿ ರಾಮಯ್ಯ, ವಿನ್ಯಾಸ ಮತ್ತು ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

'ಯಕ್ಷ ಶರವಣ- ಯಕ್ಷೋತ್ಸವ': ರಾತ್ರಿ 9.26ಕ್ಕೆ ಭಸ್ಮಾಸುರ, 11.15ಕ್ಕೆ 'ಲವ ಕುಶ', 1.15ಕ್ಕೆ 'ಧರ್ಮಾಂಗದ', 2.15ಕ್ಕೆ 'ಕಾರ್ತವೀರ್ಯ', 3.15ಕ್ಕೆ 'ಶಶಿಪ್ರಭೆ' ಯಕ್ಷಗಾನ ಪ್ರಸಂಗಗಳ ಪ್ರದರ್ಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.

nagaradalli_indu@prajavani.co.in

ಜುಲೈ 1ರಿಂದ ಹೊಸ ಕಾನೂನು ಜಾರಿ • ಪೊಲೀಸರು–ಪತ್ರಕರ್ತರಿಗೆ ಕಾರ್ಯಾಗಾರ

'ಚಿತ್ರ, ವಿಡಿಯೊ, ಇ–ಮೇಲ್‌ನಲ್ಲೂ ಎಫ್‌ಐಆರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಪ್ರತಿಯೊಬ್ಬರಿಗೂ ನ್ಯಾಯ ಒದಗಿಸಲು ಕೇಂದ್ರ ಸರ್ಕಾರ ಮೂರು ಹೊಸ ಕಾನೂನು ರೂಪಿಸಿದ್ದು, ಇವುಗಳು ಜುಲೈ 1ರಿಂದ ದೇಶದಾದ್ಯಂತ ಜಾರಿಯಾಗಲಿವೆ. ಯಾವುದೇ ಘಟನೆಗೆ ಸಂಬಂಧಪಟ್ಟಂತೆ ಫೋಟೊ, ವಿಡಿಯೊ, ಇ- ಮೇಲ್ ಹಾಗೂ ಇತರೆ ಡಿಜಿಟಲ್ ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು ವಿಚಾರಣೆ ನಡೆಸಿ ತ್ವರಿತವಾಗಿ ಎಫ್‌ಐಆರ್ ದಾಖಲಿಸಿಕೊಳ್ಳಲು ಹೊಸ ಕಾನೂನಿನಲ್ಲಿ ಅವಕಾಶ ನೀಡಲಾಗಿದೆ' ಎಂದು ಹೈಕೋರ್ಟ್ ವಕೀಲ ಆರ್‌.ಎಂ. ಮಲ್ಲಿಕಾರ್ಜುನ್ ತಿಳಿಸಿದರು.

ನಗರದಲ್ಲಿ ಪೊಲೀಸರು ಹಾಗೂ ಪತ್ರಕರ್ತರಿಗಾಗಿ ಆಯೋಜಿಸಿದ್ದ 'ಮೂರು ಹೊಸ ಕಾನೂನುಗಳ ಪರಿಚಯ' ವಿಶೇಷ ಕಾರ್ಯಾಗಾರದಲ್ಲಿ ಅವರು ವಿಷಯ ಮಂಡಿಸಿದರು.

'ಭಾರತೀಯ ದಂಡ ಸಂಹಿತೆ (ಐಪಿಸಿ) ಬದಲು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಜಾರಿಯಾಗುತ್ತಿದೆ. ಇದರ ಜೊತೆಯಲ್ಲಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಯೂ ಜಾರಿಗೆ ಬರಲಿದೆ. ಈ ಮೂರು ಕಾಯ್ದೆಗಳ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು' ಎಂದು ಅವರು ಹೇಳಿದರು.

'ಡಿಜಿಟಲ್ ಸಾಕ್ಷ್ಯಗಳಿಗೆ ಹೊಸ ಕಾಯ್ದೆಯಲ್ಲಿ ಮಹತ್ವ ನೀಡಲಾಗಿದೆ. ಯಾವುದೇ ವ್ಯಕ್ತಿ, ಘಟನೆಯ ವಿಡಿಯೊ, ಫೋಟೊ, ಇ–ಮೇಲ್ ಹಾಗೂ ಇತರೆ ರೂಪದಲ್ಲಿ ಮಾಹಿತಿ ನೀಡಿದರೆ ಪೊಲೀಸರು ನಿರ್ಲಕ್ಷ್ಯ ಮಾಡುವಂತಿಲ್ಲ. ಪ್ರಕರಣ ದಾಖಲಿಸಿಕೊಂಡು, ಮುಂದಿನ ತನಿಖೆ ಕೈಗೊಳ್ಳಬೇಕು. ಹಳೇ ಪ್ರಕರಣ ಅಥವಾ ಶಿಕ್ಷೆ ಪ್ರಮಾಣ ಕಡಿಮೆ ಇರುವ ಪ್ರಕರಣಗಳಲ್ಲಿ, ಏಕಾಏಕಿ ಎಫ್‌ಐಆರ್ ದಾಖಲಿಸಲು ಅವಕಾಶವಿಲ್ಲ. ದೂರು ಸ್ವೀಕರಿಸಿ ಮಾಹಿತಿ ಕಲೆಹಾಕಲು 14 ದಿನಗಳ ಕಾಲಾವಕಾಶವಿದೆ. ಕೃತ್ಯವು ಮೇಲ್ನೋಟಕ್ಕೆ ಸಾಬೀತಾದರೆ ಮಾತ್ರ ಎಫ್‌ಐಆರ್ ದಾಖಲಿಸಬಹುದು' ಎಂದು ಅವರು ತಿಳಿಸಿದರು.

'ದೂರುದಾರರ ಜೊತೆಯಲ್ಲಿ ಆರೋಪಿಗೂ ಕೃತ್ಯದ ಬಗ್ಗೆ ವಿವರಣೆ ನೀಡಲು ಅವಕಾಶ ಕಲ್ಪಿಸಲಾಗಿದೆ. ದೇಶದ ಯಾವುದೇ ಭಾಗದಲ್ಲಿ ಕೃತ್ಯ ನಡೆದರೂ, ಠಾಣೆ ಮಿತಿ ಇಲ್ಲದೇ ಸಮೀಪದ ಠಾಣೆಗೆ ದೂರು ಕೊಡಲು ಹೊಸ ಕಾಯ್ದೆ ಅವಕಾಶ ನೀಡಿದೆ. ತನಿಖೆ ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ, ಪ್ರಕರಣ ಇತ್ಯರ್ಥಪಡಿಸಲು ನ್ಯಾಯಾಲಯಗಳಿಗೂ ಮಿತಿ ನಿಗದಿಪಡಿಸಲಾಗಿದೆ' ಎಂದು ಅವರು ಹೇಳಿದರು.

358 ಸೆಕ್ಷನ್‌ಗಳಿಗೆ ಇಳಿಕೆ: ಕೆಎಲ್‌ಇ ಕಾನೂನು ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಸುಬ್ರಹ್ಮಣ್ಯ ಗೌಡಪ್ಪನವರ ಮಾತನಾಡಿ, 'ಐಪಿಸಿಯಲ್ಲಿ 511 ಸೆಕ್ಷನ್‌ಗಳಿವೆ. ಬಿಎನ್‌ಎಸ್‌ನಲ್ಲಿ ಸೆಕ್ಷನ್‌ಗಳನ್ನು 358ಕ್ಕೆ ಇಳಿಸಲಾಗಿದೆ. ಆದರೆ, ಯಾವುದೇ ಹಳೇ ಅಂಶವನ್ನು ಕೈಬಿಟ್ಟಿಲ್ಲ. ಕೆಲ ಮಾರ್ಪಾಡು ಮಾತ್ರ ಮಾಡಲಾಗಿದೆ' ಎಂದರು.

'ಸಂಘಟಿತ ಅಪರಾಧ, ಭಯೋತ್ಪಾದನೆ ಅಂಶಗಳನ್ನು ಹೊಸ ಕಾಯ್ದೆಯಲ್ಲಿ ಸೇರಿಸಲಾಗಿದೆ. ಮಾರಣಾಂತಿಕ ಹಲ್ಲೆ ಮಾಡಿ ಕಾಯಂ ಅಂಗವಿಕಲರನ್ನಾಗಿಸುವ ಹಾಗೂ ಹಾಸಿಗೆ ಹಿಡಿಯುವಂತೆ ಮಾಡುವವರಿಗೆ ಜೀವನ ಪರ್ಯಂತ ಜೈಲು ಶಿಕ್ಷೆ ಇದೆ. ಸರ, ಮೊಬೈಲ್ ಕಿತ್ತೊಯ್ಯುವ ಕೃತ್ಯವನ್ನು ಕಳ್ಳತನ ಪಟ್ಟಿಗೆ ಸೇರಿಸಲಾಗಿದೆ. ಆರ್ಥಿಕ ವಂಚನೆ ಪ್ರಕರಣದಲ್ಲಿ ಹಣ ಕಳೆದುಕೊಂಡವರು ನೊಂದು ಮೃತಪಟ್ಟರೆ, ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶವಿದೆ. ಹೊಸ ಕಾಯ್ದೆಯ ಕೆಲ ಸೆಕ್ಷನ್‌ಗಳಲ್ಲಿ ಅಸ್ಪಷ್ಟತೆ ಇದ್ದು, ಈ ಬಗ್ಗೆ ಪರಿಶೀಲನೆ ನಡೆಯಬೇಕಿದೆ' ಎಂದು ಹೇಳಿದರು.



ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಕೆಎಲ್‌ಇ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಜೆ.ಎಂ. ಮಲ್ಲಿಕಾರ್ಜುನಯ್ಯ ಅವರಿಗೆ ಸಿಸಿಬಿ ಡಿಸಿಪಿ ಶ್ರೀನಿವಾಸ್ ಗೌಡ ಅವರು ಸಸಿ ನೀಡಿ ಸ್ವಾಗತಿಸಿದರು. ಸಹ ಪ್ರಾಧ್ಯಾಪಕ ಡಾ. ಮಧುಸೂದನ್ ಜಿ. ಹಾಗೂ ವಕೀಲ ಆರ್‌.ಎಂ. ಮಲ್ಲಿಕಾರ್ಜುನ್ ಇದ್ದರು

‘ಕ್ಯಾನ್ಸಲೇಶನ್’ ಆಯ್ಕೆ ಇಲ್ಲದೇ ಸೃಷ್ಟಿಯಾಗಿರುವ ಸಮಸ್ಯೆ • ಪರಿಹಾರಕ್ಕೆ ಒತ್ತಾಯ

ಗೃಹಜ್ಯೋತಿ: ಬಾಡಿಗೆದಾರರಿಗೆ ಪೀಕಲಾಟ

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ‘ಗೃಹಜ್ಯೋತಿ’ ಒಂದು ಕಡೆ ರದ್ದು ಮಾಡಿ ಇನ್ನೊಂದು ಮನೆಗೆ ತೆಗೆದುಕೊಳ್ಳುವ ಅವಕಾಶವನ್ನು ಇಂಧನ ಇಲಾಖೆ ನೀಡದೇ ಇರುವುದರಿಂದ ಬಾಡಿಗೆ ಮನೆ ಬದಲಾಯಿಸುತ್ತಿರುವವರು ಯೋಜನೆ ಫಲಾನುಭವಿಗಳಾಗಲು ಪರದಾಡುವಂತಾಗಿದೆ.

ಒಂದು ಕಡೆ ಬಾಡಿಗೆ ಮನೆಯಲ್ಲಿ ವಾಸವಿದ್ದವರು ಗೃಹಜ್ಯೋತಿಗೆ ಅರ್ಜಿ ಸಲ್ಲಿಸಿ ಈ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಈಗ ಮನೆ ಬದಲಾವಣೆ ಮಾಡಲು ಮುಂದಾದಾಗ ಸಮಸ್ಯೆ ಎದುರಾಗಿದೆ. ಮೊದಲಿದ್ದ ಬಾಡಿಗೆ ಮನೆಯಲ್ಲಿ ಯೋಜನೆಯನ್ನು ರದ್ದು ಮಾಡದೇ ಹೊಸ ಬಾಡಿಗೆ ಮನೆಯಲ್ಲಿ ಸೌಲಭ್ಯ ಪಡೆಯಲು ಆಗುತ್ತಿಲ್ಲ. ರದ್ದು ಮಾಡುವ ಅವಕಾಶ ಇಂಧನ ಇಲಾಖೆಯ ವೆಬ್‌ಸೈಟ್‌ನಲ್ಲಾಗಲಿ, ‘ಸೇವಾ ಸಿಂಧು’ ಪೋರ್ಟ್‌ನಲ್ಲೂ ಇಲ್ಲ ಎಂದು ಬಾಡಿಗೆದಾರರು ದೂರಿದ್ದಾರೆ.

‘ನಾನು ಮಹಾಲಕ್ಷ್ಮಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ಇದ್ದೇನೆ. ನನ್ನ ಆಧಾರ್ ಕಾರ್ಡ್ ನಂಬರ್ ನೀಡಿ ಗೃಹಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಉಚಿತವಾಗಿ ಬಳಸುತ್ತಿದ್ದೇನೆ. ಇದೀಗ ಬೇರೆ ಬಾಡಿಗೆ ಮನೆ ನೋಡಿದ್ದು, ಜೂನ್‌ನಲ್ಲಿ ಅಲ್ಲಿಗೆ ಕುಟುಂಬ ಸಹಿತ ಸ್ಥಳಾಂತರಗೊಳ್ಳಲಿದ್ದೇನೆ. ಅದಕ್ಕಾಗಿ ಇಲ್ಲಿ ಗೃಹಜ್ಯೋತಿ ರದ್ದು ಮಾಡಲು ಹೋದಾಗ ಅಂಥ ಅವಕಾಶವೇ ಇರಲಿಲ್ಲ’ ಎಂದು ಖಾಸಗಿ ಕಂಪನಿ ಉದ್ಯೋಗಿ ಕಾರ್ತಿಕ್ ತಿಳಿಸಿದರು.

‘ಬೆಸ್ಕಾಂ ಕಚೇರಿಗೆ ಹೋಗಿ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ನೀಡಿದೆ. ರದ್ದು ಮಾಡಲು ಆಗುವುದಿಲ್ಲ. ನಿಮ್ಮ ಮನೆಯವರ ಆಧಾರ್ ಕಾರ್ಡ್‌ನಲ್ಲಿ ಹೊಸ ಬಾಡಿಗೆ ಮನೆಯಲ್ಲಿ ಯೋಜನೆ ಪಡೆದುಕೊಳ್ಳಿ ಎಂದು ಸಲಹೆ ನೀಡಿದ್ದಾರೆ. ಇಲ್ಲಿ ಹಳೇ ಬಾಡಿಗೆ ಮನೆಯಲ್ಲಿ ನನ್ನ ಹೆಸರಲ್ಲಿ ಯೋಜನೆ ಮುಂದುವರಿದಿರುತ್ತದೆ. ಹೊಸ ಮನೆಯಲ್ಲಿ ಪತ್ನಿ ಹೆಸರಲ್ಲಿ ಯೋಜನೆ ಪಡೆದುಕೊಂಡರೆ ಒಂದೇ ಕುಟುಂಬ ಎರಡು ಕಡೆ ಬಳಸಿದಂತಾಗುವುದಿಲ್ಲವೇ’ ಎಂದು ಅವರು ಪ್ರಶ್ನಿಸಿದರು.

‘ಬಾಡಿಗೆ ಮನೆ ಬದಲಾಯಿಸಿದಾಗ ಯೋಜನೆ ರದ್ದು ಮಾಡಲು ಆಗದೇ ಇದ್ದರೆ, ಮುಂದೆ ಆ ಮನೆಗೆ ಬರುವವರಿಗೆ ಲಾಭವಾಗಲಿದೆ. ಅವರು ಅರ್ಜಿ ಸಲ್ಲಿಸದೆಯೇ ಯೋಜನೆ ಮುಂದುವರಿಯಲಿದೆ. ಬಾಡಿಗೆಗೆ ಜನ ಬಾರದೇ ಇದ್ದರೆ ಮಾಲೀಕರಿಗೇ ಉಳಿತಾಯ ವಾಗಲಿದೆ’ ಎಂದು ತಿಳಿಸಿದರು.

ಸರ್ಕಾರ ಕೂಡಲೇ ಇಂಧನ ಇಲಾಖೆಯ ವೆಬ್‌ಸೈಟ್‌ನಲ್ಲಿ ‘ಕ್ಯಾನ್ಸಲೇಶನ್ ಆಪ್ಷನ್’ (ರದ್ದತಿ ಆಯ್ಕೆ) ನೀಡಬೇಕು ಎಂದು ಬಾಡಿಗೆದಾರರು ಒತ್ತಾಯಿಸಿದರು.

‘ರದ್ದತಿ ಆಯ್ಕೆ ಬರಲಿದೆ’

ಗೃಹಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಸಲು, ಫಲಾನುಭವಿಗಳಾಗಲು https://energy.karnataka.gov.in ವೆಬ್‌ಸೈಟ್ ಮೂಲಕ ಅವಕಾಶ ಕಲ್ಪಿಸಲಾಗಿದೆ. ಹೆಸರು, ಮಾಹಿತಿ ತಪ್ಪಾಗಿದ್ದರೆ ಬದಲಾವಣೆಗೆ ಅವಕಾಶ ನೀಡಲಾಗಿದೆ. ಬಾಡಿಗೆ ಮನೆ ಬದಲಾಯಿಸಿದರೆ ಯೋಜನೆ ರದ್ದು ಮಾಡಲು ಫಲಾನುಭವಿಗಳಿಗೆ ಅವಕಾಶ ನೀಡಿಲ್ಲ. ಸದ್ಯದಲ್ಲಿಯೇ ವೆಬ್‌ಸೈಟ್‌ನಲ್ಲಿ ‘ಕ್ಯಾನ್ಸಲೇಶನ್(ರದ್ದತಿ)’ ಆಪ್ಶನ್ ಸೇರ್ಪಡೆಗೊಳ್ಳಲಿದೆ ಎಂದು ಹೆಸರು ಹೇಳಲು ಇಚ್ಛಿಸದ ಬೆಸ್ಕಾಂ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಒಂದು ಬಾಡಿಗೆ ಮನೆಯಲ್ಲಿ ಒಂದು ಕುಟುಂಬ ಬಳಕೆ ಮಾಡುತ್ತಿರುವ ವಿದ್ಯುತ್ ಯುನಿಟ್ ಅನ್ನು ಅವರು ಇನ್ನೊಂದು ಮನೆಗೆ ಸ್ಥಳಾಂತರವಾದಾಗ ಅಲ್ಲಿಗೆ ಬದಲಾಯಿಸಲು ಅವಕಾಶವಿಲ್ಲ. ಪ್ರತಿ ಮೀಟರ್‌ಗೆ ಅರ್ಹ ಯುನಿಟ್‌ಗಳು ನಿಗದಿಯಾಗಿರುತ್ತದೆ. ಹೊಸ ಬಾಡಿಗೆ ಮನೆಗೆ ಹೋದಾಗ ಅಲ್ಲಿ ಯೋಜನೆಯ ಫಲಾನುಭವಿಗಳಿಗೆ ಸರ್ಕಾರ ನಿಗದಿ ಮಾಡಿದ ಕನಿಷ್ಠ 53 ಯುನಿಟ್ ಮತ್ತು ಹೆಚ್ಚುವರಿ 5 ಯುನಿಟ್ ಒಟ್ಟು 58 ಯುನಿಟ್ ಉಚಿತವಾಗಿ ದೊರೆಯಲಿದೆ ಎಂದು ತಿಳಿಸಿದರು.



ಜನ ಪ್ರಕಾಶನ, ಬಂಡಾಯ ಸಾಹಿತ್ಯ ಸಂಘಟನೆ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಟಿ.ಆರ್. ಚಂದ್ರಶೇಖರ್ (ಎಡದಿಂದ ನಾಲ್ಕನೆಯವರು) ಅವರ ‘ಭಾರತ ಒಕ್ಕೂಟ ವ್ಯವಸ್ಥೆ’ ಪುಸ್ತಕವನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಸಂಚಾಲಕ ಬಿ.ರಾಜಶೇಖರಮೂರ್ತಿ, ಕಾಂಗ್ರೆಸ್ ಮುಖಂಡ ವಿ.ಆರ್.ಸುದರ್ಶನ್ ಮತ್ತು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಜಯಕುಮಾರ್ ಎಚ್.ಎಸ್. ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಜಾಹೀರಾತು ಫಲಕ ಅವಘಡ: ಎಂಜಿನಿಯರ್ ವಶಕ್ಕೆ

ಮುಂಬೈ (ಪಿಟಿಐ): ಇಲ್ಲಿಯ ಘಾಟ್‌ಕೋಪರ್‌ನಲ್ಲಿ ಮೇ 13ರಂದು ಬೃಹತ್ ಜಾಹೀರಾತು ಫಲಕ ಉರುಳಿಬಿದ್ದು 17 ಜನರ ಸಾವಿಗೆ ಕಾರಣವಾದ ಪ್ರಕರಣದ ಸಂಬಂಧ ಎಂಜಿನಿಯರ್ ಮನೋಜ್ ಸಂಘು ಅವರನ್ನು ನ್ಯಾಯಾಲಯವು ಜೂನ್ 5ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಈ ಪ್ರಕರಣ ಸಂಬಂಧ ಗುರುವಾರ ಅಪರಾಧ ಘಟಕದಿಂದ ಬಂಧಿಸಲಾದ ಸಂಘು ಅವರನ್ನು ಶುಕ್ರವಾರ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು.

ಈ ಮೂಲಕ ಈ ಪ್ರಕರಣದಲ್ಲಿ ಇಬ್ಬರು ಆರೋಪಿಗಳ ಬಂಧನವಾದಂತಾಗಿದೆ. ಇದಕ್ಕೂ ಮುಂಚೆ ಇಗೊ ಮಾಧ್ಯಮ ಪ್ರೈ.ಲಿ. ನಿರ್ದೇಶಕ ಭವೇಶ್ ಭಿಂಡೆ ಅವರ ಬಂಧನವಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಜಾಹೀರಾತು ಫಲಕಕ್ಕೆ ಸಂಘು ದೃಢತೆಯ ಪ್ರಮಾಣಪತ್ರ ನೀಡಿದ್ದರು.



ಹುಲಿಗಿ ರಥೋತ್ಸವ

ಕೊಪ್ಪಳ ತಾಲ್ಲೂಕಿನ ಹುಲಿಗಿ ಗ್ರಾಮದಲ್ಲಿ ಶುಕ್ರವಾರ ನಡೆದ ಹುಲಿಗೆಮ್ಮ ದೇವಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ – ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಕಳಪೆ ಕಾಮಗಾರಿ ಪ್ರಶ್ನಿಸಿದ್ದಕ್ಕೆ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಕೃತ್ಯ

ಶಾಸಕರ ಇಬ್ಬರು ಸಹೋದರರಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹತ್ತು ಜನ ಆರೋಪಿಗಳ ವಿರುದ್ಧ ಪ್ರಕರಣ ದಾಖಲು
- ತಲೆಮರೆಸಿಕೊಂಡಿರುವ ಶಾಸಕರ ಇಬ್ಬರು ಸಹೋದರರು
- ಹಲ್ಲೆಗೆ ಒಳಗಾದ ವ್ಯಕ್ತಿ ಆಸ್ಪತ್ರೆಗೆ ದಾಖಲು

ಬೀದರ್: ಜಲಜೀವನ್ ಮಿಷನ್ ಯೋಜನೆ (ಜೆಜೆಎಂ) ಅಡಿ ಕೈಗೆತ್ತಿಕೊಂಡ ಕಾಮಗಾರಿ ಕಳಪೆಯಾಗಿದೆ ಎಂದು ವಿರೋಧಿಸಿದ ವ್ಯಕ್ತಿಯನ್ನು ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ ಅವರ ಇಬ್ಬರು ಸಹೋದರರು ಸೇರಿ ಹತ್ತು ಜನರು ಹುಮನಾಬಾದ್ ತಾಲ್ಲೂಕಿನ ಹಣಕುಣಿ ರಸ್ತೆಯ ನಿರ್ಜನ ಪ್ರದೇಶಕ್ಕೆ ಗುರುವಾರ ರಾತ್ರಿ ಕರೆದುಕೊಂಡು ಹೋಗಿ ಹಲ್ಲೆ ಮಾಡಿದ್ದಾರೆ.

ಘಟನೆ ಸಂಬಂಧ ನಾಲ್ವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಶಾಸಕರ ಸಹೋದರರರು ತಲೆ ಮರೆಸಿಕೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ತಾಲ್ಲೂಕಿನ ಕಠಳ್ಳಿ ಗ್ರಾಮದ ಬಸವರಾಜ ಗಾಯಗೊಂಡ ವ್ಯಕ್ತಿ. ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಅವರ ಸಹೋದರರಾದ ಸಂತೋಷ್ ಪಾಟೀಲ, ಸುನೀಲ ಪಾಟೀಲ ಹಾಗೂ ಅವರ ಜೊತೆಗಿದ್ದ ಎಂಟು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಕಠಳ್ಳಿ ಗ್ರಾಮದಲ್ಲಿ ಜೆಜೆಎಂ ಕಾಮಗಾರಿ ನಡೆದಿದೆ. ಗ್ರಾಮದ ಹಳೆ ನೀರಿನ ಟ್ಯಾಂಕಿಗೆ ಬಣ್ಣ ಬಳಿದು ಹೊಸದಾಗಿ ಕಾಣುವಂತೆ ಮಾಡಲಾಗಿದೆ ಎಂದು ದೂರಿ ಬಸವರಾಜ ಅವರು ಕೆಲಸ ನಿಲ್ಲಿಸಿದ್ದರು. ಈ ವಿಷಯವನ್ನು ಸಾಮಾಜಿಕ ಜಾಲತಾಣಗಳಲ್ಲೂ ಹಂಚಿಕೊಂಡಿದ್ದರು. ಗುರುವಾರ ಗ್ರಾಮದ ಮರಿಗೆಮ್ಮ ದೇವಸ್ಥಾನದ ಬಳಿ ಬಸವರಾಜ ಅವರು ಇದ್ದಾಗ ಸಂದೀಪ್ ಮತ್ತು ಪಾಣಿ ಎಂಬುವರು ಅವರ ಬಳಿಗೆ ಹೋಗಿ ಗೌಡರು (ಶಾಸಕರು) ಮಾತನಾಡಬೇಕು. ನೀವು ಬರಬೇಕೆಂದು ಹೇಳಿದ್ದಾರೆ ಎಂದು ತಿಳಿಸಿದ್ದಾರೆ. ಅದನ್ನು ನಿರಾಕರಿಸಿ ನಾನು ಬೆಳಿಗ್ಗೆ ಬರುತ್ತೇನೆ ಎಂದು ಬಸವರಾಜ ಹೇಳಿದಾಗ ಬಲವಂತವಾಗಿ ದ್ವಿಚಕ್ರ ವಾಹನದಲ್ಲಿ ಕೂರಿಸಿಕೊಂಡು ಹಣಕುಣಿ ರಸ್ತೆಯ ಬಯಲು ಪ್ರದೇಶಕ್ಕೆ ಕರೆದೊಯ್ದು ಹಲ್ಲೆ ನಡೆಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಗೊಂಡ ಬಸವರಾಜ ಅವರನ್ನು ಹುಮನಾಬಾದ್ ಪಟ್ಟಣದ ಆಸ್ಪತ್ರೆಗೆ ತಡರಾತ್ರಿ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ವಿಷಯ ತಿಳಿಯುತ್ತಿದ್ದಂತೆ ಕಾಂಗ್ರೆಸ್ ಮುಖಂಡ ರಾಜಶೇಖರ ಪಾಟೀಲ ಹುಮನಾಬಾದ್ ಹಾಗೂ ಪಕ್ಷದ ಕಾರ್ಯಕರ್ತರು ಬಂದು ಘಟನೆಯನ್ನು ಖಂಡಿಸಿದರು.

ಪಠ್ಯಪುಸ್ತಕಗಳನ್ನು ಶಿಕ್ಷಕರೇ ತರಬೇಕು

ಸಾಗಣೆ ವೆಚ್ಚದ ಹಣ ಬಿಇಒ ಖಾತೆಗೆ ಜಮೆಯಾದರೂ ಆಗದ ಪ್ರಯೋಜನ

• ಬಸವರಾಜ ಹವಾಲ್ದಾರ



ಪಠ್ಯಪುಸ್ತಕಗಳನ್ನು ಆಟೋದಲ್ಲಿ ಇರಿಸುತ್ತಿರುವ ಶಾಲಾ ಸಿಬ್ಬಂದಿ



ಪಠ್ಯಪುಸ್ತಕ ಸಾಗಾಟಕ್ಕೆ ಬಿಇಒ ಗಳಿಗೆ ಹಣ ಬಿಡುಗಡೆ ಮಾಡಿರುವ ಕುರಿತು ಕರ್ನಾಟಕ ಪಠ್ಯಪುಸ್ತಕ ಸಂಘಗಳ ವ್ಯವಸ್ಥಾಪಕ ನಿರ್ದೇಶಕರ ಪತ್ರ

ಬಾಗಲಕೋಟೆ: ಸರ್ಕಾರದಿಂದ ಶಾಲಾ ವಿದ್ಯಾರ್ಥಿಗಳಿಗೆ ನೀಡುವ ಪಠ್ಯಪುಸ್ತಕಗಳು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಬರುತ್ತವೆ. ಅಲ್ಲಿಂದ ಅವುಗಳನ್ನು ಶಾಲೆಗಳಿಗೆ ತಲುಪಿಸಬೇಕು. ಅಧಿಕಾರಿಗಳು ತಲುಪಿಸದ ಕಾರಣ ಶಾಲೆಯ ಶಿಕ್ಷಕರು, ಇತರ ಸಿಬ್ಬಂದಿ ಹೊತ್ತುಕೊಂಡು ಹೋಗಬೇಕು.

‘ಮಕ್ಕಳಿಗೆ ಪಾಠ ಮಾಡುವುದರ ಜೊತೆಗೆ ಬಿಸಿಯೂಟದ ವ್ಯವಸ್ಥೆ, ಮೊಟ್ಟೆ, ಶೇಂಗಾ ಚಿಕ್ಕಿ ಖರೀದಿ, ವಿವಿಧ ಗಣತಿ, ಚುನಾವಣೆ ಕರ್ತವ್ಯ ಸೇರಿ ವಿವಿಧ ಕೆಲಸಗಳನ್ನು ಮಾಡುತ್ತಿದ್ದೇವೆ. ಈಗ ಪಠ್ಯಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಿಂದ ವಾಹನಗಳವರೆಗೆ, ಗ್ರಾಮದಲ್ಲಿ ಶಾಲೆಯವರೆಗೆ ಒಯ್ಯಬೇಕಿದೆ’ ಎಂದು ಶಿಕ್ಷಕರು ಹೇಳುತ್ತಾರೆ.


ಕರ್ನಾಟಕ ಪಠ್ಯಪುಸ್ತಕ ಸಂಘದಿಂದ ಮುದ್ರಣವಾದ ಪಠ್ಯಪುಸ್ತಕಗಳು ನೇರವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಕಚೇರಿಗೆ ಬರುತ್ತವೆ. ಅಲ್ಲಿಂದ ಅವುಗಳನ್ನು ಶಾಲೆಗಳಿಗೆ ತಲುಪಿಸುವ ಹೊಣೆ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದು. ಆದರೆ, ‘ನಮ್ಮ ಕಚೇರಿಯಿಂದ ಪಠ್ಯಪುಸ್ತಕಗಳನ್ನು ಒಯ್ಯಿರಿ’ ಎಂದು ಅವರು ಆಯಾ ಶಾಲೆಗಳ ಮುಖ್ಯಶಿಕ್ಷಕರಿಗೆ ಸೂಚಿಸುತ್ತಾರೆ.

ಬಾದಾಮಿ ಎಪಿಎಂಸಿ ಗೋದಾಮಿನಿಂದ ಪಠ್ಯ ಪುಸ್ತಕಗಳನ್ನು ವಿತರಿಸಲಾಗುತ್ತಿದ್ದು, ಅವುಗಳನ್ನು ಮುಖ್ಯ ಶಿಕ್ಷಕರು ಒಯ್ಯಬೇಕಿದೆ. ಜೊತೆಗೆ ಇಂಡೆಂಟ್ ನಕಲು ಪ್ರತಿ, ಮುದ್ರೆ ಕಡ್ಡಾಯವಾಗಿ ತರಬೇಕು ಎಂಬ ಸಂದೇಶವನ್ನು ಶಿಕ್ಷಕರಿಗೆ ಕಳುಹಿಸಲಾಗಿದೆ. ರಾಜ್ಯದ ಬಹುತೇಕ ಕಡೆ ಈ ಪದ್ಧತಿ ಇದೆ.

> ಪಠ್ಯಪುಸ್ತಕಗಳನ್ನು ನಾವೇ ತಲುಪಿಸುತ್ತೇವೆ ಕೆಲ ವಿಷಯಗಳ ಪಠ್ಯಪುಸ್ತಕಗಳಷ್ಟೇ ಬಂದಿದ್ದು, ಅವುಗಳನ್ನು ಒಯ್ಯಲು ಶಿಕ್ಷಕರಿಗೆ ತಿಳಿಸಿದ್ದೇವೆ.
> **ಎನ್.ವೈ.ಕುಂದರಗಿ, ಬಿಇಒ, ಬಾದಾಮಿ**

‘ಜಿಲ್ಲೆಯಲ್ಲಿ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಪಠ್ಯಪುಸ್ತಕಗಳನ್ನು ನೇರವಾಗಿ ಶಾಲೆಗಳಿಗೆ ಸಾಗಿಸಬೇಕು. ಅದಕ್ಕಾಗಿ ಈಗಾಗಲೇ ಪ್ರತಿ ವಿದ್ಯಾರ್ಥಿ ಲೆಕ್ಕದಲ್ಲಿ ₹2.50 (ಸಾಗಣೆ ವೆಚ್ಚ) ಬಿಇಒ ಬ್ಯಾಂಕ್ ಖಾತೆಗೆ ಜಮೆಯಾಗಿದೆ. ನಿಯಮಾನುಸಾರ ವೆಚ್ಚ ಭರಿಸಿ, ಅಗತ್ಯ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಕರ್ನಾಟಕ ಪಠ್ಯಪುಸ್ತಕಗಳ ಸಂಘದ ವ್ಯವಸ್ಥಾಪಕ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಆದರೆ, ಅದು ಪಾಲನೆ ಯಾಗುತ್ತಿಲ್ಲ’ ಎಂಬ ದೂರು ಶಿಕ್ಷಕರದ್ದು.

‘ಮೇಲಧಿಕಾರಿಗಳು ಸೂಚಿಸಿದ ಮೇಲೆ ಅವರ ಆಜ್ಞೆ ಪಾಲಿಸಬೇಕು. ಬಿಇಒ ಕಚೇರಿಗೆ ಬಂದು, ಅಲ್ಲಿಂದ ಆಟೊದಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಬಸ್ ನಿಲ್ದಾಣಕ್ಕೆ ಹೋಗುತ್ತೇವೆ. ಅಲ್ಲಿಂದ ಗ್ರಾಮಕ್ಕೆ ತೆರಳಿ, ಶಾಲೆಗೆ ಒಯ್ಯಬೇಕು. ಸಮೀಪ ಇದ್ದವರು ವಾಹನ ಮಾಡಿಕೊಂಡು ಬಂದರೆ, ಅದರ ವೆಚ್ಚವನ್ನೂ ಶಿಕ್ಷಕರೇ ಭರಿಸಬೇಕು’ ಎಂದು ಮುಖ್ಯ ಶಿಕ್ಷಕರೊಬ್ಬರು ಅಳಲು ತೋಡಿಕೊಂಡರು



ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಹೋಗುವಂತೆ ಶಿಕ್ಷಕರಿಗೆ ಕಳುಹಿಸಿರುವ ಸಂದೇಶ

ನಿಧನ ವಾರ್ತೆ

ಎಂ.ವೆಂಕಟೇಶ್



ಯಲಹಂಕ: ಮೈಸೂರಿನ ಮಾನಸ ಗಂಗೋತ್ರಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎಂ.ವೆಂಕಟೇಶ್ (85) ಬೆಂಗಳೂರಿನಲ್ಲಿ ಶುಕ್ರವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶನಿವಾರ ಬೆಳಿಗ್ಗೆ 11.30ಕ್ಕೆ ಜಕ್ಕೂರಿನ ಏರಿಸ್ ಲೇಕ್‌ವ್ಯೂ ಅಪಾರ್ಟ್‌ಮೆಂಟ್ ಸಮೀಪದ ರುದ್ರಭೂಮಿ ಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಪಶ್ಚಿಮಬಂಗಾಳದಲ್ಲಿ ಬಾಂಬ್ ದಾಳಿ: ಐವರು ಟಿಎಂಸಿ ಕಾರ್ಯಕರ್ತರಿಗೆ ಗಾಯ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗೋರ್‌ನಲ್ಲಿ ಐಎಸ್‌ಎಫ್ ಬೆಂಬಲಿಗರು ಬಾಂಬ್‌ಗಳನ್ನು ಎಸೆದಿದ್ದರಿಂದ, ತೃಣಮೂಲ ಕಾಂಗ್ರೆಸ್‌ನ ಐವರು ಕಾರ್ಯಕರ್ತರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಟಿಎಂಸಿ ಕಾರ್ಯಕರ್ತರು ಗುರುವಾರ ರಾತ್ರಿ ಮನೆಗೆ ಮರಳುತ್ತಿದ್ದಾಗ ಈ ಘಟನೆ ನಡೆದಿದೆ.

ಗಾಯಗೊಂಡವರನ್ನು ಚಿಕಿತ್ಸೆಗಾಗಿ ಕೋಲ್ಕತ್ತಾದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ರಾಜ್ಯ ಸಚಿವ ಅರೂಪ್ ಬಿಸ್ವಾಸ್, ಜಾದವಪುರದ ಟಿಎಂಸಿ ಅಭ್ಯರ್ಥಿ ಸಯೋನಿ ಘೋಷ್, ಶಾಸಕ ಸೌಕತ್ ಮೊಲ್ಲಾ ಗಾಯಾಳುಗಳನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಜಾದವಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಭಾಂಗೋರ್‌ನಲ್ಲಿ ಶನಿವಾರ (ಜೂನ್ 1) ಮತದಾನ ನಡೆಯಲಿದೆ. ಮತದಾನದ ದಿನದಂದು ಶಾಸಕ ಸೌಕತ್ ಮೊಲ್ಲಾ ತಮ್ಮ ಕ್ಯಾನಿಂಗ್ ಪುರ್ಬಾ ಕ್ಷೇತ್ರದಿಂದ ಹೊರಬಾರದಂತೆ ಚುನಾವಣಾ ಆಯೋಗವು ಆದೇಶಿಸಿದೆ.

ಭಾಂಗೋರ್‌ನ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಶಾಸಕ ನೌಶಾದ್ ಸಿದ್ದಿಕಿ ಈ ಆರೋಪವನ್ನು ನಿರಾಕರಿಸಿದ್ದು, ‘ಸೋಲಿನ ಭಯದಿಂದ ಟಿಎಂಸಿಯು ಇಂತಹ ಕೃತ್ಯ ಎಸಗಿ, ನಮ್ಮ ಮೇಲೆ ದೂರುತ್ತಿದೆ. ಟಿಎಂಸಿ ಕಾರ್ಯಕರ್ತರೇ ನಮ್ಮ ಬೆಂಬಲಿಗರ ಮೇಲೆ ಬಾಂಬ್‌ಗಳನ್ನು ಎಸೆದಿದ್ದಾರೆ. ಆದರೆ ಈ ಸಂದರ್ಭ ಅವರೇ ಗಾಯಗೊಂಡಿದ್ದಾರೆ’ ಎಂದು ಹೇಳಿದ್ದಾರೆ.

ಊಟಿ ರೇಸ್

ಕಿಂಗ್ಸ್ ಬೆಟಾಲಿಯನ್ ಗೆಲ್ಲುವ ನಿರೀಕ್ಷೆ

ಬಡ್ರುಕ ಊಟಿ ಜುವೆನೈಲ್ಸ್ ಸ್ಪ್ರಿಂಟ್ ಮಿಲಿಯನ್ ಶನಿವಾರದ ಊದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ಬೆಟಾಲಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10:30 ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೀಕೊ ಕಾಟ್ಟು 10, ಅಮೇಜಿಂಗ್ ಜಾಯ್ 4, ಫಾಲ್ಕನ್‌ಬ್ರಿಡ್ಜ್ 2
2ನೇ ರೇಸ್: ಚಾರುಕಲ 6, ರಾಯಲ್ ಎಕ್ಸೆಂಪ್ಲರ್ 3, ವಂಧಿಯಾದೇವನ್ 5
3ನೇ ರೇಸ್: ಕಿಂಗ್ಸ್ ಬೆಟಾಲಿಯನ್ 2, ಕ್ರೌನ್ ಏಂಜೆಲ್ 4, ಆಲ್ ಸ್ಟಾರ್ಸ್ 1
4ನೇ ರೇಸ್: ಲೈಟ್ ದಿ ವರ್ಲ್ಡ್ 9, ಮಾರಿಸೆಟ್ 2, ಡೈಮಂಡ್ ಅಂಡ್ ಪರ್ಲ್ಸ್ 1
5ನೇ ರೇಸ್: ಮಲ್ಟಿಕ್ರೌನ್ 1, ಕ್ಲೌಡಿ ಹಿಲ್ಸ್ 4, ಪ್ರೈಸ್‌ಲೆಸ್ ಬ್ಯೂಟಿ 9
6ನೇ ರೇಸ್: ಎಂಪರರ್ ವಿಕ್ರಂ 1, ವಿನಾಲಿಯ 4, ಕಿಂಗ್ ಓ ಸ್ಟಾರ್ 3
7ನೇ ರೇಸ್: ಗ್ರೇ ಬ್ಯೂಟಿ 6, ಅಕಂಥ 3, ಬ್ಲೂಮೆಡ್ 2
8ನೇ ರೇಸ್: ಮಲ್ಟಿವೇವ್ 1, ಸೀ ವಾಟರ್ಸ್ 2, ಆಟಮ್ ಲೈಟ್ 10

ಉತ್ತಮ ಬೆಟ್: ಲೈಟ್ ದಿ ವರ್ಲ್ಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	6,7,8

‘ಮತ್ತೆರಡು ಜೆಎಸ್‌ಎಸ್ ವಿಶ್ವವಿದ್ಯಾಲಯಗಳ ಸ್ಥಾಪನೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಜೆಎಸ್‌ಎಸ್ ಮಹಾವಿದ್ಯಾಪೀಠವು ಮಾರಿಷಸ್ ಹಾಗೂ ಉತ್ತರ ಪ್ರದೇಶದ ನೋಯ್ಡಾದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುತ್ತಿದ್ದು, ಪ್ರಕ್ರಿಯೆಗಳು ಆರಂಭವಾಗಿವೆ’ ಎಂದು ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ.ಬೆಟ್‌ಸೂರಮಠ ಅವರು ತಿಳಿಸಿದರು.

ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಮೈಸೂರಿನಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಎಎಚ್‌ಇಆರ್ ವಿಶ್ವವಿದ್ಯಾಲಯಗಳಿವೆ. ಮಾರಿಷಸ್‌ನಲ್ಲಿದ್ದ ತಾಂತ್ರಿಕ ಕಾಲೇಜಿಗೆ ವಿಶ್ವವಿದ್ಯಾಲಯದ ಮಾನ್ಯತೆ ನೀಡಲಾಗಿದೆ. ಪದವಿ ಪ್ರಮಾಣ ಪತ್ರ ನೀಡಬಹುದಾಗಿದ್ದು, ಅಲ್ಲಿ ವೈದ್ಯಕೀಯ ಕಾಲೇಜನ್ನೂ ಸ್ಥಾಪಿಸಲಾಗುತ್ತಿದೆ’ ಎಂದರು.

‘ನೋಯ್ಡಾದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಯಿದ್ದು, ಇದೀಗ ವಿಶ್ವವಿದ್ಯಾಲಯ ತೆರೆಯಲು ಉತ್ತರ ಪ್ರದೇಶ ಸರ್ಕಾರದಿಂದ ಅನುಮತಿ ದೊರೆತಿದೆ. ಸಿಬ್ಬಂದಿ ನೇಮಕಾತಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ. ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಯಿಂದ ಜೆಎಸ್‌ಎಸ್ ವಿಶ್ವವಿದ್ಯಾಲಯಗಳ ಸಂಖ್ಯೆ ನಾಲ್ಕಕ್ಕೇರಲಿದೆ’ ಎಂದು ಹೇಳಿದರು.

ಸುಧಾ, ಮಯೂರ ಓದಿರಿ

ಕೋಟಾ: ನಾಪತ್ತೆಯಾಗಿದ್ದ ಯುವಕ 23 ದಿನಗಳ ಬಳಿಕ ಪತ್ತೆ



ಕೋಟಾ (ಪಿಟಿಐ): ನೀಟ್ ಪರೀಕ್ಷೆ ಬರೆದ ಮರುದಿನವಾದ ಮೇ 6ರಂದು ಕೋಟಾದಿಂದ ನಾಪತ್ತೆಯಾಗಿದ್ದ ಯುವಕನನ್ನು ಆತನ ತಂದೆ ಗೋವಾದ ರೈಲ್ವೆ ನಿಲ್ದಾಣದಲ್ಲಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

₹ 11,000ದೊಂದಿಗೆ ಕೋಟಾ ತ್ಯಜಿಸಿದ್ದ ನೀಟ್ ಆಕಾಂಕ್ಷಿ ರಾಜೇಂದ್ರ ಪ್ರಸಾದ್ ಮೀನಾ (19) ಅವರು, 23 ದಿನಗಳ ಕಾಲ ದೇಶದ ವಿವಿಧೆಡೆ ರೈಲುಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸಿದ್ದರು. ಪೋಷಕರ ಕೈಗೆ ಸಿಕ್ಕಾಗ ಯುವಕನ ಕಿಸೆಯಲ್ಲಿ ಇನ್ನೂ ₹ 6,000 ನಗದು ಇತ್ತು.

‘ಕೋಟಾ ತ್ಯಜಿಸುವ ಮುನ್ನ ಮೀನಾ ತನ್ನ ಬಳಿಯಿದ್ದ ಪುಸ್ತಕಗಳು, ಮೊಬೈಲ್ ಫೋನ್ ಮತ್ತು ಎರಡು ಸೈಕಲ್‌ಗಳನ್ನು ಮಾರಿ ₹ 11,000 ಸಂಗ್ರಹಿಸಿದ್ದ’ ಎಂದು ಅವರ ಚಿಕ್ಕಪ್ಪ ಮಥುರಾ ಲಾಲ್ ಮಾಹಿತಿ ನೀಡಿದರು.

ನೀಟ್ ಪರೀಕ್ಷೆ ಬರೆದ ಮರು ದಿನ ತನ್ನ ಪೋಷಕರಿಗೆ ಮೊಬೈಲ್‌ನಲ್ಲಿ ಸಂದೇಶ ರವಾನಿಸಿದ್ದ ಮೀನಾ, ‘ನನಗೆ ಹೆಚ್ಚಿನ ಅಧ್ಯಯನ ನಡೆಸಲು ಇಷ್ಟವಿಲ್ಲ. ಐದು ವರ್ಷಗಳವರೆಗೆ ಮನೆಬಿಟ್ಟು ಹೋಗುತ್ತಿದ್ದೇನೆ’ ಎಂದು ತಿಳಿಸಿದ್ದರು. ತನ್ನ ಬಳಿ ₹8,000 ಇದ್ದು, ಅಗತ್ಯವಿದ್ದರೆ ಕುಟುಂಬವನ್ನು ಸಂಪರ್ಕಿಸುವುದಾಗಿ ಸಂದೇಶದಲ್ಲಿ ಹೇಳಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪೋಷಕರೇ ರಚಿಸಿದ ನಾಲ್ಕು ತಂಡ: ಯುವಕನ ಪತ್ತೆಗೆ ಕೋಟಾ ಪೊಲೀಸರು ಸರಿಯಾದ ಶೋಧ ನಡೆಸಿಲ್ಲ ಎಂದು ಆರೋಪಿಸಿದ ಪೋಷಕರು, ತಾವೇ ತಮ್ಮ ಸಂಬಂಧಿಕರ ನಾಲ್ಕು ತಂಡ ರಚಿಸಿಕೊಂಡು ದೇಶದ ವಿವಿಧೆಡೆ ಶೋಧ ನಡೆಸಿದ್ದೆವು ಎಂದು ಹೇಳಿದ್ದಾರೆ.

‘ಕೋಟಾದಿಂದ ತೆರಳಿದ ಮೀನಾ ಎರಡು ದಿನ ಪುಣೆಯಲ್ಲಿದ್ದನು. ಅಲ್ಲಿ ₹1,500 ಕೊಟ್ಟು ಸೆಕೆಂಡ್ ಹ್ಯಾಂಡ್ ಮೊಬೈಲ್ ಖರೀದಿಸಿ, ತನ್ನ ಆಧಾರ್ ಕಾರ್ಡ್ ಬಳಸಿ ಸಿಮ್ ಅನ್ನು ಖರೀದಿಸಿದ್ದಾನೆ. ಬಳಿಕ ಅಮೃತಸರಕ್ಕೆ ಪ್ರಯಾಣಿಸಿ, ಸುವರ್ಣ ಮಂದಿರ ವೀಕ್ಷಿಸಿದ್ದಾನೆ. ನಂತರ ಜಮ್ಮುವಿನ ವೈಷ್ಣೋದೇವಿಗೂ ತೆರಳಿದ್ದಾನೆ’ ಎಂದು ಲಾಲ್ ಅವರು ವಿವರಿಸಿದರು.

‘ಕೋಟಾ ಪೊಲೀಸರು ಸರಿಯಾಗಿ ಪ್ರಯತ್ನಿಸಿದ್ದರೆ, ಮೀನಾನನ್ನು ಪುಣೆಯಲ್ಲಿ ಸಿಮ್ ಖರೀದಿಸಿದಾಗಲೇ ಪತ್ತೆ ಹಚ್ಚಬೇಕಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ಜಮ್ಮುವಿನ ಬಳಿಕ ಮೀನಾ ಆಗ್ರಾಕ್ಕೆ ಹೋಗಿ ತಾಜ್‌ಮಹಲ್ ನೋಡಿ, ಬಳಿಕ ಒಡಿಶಾದ ಜಗನ್ನಾಥ ಪುರಿಧಾಮಕ್ಕೆ ರೈಲು ಹತ್ತಿದ್ದಾನೆ. ಅಲ್ಲಿಂದ ತಮಿಳುನಾಡಿನ ರಾಮೇಶ್ವರಂಗೆ ತೆರಳಿದ್ದಾನೆ. ನಂತರ ಕನ್ಯಾಕುಮಾರಿ ಮತ್ತು ತಿರುವನಂತಪುರಂಗೂ ಭೇಟಿ ನೀಡಿದ್ದಾನೆ’ ಎಂದು ಕುಟುಂಬದವರು ವಿವರಿಸಿದ್ದಾರೆ.

‘ನಂತರ ಆತ ಗೋವಾಕ್ಕೆ ಬಂದಿದ್ದಾನೆ. ಅಲ್ಲಿ ಬುಧವಾರ ಬೆಳಿಗ್ಗೆ ಮಡಗಾಂವ್ ರೈಲು ನಿಲ್ದಾಣದಲ್ಲಿ ರೈಲು ಹತ್ತುವಾಗ, ತಂದೆ ಜಗದೀಶ್ ಪ್ರಸಾದ್ ಅವರು ಪತ್ತೆ ಹಚ್ಚಿದ್ದಾರೆ’ ಎಂದು ಯುವಕನ ಚಿಕ್ಕಪ್ಪ ವಿವರಿಸಿದರು.

ಇಷ್ಟು ದಿನವೂ ವಿವಿಧ ರೈಲುಗಳಲ್ಲಿ ಸಾಮಾನ್ಯ ಬೋಗಿಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸಿದ್ದ ಯುವಕ ₹6,000 ಉಳಿಸುವಲ್ಲಿಯೂ ಯಶಸ್ವಿಯಾಗಿದ್ದಾನೆ. ಮೀನಾ ಅವರ ಪೋಷಕರು ಕೋಟಾದ ವಿಜ್ಞಾನ ನಗರದ ಪೊಲೀಸ್ ಠಾಣೆಯಲ್ಲಿ ಮಗನ ನಾಪತ್ತೆ ಕುರಿತು ದೂರು ದಾಖಲಿಸಿದ್ದರು.

ಸುಲಭ, ನಿಖರ ಶಸ್ತ್ರಚಿಕಿತ್ಸೆಗೆ ಸಹಕಾರಿ • ₹ 20 ಕೋಟಿ ವೆಚ್ಚದಲ್ಲಿ ಅಳವಡಿಕೆಗೆ ಕ್ರಮ

ನೆಫ್ರೊ ಯುರಾಲಾಜಿ: ಶಸ್ತ್ರಚಿಕಿತ್ಸೆಗೆ ರೊಬೊಟ್

• ವರುಣ ಹೆಗಡೆ



ನೆಫ್ರೊ–ಯುರಾಲಜಿ ಸಂಸ್ಥೆ

ಬೆಂಗಳೂರು: ಮೂತ್ರಪಿಂಡ ಹಾಗೂ ಮೂತ್ರಕೋಶ ಸಮಸ್ಯೆಗೆ ಒಳಗಾದವರಿಗೆ ಶಸ್ತ್ರಚಿಕಿತ್ಸೆ ನಡೆಸಲು ಇಲ್ಲಿನ ನೆಫ್ರೊ-ಯುರಾಲಾಜಿ ಸಂಸ್ಥೆಗೆ ಶೀಘ್ರದಲ್ಲಿಯೇ ಅತ್ಯಾಧುನಿಕ ರೊಬೊಟಿಕ್ ಯಂತ್ರ ಸೇರ್ಪಡೆಯಾಗಲಿದೆ. ಇದರಿಂದ ಸುಲಭ ಮತ್ತು ನಿಖರ ಶಸ್ತ್ರಚಿಕಿತ್ಸೆ ಸಾಧ್ಯವಾಗಲಿದೆ.

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಈ ಸ್ವಾಯತ್ತ ಸಂಸ್ಥೆಗೆ, ರಾಜ್ಯದ ವಿವಿಧೆಡೆಯ ಜತೆಗೆ ನೆರೆಯ ರಾಜ್ಯಗಳಿಂದಲೂ ರೋಗಿಗಳು ಬರುತ್ತಾರೆ. ಮೂತ್ರಪಿಂಡ ಮತ್ತು ಮೂತ್ರಕೋಶ ಸಮಸ್ಯೆಗಳಿಗೆ ಸಂಬಂಧಿಸಿದ ತೃತೀಯ ಹಂತದ ಚಿಕಿತ್ಸೆಗೆ ಶಿಫಾರಸು ಆಧಾರದಲ್ಲಿಯೂ ವಿವಿಧ ಆಸ್ಪತ್ರೆಗಳಿಂದ ಬಂದು ದಾಖಲಾಗುತ್ತಾರೆ. ಆದ್ದರಿಂದ ಶಸ್ತ್ರಚಿಕಿತ್ಸೆ ಸುಲಭವಾಗಿಸಲು ರೊಬೊಟ್ ಯಂತ್ರವನ್ನು ಸರ್ಕಾರವು ಸಂಸ್ಥೆಯಲ್ಲಿ ಅಳವಡಿಸುತ್ತಿದೆ. ಇದಕ್ಕೆ ₹ 20 ಕೋಟಿ ವೆಚ್ಚವಾಗಲಿದ್ದು, ಚುನಾವಣೆ ನೀತಿ ಸಂಹಿತೆ ಅಂತ್ಯವಾದ ಬಳಿಕ ಟೆಂಡರ್ ಪ್ರಕ್ರಿಯೆ ನಡೆಯಲಿದೆ.

ಮಧುಮೇಹ, ಅಧಿಕ ರಕ್ತದೊತ್ತಡ, ನೋವು ನಿವಾರಕ ಮಾತ್ರೆಗಳ ಸೇವನೆ ಸೇರಿ ವಿವಿಧ ಕಾರಣಗಳಿಂದ ಮೂತ್ರಪಿಂಡ ವೈಫಲ್ಯ ಮತ್ತು ಮೂತ್ರಕೋಶ ಈ ಸಮಸ್ಯೆಗೆ ಒಳಗಾಗುವವರ ಸಂಖ್ಯೆ ಹೆಚ್ಚಳವಾಗಿದೆ. ಇದರಿಂದಾಗಿ ಸಂಸ್ಥೆ ಬರುವ ರೋಗಿಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ 4.21 ಲಕ್ಷ ಮಂದಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ಅವಧಿಯಲ್ಲಿ 42 ಸಾವಿರಕ್ಕೂ ಅಧಿಕ ಮಂದಿಗೆ ಶಸ್ತ್ರಚಿಕಿತ್ಸೆ ಹಾಗೂ 125 ಮಂದಿಗೆ ಮೂತ್ರಪಿಂಡ ಕಸಿ ಮಾಡಲಾಗಿದೆ.

ಹಾಲಿ ಘಟಕದಲ್ಲೇ ಅಳವಡಿಕೆ: ಸಂಸ್ಥೆಯು 160 ಹಾಸಿಗೆಗಳನ್ನು ಹೊಂದಿದ್ದು, ಆಧುನಿಕ ಅರಿವಳಿಕೆ ಉಪಕರಣಗಳನ್ನು ಒಳಗೊಂಡ ನಾಲ್ಕು ದೊಡ್ಡ ಶಸ್ತ್ರಚಿಕಿತ್ಸೆ ಕೊಠಡಿ ಹಾಗೂ ಒಂದು ಚಿಕ್ಕ ಶಸ್ತ್ರಚಿಕಿತ್ಸೆ ಕೊಠಡಿಯನ್ನು ಹೊಂದಿದೆ. ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಾಗಿ ‘ಎಂಡೊ ಯುರೊಲಜಿಕಲ್’ ಉಪಕರಣ ಹಾಗೂ ‘ಸಿ-ಆರ್ಮ್’ ಯಂತ್ರಗಳನ್ನು ಒಳಗೊಂಡಿದೆ. ಇದೇ ಘಟಕದಲ್ಲಿ ರೊಬೊಟಿಕ್ ಯಂತ್ರವನ್ನೂ ಅಳವಡಿಸಿ, ಕಾರ್ಯಾಚರಣೆ ಮಾಡಲಾಗುತ್ತದೆ.

‘ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಿಂತ ರೊಬೊಟಿಕ್ ಶಸ್ತ್ರಚಿಕಿತ್ಸೆ ಹೆಚ್ಚು ನಿಖರ ಹಾಗೂ ಪರಿಣಾಮಕಾರಿ. ವ್ಯಕ್ತಿ ಕೂಡ ಬೇಗ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಆಸ್ಪತ್ರೆಯ ಅವಧಿಯೂ ಕಡಿತವಾಗಲಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಕೇಶವಮೂರ್ತಿ ಆರ್. ವಿವರಿಸಿದರು.

‘ಕಾರ್ಯಾಚರಣೆ ಬಗ್ಗೆ ತರಬೇತಿ’

‘ರೊಬೊಟಿಕ್ ಯಂತ್ರದಿಂದಾಗಿ ಶಸ್ತ್ರಚಿಕಿತ್ಸೆ ಸುಲಭವಾಗಲಿದೆ. ಒಬ್ಬ ವೈದ್ಯರು ಯಂತ್ರದ ಕಾರ್ಯಾಚರಣೆ ಮಾಡಿದರೆ, ಇನ್ನೊಬ್ಬ ಸಹಾಯಕರು ಇರುತ್ತಾರೆ. ಅಮೆರಿಕ, ಇಂಗ್ಲೆಂಡ್ ಸೇರಿ ಬೇರೆ ದೇಶಗಳ ಕಂಪನಿಗಳು ಈ ಯಂತ್ರವನ್ನು ಪೂರೈಸುತ್ತಿವೆ. ಯಂತ್ರ ಖರೀದಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಬಳಿಕ ಪೂರೈಕೆದಾರರು ಯಂತ್ರದ ನಿರ್ವಹಣೆ ಹಾಗೂ ಕಾರ್ಯಾಚರಣೆ ಬಗ್ಗೆ ವೈದ್ಯರಿಗೆ ವಿಶೇಷ ತರಬೇತಿಯನ್ನು ಒದಗಿಸುತ್ತಾರೆ. ಬಳಿಕ ಈ ಯಂತ್ರದಿಂದ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ’ ಎಂದು ಡಾ. ಕೇಶವಮೂರ್ತಿ ಆರ್. ತಿಳಿಸಿದರು.

ಅಂಕಿ ಅಂಶಗಳು

400 ಸಂಸ್ಥೆಗೆ ಭೇಟಿ ನೀಡುವ ದೈನಂದಿನ ಹೊರರೋಗಿಗಳ ಸರಾಸರಿ ಸಂಖ್ಯೆ

200 ಪ್ರತಿನಿತ್ಯ ಪಾಳಿಯಲ್ಲಿ ನೀಡಲಾಗುವ ಡಯಾಲಿಸಿಸ್



ನಾಳೆ ಡಬ್ಬಿಗೇನು?




ಪವಿತ್ರಾ ಭಟ್

ಮಕ್ಕಳಿಗೆ ಇಷ್ಟವಾಗುವ ಆಹಾರ ತಯಾರಿಸಿ ತಿನ್ನಿಸುವುದೆಂದರೆ ಅಮ್ಮಂದಿರಿಗೆ ಏಳು ಕೆರೆ ನೀರು ಕುಡಿದ ಅನುಭವ. ಹಿಂದಿನ ದಿನ ರಾತ್ರಿಯಿಂದಲೇ ಅವರಿಗೆ ಯಾವುದು ಇಷ್ಟ, ಆರೋಗ್ಯಕ್ಕೆ ಯಾವುದು ಒಳ್ಳೆಯದು, ಲಂಚ್ ಬಾಕ್ಸ್‌ನಲ್ಲಿ ಏನಿಟ್ಟರೆ ಮಧ್ಯಾಹ್ನ ಹೊಟ್ಟೆ ಸೇರುತ್ತದೆ ಎನ್ನುವ ಚಿಂತೆ ಶುರುವಾಗಿರುತ್ತದೆ. ಬೆಳಿಗ್ಗೆ ಅಮ್ಮಾ ಲಂಚ್ ಬಾಕ್ಸ್ ರೆಡಿನಾ? ಎಂದು ಕೂಗಿದರೆ ಅಮ್ಮಂದಿರ ಎದೆ ಬಡಿತ ಜೋರಾಗುತ್ತದೆ. ಯೋಚಿಸಿ ಡಬ್ಬಿ ತಯಾರು ಮಾಡುವಷ್ಟರಲ್ಲಿ ಅಮ್ಮಂದಿರು ಹೈರಾಣಾಗಿರುತ್ತಾರೆ.

ಉದ್ಯೋಗದಲ್ಲಿರುವ ಮಹಿಳೆಯರಂತೂ ಬೆಳಗ್ಗೆ ತರಾತುರಿಯಲ್ಲಿ ಸುಲಭದಲ್ಲಿ ಮಾಡುವ ಆಹಾರವನ್ನೇ ಹೆಚ್ಚು ಆಯ್ಕೆ ಮಾಡುತ್ತಾರೆ. ಈ ಮಧ್ಯೆ, ಬೆಳೆಯುವ ವಯಸ್ಸಿನಲ್ಲಿ ಅಗತ್ಯವಾದ ಪೋಷಕಾಂಶವನ್ನು ಪೂರೈಸುವ ಆಹಾರ ನೀಡಬೇಕೆನ್ನುವುದನ್ನು ಮರೆಯುವಂತಿಲ್ಲ.

ಚಪಾತಿಯೊಂದಿಗೆ ಪಲ್ಯ: ಶಾಲೆಯಲ್ಲಿ ಮಕ್ಕಳು ಸ್ವತಃ ಆಹಾರ ಸೇವಿಸುವುದರಿಂದ ತಿನ್ನಲು ಸುಲಭವಾಗಿರುವುದನ್ನು ತಯಾರಿಸಿಕೊಡುವುದು ಒಳ್ಳೆಯದು ಎನ್ನುತ್ತಾರೆ ಆಹಾರ ತಜ್ಞೆ ಡಾ. ಹೇಮಾ. ಅದಕ್ಕಾಗಿ ಚಪಾತಿಯೊಳಗೆ ಟೊಮೆಟೊ, ದ್ವಿದಳ ಧಾನ್ಯಗಳಾದ ಅಲಸಂದೆ, ಹುರುಳಿ, ಕಡಲೆಕಾಯಿಗಳ ಪಲ್ಯ, ರೋಸ್ಟ್ ಮಾಡಿರುವ ಪನ್ನೀರ್, ತರಕಾರಿಗಳ ಪಲ್ಯವನ್ನು ಹಾಕಿ ರೋಲ್‌ನಂತೆ ಮಾಡಿಕೊಟ್ಟರೆ ರುಚಿಸಬಹುದು. ತಿನ್ನಲೂ ಸುಲಭ, ಆರೋಗ್ಯಕ್ಕೂ ಒಳ್ಳೆಯದು.

> ಮಕ್ಕಳ ಊಟದಲ್ಲಿ ಮೆನುವಿನಲ್ಲಿ ಏನಿರಬೇಕು? ಶಾಲೆಗೆ ಹೋಗುವಾಗ ಮಕ್ಕಳ ಡಬ್ಬಿಗೇನು ಎಂಬ ಚಿಂತೆ ಅಮ್ಮಂದಿರಿಗೆ ಕಾಡದೇ ಇರದು.



ಬಗೆ ಬಗೆ ಪರೋಟಾ

ಸಾಮಾನ್ಯವಾಗಿ ಮಕ್ಕಳು ಸೊಪ್ಪು, ತರಕಾರಿಗಳೆಂದರೆ ಮೂಗು ಮುರಿಯುತ್ತಾರೆ. ಹೀಗಾಗಿ ರೊಟ್ಟಿ ಅಥವಾ ಚಪಾತಿ ಹಿಟ್ಟಿನೊಂದಿಗೆ ಸೊಪ್ಪು ಅಥವಾ ತರಕಾರಿಗಳು, ಬೇಯಿಸಿದ ಹಸಿರು ಬಟಾಣಿ, ಹೆಸರುಕಾಳನ್ನು ಸೇರಿಸಿ ಪರೋಟಾದಂತೆ ಮಾಡಿಕೊಡಬಹುದು. ಬೀಟ್ರೂಟ್, ಕ್ಯಾರೆಟ್‌ಗಳನ್ನು ರುಬ್ಬಿ ಅದರ ರಸವನ್ನು ಹಿಟ್ಟಿನೊಂದಿಗೆ ಸೇರಿಸಿ ಪರೋಟಾ ರೀತಿ ಮಾಡಿಕೊಟ್ಟರೆ ಬಣ್ಣ ಬಣ್ಣವಾಗಿ ಆಕರ್ಷಕವಾಗಿಯೂ ಕಾಣುತ್ತದೆ. ರುಚಿಯಾಗಿಯೂ ಇರುತ್ತದೆ.

ತರಕಾರಿ ಫ್ರೈಗಳು

ಮಕ್ಕಳು ಬಣ್ಣವನ್ನು ಇಷ್ಟಪಡುತ್ತಾರೆ. ಅವರ ತಿಂಡಿಯಲ್ಲೂ ಬಣ್ಣ ಕಂಡರೆ ಖುಷಿಯಿಂದ ತಿನ್ನುತ್ತಾರೆ. ಊಟದ ಡಬ್ಬಿಯಲ್ಲಿ ತರಕಾರಿಗಳನ್ನು ಫ್ರೈ ಮಾಡಿಕೊಡಿ. ಆಲೂಗೆಡ್ಡೆ, ಹೂಕೋಸು, ಗೆಣಸು, ಬ್ರೊಕೊಲಿಯಂತಹ ತರಕಾರಿಗಳಿಗೆ ಚಿಟಿಕೆ ಉಪ್ಪು, ಕಾಳುಮೆಣಸಿನ ಪುಡಿ ಹಾಕಿದರೆ ರುಚಿ ಹೆಚ್ಚು.

ಚಂದವಾಗಿ ಅಲಂಕರಿಸಿ

ಮಕ್ಕಳಿಗೆ ಊಟದ ಡಬ್ಬಿ ತಯಾರಿಸುವಾಗ ಪೋಷಕಾಂಶದ ಬಗ್ಗೆ ಯೋಚಿಸಿದಷ್ಟೇ ಅವರು ಡಬ್ಬಿಯನ್ನು ಅಲಂಕರಿಸುವುದೂ ಮುಖ್ಯ. . ಒಂದೆಡೆ ಚಪಾತಿ ರೋಲ್‌ಗಳನ್ನಿಟ್ಟರೆ ಅದರ ಎದುರು ಫ್ರೈ ಮಾಡಿದ ತರಕಾರಿಗಳನ್ನಿಡಿ. ಅದರ ಜತೆಗೆ ಚಾಕೋಲೇಟ್ ಬದಲು ಬೆಲ್ಲದ ಲಡ್ಡು, ರಾಗಿ, ಎಳ್ಳಿನ ಹಲ್ವಾಗಳನ್ನಿಡಿ.

ಊಟದ ಡಬ್ಬಿ ಆಯ್ಕೆಯಲ್ಲಿ ಎಚ್ಚರವಿರಲಿ



ಊಟಕ್ಕೆ ಬಿಸಿ ಪದಾರ್ಥಗಳು, ಹಣ್ಣುಗಳನ್ನು ಹಾಕುವುದರಿಂದ ಡಬ್ಬಿಯ ಆಯ್ಕೆಯ ಬಗ್ಗೆ ಗಮನವಿರಬೇಕು. ಪ್ಲಾಸ್ಟಿಕ್ ಡಬ್ಬಿಯ ಬಳಕೆ ಬೇಡವೇ ಬೇಡ. ಗ್ಲಾಸ್ ಡಬ್ಬಿಗಳನ್ನು ಆಯ್ಕೆ ಮಾಡಿದರೆ ಅವು ಭಾರವಾಗಿರುವುದರಿಂದ ಮಕ್ಕಳಿಗೆ ಕೊಂಡೊಯ್ಯಲು ಕಷ್ಟವಾಗಬಹುದು. ಉತ್ತಮ ಗುಣಮಟ್ಟದ ಸ್ಟೀಲ್ ಪಾತ್ರೆಗಳನ್ನು ಬಳಸಬಹುದು. ಅದು ಹಗುರವಾಗಿದ್ದರೆ ಇನ್ನೂ ಒಳ್ಳೆಯದು. ಒಂದೇ ಡಬ್ಬಿಯಲ್ಲಿ ಹಲವು ಕಂಪಾರ್ಟ್‌ಮೆಂಟ್‌ಗಳಿರುವ ಡಬ್ಬಿ ಕೊಂಡರೆ ಒಂದರಲ್ಲೇ ಎಲ್ಲಾ ಬಗೆಯ ಆಹಾರವನ್ನು ಹಾಕಿಕೊಡಬಹುದು.

ಮನೆಯ ಸದಸ್ಯರು ಕೈಜೋಡಿಸುವುದು ಮುಖ್ಯ

ಎಲ್ಲವನ್ನೂ ಅಮ್ಮಂದಿರೇ ಮಾಡಿಕೊಡಬೇಕು ಎಂದರೆ ಕಷ್ಟ. ಮನೆಯ ಇತರ ಸದಸ್ಯರು ತಮ್ಮ ಕೆಲಸವನ್ನು ಮಾಡಿಕೊಂಡರೆ ಮಹಿಳೆಯರಿಗೆ ತುಸು ಹಗುರವಾಗುತ್ತದೆ. ಮನೆಯಲ್ಲಿರುವ ಅಪ್ಪ, ಅಜ್ಜಿ-ಅಜ್ಜಂದಿರು ಬಾಕ್ಸ್‌ನಲ್ಲಿ ಅಂದಿನ ಆಹಾರವನ್ನು ತುಂಬಿಕೊಡುವುದೋ ಅಥವಾ ಬೆಳಗಿನ ತಿಂಡಿಯನ್ನು ತಿನ್ನಿಸುವುದೋ ಮಾಡಿದರೆ ಮಕ್ಕಳು ಒತ್ತಡವಿಲ್ಲದೆ ಆರಾಮಾಗಿ ತಿಂದು ಶಾಲೆಗೆ ಹೊರಡುತ್ತಾರೆ.

ಬಿಡುವಿನ ವೇಳೆಯಲ್ಲಿ ತಿನ್ನಲು ಸ್ನ್ಯಾಕ್ಸ್ ಕೊಡಿ

ದಿನದ ಬಹುತೇಕ ಸಮಯವನ್ನು ಮಕ್ಕಳು ಶಾಲೆಯಲ್ಲೇ ಕಳೆಯುತ್ತಾರೆ. ಹೀಗಾಗಿ ತರಗತಿಗಳ ಬಿಡುವಿನ ವೇಳೆ ತಿನ್ನಲು ಊಟದ ಡಬ್ಬಿಯೊಂದಿಗೆ ಸ್ನ್ಯಾಕ್ಸ್ ಕೂಡ ಇರಲಿ.

ಡ್ರೈಫ್ರೂಟ್ಸ್‌ಗಳ ಲಾಡು, ಒಣದ್ರಾಕ್ಷಿ ಶೇಂಗಾ ಬೀಜದ ಚಿಕ್ಕಿ, ನೆನೆಸಿದ ಬಾದಾಮಿಗಳನ್ನು ಹಾಕಿಕೊಡಿ. ಪಿಸ್ತಾ, ಗೋಡಂಬಿ, ಕಿವಿ, ಅಂಜೂರ, ಏಪ್ರಿಕಾಟ್‌ನಂತಹ ಒಣ ಹಣ್ಣುಗಳನ್ನಿಡಿ. ತಾಜಾ ಹಣ್ಣುಗಳನ್ನು ಕತ್ತರಿಸಿ ಡಬ್ಬಿಯಲ್ಲಿ ಕೊಡಬಹುದು. ನೆನಪಿಡಿ, ಕೆಲವು ಹಣ್ಣುಗಳನ್ನು ಹೆಚ್ಚು ಕತ್ತರಿಸಿಟ್ಟರೆ ತಿನ್ನಲು ಯೋಗ್ಯವಾಗಿರುವುದಿಲ್ಲ. ಹೀಗಾಗಿ ಹಣ್ಣುಗಳ ಆಯ್ಕೆಯ ಬಗ್ಗೆ ಗಮನವಿರಲಿ. ಕ್ಯಾರೆಟ್, ಸೌತೆಕಾಯಿ, ಬೀಟ್ರೂಟ್‌ನಂತಹ ತರಕಾರಿಗಳನ್ನು ಕತ್ತರಿಸಿ ಬಾಕ್ಸ್‌ನಲ್ಲಿಟ್ಟರೆ ಮಕ್ಕಳು ತಿನ್ನಬಹುದು.



ಮಕ್ಕಳು ಹಟ ಮಾಡುತ್ತಾರೆಂದು ಅವರಿಗಿಷ್ಟದ ತಿಂಡಿಯನ್ನೇ ನೀಡುವುದು ಒಳ್ಳೆಯದಲ್ಲ. ಅನ್ನ-ರಸಂ, ಚಿತ್ರಾನ್ನದಂತಹ ಆಹಾರಗಳಿಂದ ಮಕ್ಕಳಿಗೆ ಪೋಷಕಾಂಶ ಪೂರ್ತಿಯಾಗುವುದಿಲ್ಲ. ಆಹಾರ ಸೇವನೆ ಎಷ್ಟು ಎನ್ನುವುದಕ್ಕಿಂತ ಏನು ಎನ್ನುವುದು ಮುಖ್ಯವಾಗುತ್ತದೆ. ಮಕ್ಕಳಿಗೆ ಚಿಕ್ಕಂದಿನಂದಲೇ ಆಹಾರದ ಆಯ್ಕೆಯ ಬಗ್ಗೆ ಅರಿವು ಮೂಡಿಸಬೇಕು. ಋತುಮಾನದ ಹಣ್ಣುಗಳು, ತರಕಾರಿಗಳಿಂದ ತಯಾರಿಸಿದ ಆಹಾರ ಮಕ್ಕಳನ್ನು ಆರೋಗ್ಯವಾಗಿರುವಂತೆ ಮಾಡುತ್ತದೆ.

ಡಾ | ಹೇಮಾ ಅರವಿಂದ್, ಡಯೆಟಿಷಿಯನ್, ರಾಮಯ್ಯ ಆಸ್ಪತ್ರೆ ಬೆಂಗಳೂರು

ಟ್ರೆಂಡ್ ಸೃಷ್ಟಿಸುವ ಆ್ಯಂಕ್ಲೆಟ್‌ಗಳು

ಸಿಂಧು ಕೆ.ಟಿ.

ಫ್ಯಾಷನ್

ಕಾಲ್ಗೆಜ್ಜೆ ಎಂದಾಕ್ಷಣ ಗಲ್ ಗಲ್ ಎಂಬ ಸಪ್ಪಳದೊಂದಿಗೆ ಗುಂಗು ಹಿಡಿಸುವ ಕಾಲ ಹೊರಟು ಹೋಯಿತು. ಸದ್ದಿಲ್ಲದ ಕಾಲ್ಗೆಜ್ಜೆಗಳು, ಆ್ಯಂಕ್ಲೆಟ್, ಕಾಲಂದುಗೆಗಳು ಹೊಸ ಬಗೆಯ ವಿನ್ಯಾಸದೊಂದಿಗೆ ಮಾರುಕಟ್ಟೆಯಲ್ಲಿ ಟ್ರೆಂಡ್ ಸೃಷ್ಟಿಸುತ್ತಿವೆ.

ಎರಡೂ ಕಾಲುಗಳಿಗೆ ಕಾಲ್ಗೆಜ್ಜೆ ಧರಿಸುವ ಬದಲು ಒಂದು ಕಾಲಿಗೆ ಧರಿಸುವುದು ಈಗೀಗ ಫ್ಯಾಷನ್. ಲಿಂಗಭೇದವಿಲ್ಲದೇ ಕಾಲಿನ ಆಭರಣಗಳು ಎಲ್ಲರನ್ನೂ ಆಕರ್ಷಿಸುತ್ತಿವೆ. ಚಿನ್ನ, ಬೆಳ್ಳಿ ಕಾಲ್ಗಡಗಗಳನ್ನು ಹಿಂದಿಕ್ಕಿ ಬಗೆ ಬಗೆಯ ದುಬಾರಿ ಹರಳು, ಮಣಿ, ಲೆದರ್, ಬ್ಲಾಕ್ ಮೆಟಲ್, ಗೋಲ್ಡ್ ಪ್ಲೇಟೆಡ್, ಥ್ರೆಡ್, ಶೇಲ್, ಕಲ್ಲು, ಪ್ಲಾಸ್ಟಿಕ್, ಗಾಜು, ತಾಮ್ರ, ಕಂಚು,ವಜ್ರ, ಮುತ್ತು,ಹವಳ, ಮರದ ತುಂಡು ಬಳಸಿ ವಿನ್ಯಾಸಗೊಳ್ಳುತ್ತಿರು ಕಾಲ್ಗೆಜ್ಜೆಗಳಿಗೆ ಮನಸೋಲದವರಿಲ್ಲ. ಆ್ಯಂಕ್ಲೆಟ್ ಈಗ ಪುರುಷರನ್ನು ಸೆಳೆಯುತ್ತಿದೆ. ಆದರೆ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆ ಇರುತ್ತದೆ ಅಷ್ಟೇ. ಪುರುಷರು ಬಳಸುವ ಆ್ಯಂಕ್ಲೆಟ್ ಎಂದರೆ ದಾರ, ಕವಡೆ ಮತ್ತು ಸರಪಳಿ ಶೈಲಿಯವು.

ಫ್ಯಾನ್ಸಿ ಆ್ಯಂಕ್ಲೆಟ್‌ಗಳನ್ನು ಸುಲಭವಾಗಿ ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದು. ಒಂದಿಷ್ಟು ಬೇರೆ, ಬೇರೆ ವಿನ್ಯಾಸದ, ಬಣ್ಣದ ಮಣಿಗಳು, ಚಿಪ್ಪಿಗಳು ಮತ್ತು ದಾರಗಳನ್ನು ಬಳಸಿ ಕಲರ್‌ಫುಲ್ ಗೆಜ್ಜೆಗಳನ್ನು ತಯಾರಿಸಬಹುದು.

ಪರಿಸರಸ್ನೇಹಿ ಆ್ಯಂಕ್ಲೆಟ್: ರಾಸಾಯನಿಕಗಳ ಬಳಕೆಯಿಲ್ಲದೆ ಭತ್ತ, ಅಂಟುವಾಳ, ನೀಲಗಿರಿ ಬೀಜ, ಗುಲಗಂಜಿ, ಕಾಶಿಮಣಿ, ಬೀನ್ಸ್, ಹುಣಸೆಬೀಜ, ಸೀತಾಫಲ, ಪಪ್ಪಾಯ ಬೀಜಗಳಿಂದಲೂ ಆ್ಯಂಕ್ಲೆಟ್ ತಯಾರಿಸಬಹುದು.

ಕ್ರಿಸ್ಟಲ್ ಆ್ಯಂಕ್ಲೆಟ್ಸ್: ಸ್ಫಟಿಕ ಮತ್ತು ಇತರ ಹರಳುಗಳಿಂದ ಮಾಡಿದ ಆ್ಯಂಕ್ಲೆಟ್ ಹೊಳಪಿನಿಂದ ಕೂಡಿರುತ್ತದೆ. ದುಬಾರಿ ಎನಿಸಿದರೂ ಎಲಿಗೆಂಟ್ ಆಗಿ ಕಾಣುತ್ತದೆ.

ಮಣಿಯ ಆ್ಯಂಕ್ಲೆಟ್: ದಿನಬಳಕೆಗೆ ಹೆಚ್ಚು ಸೂಕ್ತವಾಗಿದ್ದು, ಸಣ್ಣ, ದೊಡ್ಡ, ಬೇರೆ ಬೇರೆ ಆಕಾರದಲ್ಲಿರುವ ಮಣಿಗಳನ್ನು ಬಳಸಿ ಆ್ಯಂಕ್ಲೆಟ್ ಧರಿಸಬಹುದು. ಚಿನ್ನ ಅಥವಾ ಬೆಳ್ಳಿ ಲೋಹದಲ್ಲಿ ಮಣಿ ಬಳಸಿ ವಿನ್ಯಾಸಗೊಳಿಸಬಹುದು.

ಕ್ಯೂಬನ್-ಲಿಂಕ್: ಕ್ಯೂಬನ್ ಲಿಂಕ್ ಕಾಲ್ಗೆಜ್ಜೆಗಳನ್ನುಕರ್ಬ್ ಚೈನ್ ಆಂಕ್ಲೆಟ್ಸಗಳು ಎಂದೂ ಕರೆಯಲಾಗುತ್ತದೆ. ಕ್ಲಾಸಿಕ್ ಲುಕ್ ಹೊಂದಿರುವ ಇವು ಹೆಚ್ಚು ಗಟ್ಟಿಯಾಗಿದ್ದು, ಬಾಳಿಕೆ ಬರುತ್ತವೆ. ಎಲ್ಲ ರೀತಿಯ ಉಡುಪಿಗೂ ಹೊಂದಿಕೊಳ್ಳುವ ಸರಳವಾದ ವಿನ್ಯಾಸದಲ್ಲಿ ದೊರೆಯುತ್ತದೆ. ಬೆಳ್ಳಿಯ ಬಣ್ಣದಲ್ಲಿ ಹೆಚ್ಚು ಮಾರಾಟವಾಗುತ್ತಿದ್ದು, ಬಂಗಾರದ ಬಣ್ಣಗಳಲ್ಲಿಯು ದೊರೆಯುತ್ತದೆ.



ಸಂಕೇತ ಮತ್ತು ಅಕ್ಷರ ಆ್ಯಂಕ್ಲೆಟ್: ಹೂವು, ಸೂರ್ಯ, ಚಂದ್ರ, ನಕ್ಷತ್ರದಂಥ ಆಕೃತಿಗಳಲ್ಲಿ ಮತ್ತು ಅಕ್ಷರ ಮತ್ತು ಪದಗಳ ಆಕೃತಿಯನ್ನು ಒಳಗೊಂಡಿರುವ ಕಾಲ್ಗೆಜ್ಜೆಯು ಸಿಟಿ ಹುಡುಗಿಯರ ನೆಚ್ಚಿನ ಕಾಲ್ಗೆಜ್ಜೆ ವಿನ್ಯಾಸವಾಗಿದ್ದು, ಕಾಲ್ಗೆಜ್ಜೆಗಳಲ್ಲಿ ಹೆಸರು, ದಿನಾಂಕ, ಗಂಟೆ, ಬೀಗ, ಬೀಗದ ಕೈ, ಜ್ಯಾಮಿತಿಯ ಆಕರ, ಹಾಡಿನ ಸಾಲು, ಘೋಷವಾಕ್ಯ, ಚಿತ್ರ ವಿಚಿತ್ರವಾದ ಊಹಿಸಲಾದಗಷ್ಟು ಆಯ್ಕೆಗಳಿವೆ.

ಚಿಪ್ಪುಗಳು ಆ್ಯಂಕ್ಲೆಟ್: ನೈಸರ್ಗಿಕ ಕಪ್ಪೆ ಚಿಪ್ಪುಗಳು ಮತ್ತು ಬಳ್ಳಿಯಿಂದ ಮಾಡಲ್ಪಟ್ಟ ಕಾಲ್ಗೆಜ್ಜೆಗಳಿಗೆ ಇಂದು ಹೆಚ್ಚು ಬೇಡಿಕೆಯಿದೆ. ಅವುಗಳು ತಿಳಿ ನೀಲಿ, ಕೆಂಪು, ಗುಲಾಬಿ, ಕಪ್ಪು, ಕಿತ್ತಳೆ ಮತ್ತು ನೀಲಿ ಬಣ್ಣಗಳಲ್ಲಿನ ಲಭ್ಯವಿದ್ದರೂ ಆಫ್-ವೈಟ್ ಬಣ್ಣ ಎಲ್ಲರಿಗೂ ಅಚ್ಚುಮೆಚ್ಚಿನದ್ದು.

ಬಹುಪದರ ಆ್ಯಂಕ್ಲೆಟ್ : ಎರಡು ಅಥವಾ ಅದಕ್ಕೂ ಹೆಚ್ಚು ಪದರಗಳ ಚಿತ್ರ-ವಿಚಿತ್ರ ವಿನ್ಯಾಸದ ಕಾಲ್ಗೆಜ್ಜೆಗಳು ತಯಾರಾಗುತ್ತಿದ್ದು, ಜೀನ್ಸ್‌ಗಳಿಗೆ ಉತ್ತಮವಾಗಿ ಕಾಣುತ್ತದೆ. ಅವುಗಳು ಸಾಮಾನ್ಯವಾಗಿ ಸಣ್ಣದಾದ ಹೂ, ಹೃದಯ ಅಥವಾ ಇತರ ಆಕೃತಿಯನ್ನು ಜೋಡಿಸಲಾಗಿರುತ್ತದೆ

ದಾರದ ಆ್ಯಂಕ್ಲೆಟ್: ವಿವಿಧ ದಾರಗಳನ್ನು ಬಳಸಿ ತಯಾರಾಗುವ ಕಾಲ್ಗೆಜ್ಜೆಗಳು ಕಾಲಿಗೆ ಹೊಸ ಲುಕ್ ನೀಡುತ್ತಿದ್ದು, ಅದರಲ್ಲಿಯೂ ಕಪ್ಪು ದಾರದ ಕಾಲ್ಗೆಜ್ಜೆ ಇಂದು ಹೆಚ್ಚು ಟ್ರೆಂಡ್‌ನಲ್ಲಿದೆ.

ಗರ್ಭಕೋಶದಲ್ಲಿ ಗಡ್ಡೆ ಏನು ಮಾಡಲಿ?

ಸ್ಪಂದನ



ಡಾ. ವೀಣಾ ಎಸ್. ಭಟ್


● ನನ್ನ ವಯಸ್ಸು 43, ಸಂಗೀತ, ಮದುವೆಯಾಗಿ 25 ವರ್ಷಗಳು, ಎರಡು ವರ್ಷದ ಹಿಂದೆ ಗರ್ಭಕೋಶದಲ್ಲಿ ಗಡ್ಡೆ ಇತ್ತು ಎಂದು ಗರ್ಭಕೋಶವನ್ನು ತೆಗೆದಿರುತ್ತಾರೆ. ಈಗ ನನಗೆ ತುಂಬಾ ಸುಸ್ತಿನ ಅನುಭವ, ಬೆವರು ಸೆಕೆ ಸೆಕೆ. ನನ್ನ ಪತಿಯೊಡನೆ ಲೈಂಗಿಕ ಸಂಪರ್ಕದಲ್ಲೂ ನೋವಿನ ಅನುಭವ, ಉರಿ. ಏನು ಮಾಡಲಿ?

ಬಹುಶಃ ನಿಮಗೆ ಗರ್ಭಕೋಶದ ಜೊತೆಗೆ ಅಂಡಾಶಯವನ್ನು ತೆಗೆದಿರುವುದರಿಂದ ಕೃತಕ ಋತುಬಂಧದಿಂದಾಗುವ ಪರಿಣಾಮಗಳು ಆಗುತ್ತಿವೆ. ಮೆನೋಪಾಸ್/ಋತುಬಂಧ ಕೃತಕವಾಗಲೀ (ಗರ್ಭಕೋಶ ಹಾಗೂ ಅಂಡಾಶಯ ಶಸ್ತ್ರಚಿಕಿತ್ಸೆ ಮಾಡಿಸುವುದರಿಂದ) ಅಥವಾ ಸಹಜವಾಗಲೀ ಹೆಣ್ತನದ ಹಾರ್ಮೋನಾದ ಈಸ್ಟ್ರೋಜನ್ ಮಟ್ಟ ಕಡಿಮೆಯಾಗುತ್ತಾ ಬರುತ್ತದೆ. ಇದರಿಂದ ಸೂಕ್ಷ್ಮರಕ್ತನಾಳಗಳ ಪರಿಚಲನೆಯಲ್ಲಿ ವ್ಯತ್ಯಾಸವಾದ ಹಾಗೆ ಮುಖ ಬಿಸಿ ಏರಿದ ಹಾಗಾಗುವುದು, ಸೆಕೆ ಸೆಕೆ-ಬೆವರು, ಕೆಲವೊಮ್ಮೆ ಚಳಿಯಾದ ಹಾಗೆ ಆಗಬಹುದು.

ನೀವು ಕಾಫಿ, ಟೀ ಸೇವನೆ ಕಡಿಮೆ ಮಾಡಿ. ದಿನಕ್ಕೆ 3-4 ಲೀಟರ್ ನೀರನ್ನು ಕುಡಿಯಿರಿ. ಸಹಜವಾಗಿ ಶರೀರದಲ್ಲಿ ಈಸ್ಟ್ರೋಜನ್ ಅಂಶ ಹೆಚ್ಚಿಸುವ ಫೈಟೋ ಈಸ್ಟ್ರೋಜನ್ ಸುವರ್ಣಗಡ್ಡೆ, ಕುಂಬಳಬೀಜ, ಸೋಯಾ, ಹಸಿರು ಸೊಪ್ಪು ತರಕಾರಿ, ಇತ್ಯಾದಿಗಳನ್ನು ಹೆಚ್ಚು ಸೇವಿಸಿ. ನಿಧಾನವಾಗಿ ನಿಮಗೆ ಆ ಸಮಸ್ಯೆ ಸರಿಹೋಗುತ್ತದೆ ಮತ್ತು ಈಸ್ಟ್ರೋಜನ್ ಹಾರ್ಮೋನು ಮಟ್ಟ ಕಡಿಮೆಯಾಗುವುದರಿಂದಲೇ ಯೋನಿ ಮಾರ್ಗದಲ್ಲಿ ಶುಷ್ಕತೆಯುಂಟಾಗಿ ನಿಮಗೆ ಲೈಂಗಿಕ ಸಂಪರ್ಕದಲ್ಲಿ ಉರಿ-ನೋವಾಗುತ್ತಿರುವುದು.


ನೀವು ಅದಕ್ಕಾಗಿ ಬೇಸರ ಪಡದೇ ಉತ್ತಮ ಲುಬ್ರಿಕೇಟಿಂಗ್ ಜೆಲ್ ಅನ್ನು ಲೈಂಗಿಕ ಸಂಪರ್ಕದಲ್ಲಿ ಮೊದಲು ಬಳಸಿ. ಇಷ್ಟಕ್ಕೆ ಸರಿಹೋಗದಿದ್ದಲ್ಲಿ ಕೆಲವೊಮ್ಮೆ ಈಸ್ಟ್ರೋಜನ್ ಇರುವ ಮುಲಾಮು ಅಥವಾ ಮಾತ್ರೆಗನ್ನು ಅಲ್ಪಾವಧಿ (4 ರಿಂದ 6 ವಾರಗಳು) ಮಾತ್ರ ತೆಗೆದುಕೊಳ್ಳಬೇಕಾಗಬಹುದು.

ನಿಮಗೆ ಶಸ್ತ್ರಚಿಕಿತ್ಸೆ ಮಾಡಿದ ತಜ್ಞರಿಂದಲೇ ಸಲಹೆ ಪಡೆದು ಅವರ ಮೇಲ್ವಿಚಾರಣೆಯಲ್ಲಿಯೇ ಅವುಗಳನ್ನು ಬಳಸಿ.ಅಂಡಾಶಯವಿಲ್ಲದಿದ್ದರೂ ಶರೀರದಲ್ಲಿ ಸಂಗ್ರಹವಾದ ಕೊಬ್ಬಿನಿಂದಲೂ ಈಸ್ಟ್ರೋಜನ್ ಹಾರ್ಮೋನು ಸ್ವಲ್ಪ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಲೇ ಇರುತ್ತದೆ. ಸೂಕ್ತ ಪೌಷ್ಟಿಕ ಆಹಾರ ಸೇವನೆಯ ಜೊತೆಗೆ ಉತ್ತಮ ಚಟುವಟಿಕೆಯುಳ್ಳ ಜೀವನ ನಡೆಸಿದರೆ, ನಂದೆಲ್ಲಾ ಮುಗಿದೇ ಹೋಯಿತು ಎಂದು ನಕಾರಾತ್ಮಕ ಭಾವನೆ ಹೊಂದದೇ, ಒತ್ತಡ ಮಾಡಿಕೊಳ್ಳಬೇಡಿ. ಇದರಿಂದ ಧೈರ್ಯವಾಗಿ ನಿಮಗೆ ಮುಂದೆ ಕೃತಕ ಋತುಬಂಧದಿಂದಾಗುವ ತೊಂದರೆಗಳನ್ನು ಎದುರಿಸಲು ಸಹಾಯವಾಗುತ್ತದೆ.



ಋತುಬಂಧದಿಂದ ಕೇವಲ ಲೈಂಗಿಕ ತೊಂದರೆಯಷ್ಟೇ ಅಲ್ಲಾ ಮೂಳೆ ಮತ್ತು ಸ್ನಾಯು ಸವೆತ, ಮೂತ್ರ ಸೋರುವಿಕೆ ಇತ್ಯಾದಿಗಳೆಲ್ಲಾ ಉಂಟಾಗುತ್ತದೆ. ಬೇಸರಪಡಬೇಡಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು



ಮಳೆಗಾಲದಲ್ಲಿಯೂ ಚಂದಗಾಣಲು

ಬೇಸಿಗೆಯಲ್ಲಿ ಶುಷ್ಕವೆನಿಸುವ ಚರ್ಮಕ್ಕೆ ಕಾಳಜಿ ಮಾಡಿಕೊಂಡವರು, ಮಳೆಗಾಲ ಬಂತೆಂದು ನಿರ್ಲಕ್ಷಿಸುವಂತಿಲ್ಲ. ಈ ಮಳೆಗಾಲದಲ್ಲಿ ತುಸು ನಿರ್ಲಕ್ಷ್ಯ ತೋರಿದರೂ ಚರ್ಮ ಕಾಂತಿಹೀನವಾಗುವ ಸಾಧ್ಯತೆಗಳು ಅತಿ ಹೆಚ್ಚಾಗಿರುತ್ತವೆ. ಹಾಗೆಯೇ ಒದ್ದೆಗೂದಲನ್ನು ಒಣಗಿಸದಿದ್ದಲ್ಲಿ ಕೇಶ ಆರೋಗ್ಯಕ್ಕೂ ಹಾನಿಯಾಗಲಿದೆ.

ಮಳೆಗಾಲದಲ್ಲಿ ಸೂರ್ಯನ ಸುಡುಬಿಸಿಲು ಇರಲಿ, ಬಿಡಲಿ ಸನ್‌ಸ್ಕ್ರೀನ್ ಲೋಷನ್ ಬಳಸುವುದನ್ನು ಬಿಡಬೇಡಿ. ಮಳೆಯಲ್ಲಿ ನೆನೆದಿದ್ದರೆ ಮೊದಲು ಮುಖವನ್ನು ಸ್ವಚ್ಛವಾಗಿ ತೊಳೆದುಕೊಂಡು, ಒಣ ಬಟ್ಟೆಯಿಂದ ಟ್ಯಾಪ್ ಮಾಡಿಕೊಂಡು ಒರೆಸಿಕೊಳ್ಳಿ. ಪ್ರತಿದಿನವೂ ಮೇಕಪ್ ಅನ್ನು ಮರೆಯದೇ ತೆಗೆಯಿರಿ. ಮಳೆಯಲ್ಲಿ ನೆನೆದೆವೆಂದು, ಮೇಕಪ್ ತೆಗೆಯದೇ ಇರಬೇಡಿ. ಅಳಿದುಳಿದ ಮೇಕಪ್‌ನ ಕೆಮಿಕಲ್‌ಗಳು ಚರ್ಮವನ್ನು ಶುಷ್ಕ ಮತ್ತು ಕಾಂತಿಹೀನಗೊಳಿಸುತ್ತದೆ.

ವಾರಕ್ಕೆ ಎರಡು ಸಲವಾದರೂ ನಿಮ್ಮ ಚರ್ಮಕ್ಕೆ ಹೊಂದುವ ಸ್ಕ್ರಬರ್‌ನಿಂದ ಸ್ವಚ್ಛಗೊಳಿಸಿಕೊಳ್ಳಿ. ಚರ್ಮದ ಮೇಲಿನ ಸತ್ತ ಮತ್ತು ಶುಷ್ಕ ಕೋಶಗಳು ಇದರಿಂದ ನಿರ್ಮೂಲನೆ ಆಗುತ್ತವೆ. ಮಳೆಗಾಲದಲ್ಲಿ ಅತಿಕಡಿಮೆ ಮೇಕಪ್ ಯಾವಾಗಲೂ ಚರ್ಮವನ್ನು ರಕ್ಷಿಸುತ್ತದೆ. ಕಡಿಮೆ ಇದ್ದಷ್ಟೂ ಒಳಿತು. ಸಹಜವಾಗಿ, ನೈಸರ್ಗಿಕವಾಗಿರುವುದು ಒಳಿತು. ಕಣ್ಣಿನ ಮೇಕಪ್ ಆದಷ್ಟೂ ಇಲ್ಲದಿರುವಂತೆ ನೋಡಿಕೊಳ್ಳುವುದು ಒಳಿತು. ಮಳೆಬಂದು, ನೆನೆಯುವ ಸಾಧ್ಯತೆ ಇದ್ದಲ್ಲಿ ಮೇಕಪ್ ಇಲ್ಲದೆಯೇ ಆಚೆ ಹೋಗಲು ಸಾಧ್ಯವೆ ಎಂಬುದನ್ನೂ ಗಮನಿಸಿ.

ಮಳೆಗಾಲ ನೆನೆಯಲು ಹಿತವೆನಿಸುತ್ತದೆ. ಆದರೆ ಚರ್ಮದ ಆರೋಗ್ಯಕ್ಕೆ ನೀವು ಸದಾ ಕಾಳಜಿ ತೆಗೆದುಕೊಳ್ಳಲೇ ಬೇಕಾಗುತ್ತದೆ.

ಎಳ್ಳಿನ ವಿಶೇಷ

ಕೆ.ವಿ.ರಾಜಲಕ್ಷ್ಮಿ

ರಸಾಸ್ವಾದ

ಬೇಸಿನ್ ಎಳ್ಳಿನುಂಡೆ



ಬೇಕಾಗುವ ಸಾಮಗ್ರಿಗಳು: ಎಳ್ಳು 1/4 ಕಪ್, ಕಡಲೆ ಹಿಟ್ಟು 1 ಕಪ್, ಕಂದು ಸಕ್ಕರೆ (ಬ್ರೌನ್ ಶುಗರ್) 1 1/2ಕಪ್, ತುಪ್ಪ.

ಮಾಡುವ ವಿಧಾನ: ಎಳ್ಳನ್ನು ಜಿಡ್ಡು ಸೋಕಿಸದೆ ಹುರಿದು, ಸಕ್ಕರೆಯೊಂದಿಗೆ ನುಣ್ಣಗೆ ಪುಡಿಮಾಡಿಕೊಳ್ಳಿ. ಕಡಲೆಹಿಟ್ಟನ್ನು ಗಂಟಿಲ್ಲದಂತೆ ಜರಡಿಯಾಡಿಸಿ. ಬಾಣಲೆಯಲ್ಲಿ ಎರಡು ಚಮಚ ತುಪ್ಪ ಹಾಕಿ, ಕಡಲೆಹಿಟ್ಟನ್ನು ಒಳ್ಳೆಯ ಪರಿಮಳ ಬರುವವವರೆಗೆ ಸಣ್ಣ ಉರಿಯಲ್ಲಿ ಹುರಿಯಿರಿ. ನಂತರ ಸಕ್ಕರೆ ಎಳ್ಳಿನ ಮಿಶ್ರಣವನ್ನು ಸೇರಿಸಿ, ಸ್ವಲ್ಪ ತುಪ್ಪ ಹಾಕಿ ಚೆನ್ನಾಗಿ ಕೈಯಾಡಿಸಿ ಉರಿ ನಂದಿಸಿ, ಮಿಶ್ರಣವನ್ನು ಬೇರೊಂದು ತಟ್ಟೆಗೆ ವರ್ಗಾಯಿಸಿ ಸಣ್ಣ ಗಾತ್ರದ ಉಂಡೆಗಳನ್ನು ಕಟ್ಟಿ.

ಎಳ್ಳಿನ ಬರ್ಫಿ

ಬೇಕಾಗುವ ಸಾಮಗ್ರಿಗಳು: ಎಳ್ಳು 1/4 ಕಪ್, ಮಿಲ್ಕ್ ಪೌಡರ್ 1/4 ಕಪ್,ಒಣಕೊಬ್ಬರಿ ಪುಡಿ 1/2 ಕಪ್, ಬೆಲ್ಲ 1 ಕಪ್, ತುಪ್ಪ.

ಮಾಡುವ ವಿಧಾನ: ಬಾಣಲೆಯಲ್ಲಿ ಸ್ವಲ್ಪ ತುಪ್ಪ ಹಾಕಿ ಎಳ್ಳನ್ನು ಹುರಿದುಕೊಳ್ಳಿ . ಅದೇ ಬಾಣಲೆಯಲ್ಲಿ ಬೆಲ್ಲ ತುಸು ನೀರು ಹಾಕಿ ಸಣ್ಣ ಉರಿಯಲ್ಲಿಡಿ. ಬೆಲ್ಲ ಸಂಪೂರ್ಣವಾಗಿ ಕರಗಿದ ಕೂಡಲೇ ಉಳಿದ ಎಲ್ಲಾ ಸಾಮಗ್ರಿ ಹಾಕಿ ಚೆನ್ನಾಗಿ ಕೈಯಾಡುತ್ತಿರಿ. ಅವಶ್ಯವಿದ್ದಲ್ಲಿ ಮೇಲ್ತುಪ್ಪ ಸೇರಿಸಿ. ಮಿಶ್ರಣ ಚೆನ್ನಾಗಿ ಬೆರೆತು ತಳ ಬಿಡುವಾಗ ಜಿಡ್ಡು ಸವರಿದ ತಟ್ಟೆಗೆ ಹುಯ್ದು ಒಂದರಿಂದ ಎರಡು ತಾಸು ತಣಿಯಲು ಬಿಡಿ. ನಂತರ ಬೇಕಾದ ಆಕಾರಕ್ಕೆ ಕತ್ತರಿಸಿ.



ಗೋಧಿ-ಎಳ್ಳಿನುಂಡೆ



ಬೇಕಾಗುವ ಸಾಮಗ್ರಿಗಳು: ಎಳ್ಳು 1/4 ಕಪ್, ಗೋಧಿ ಹಿಟ್ಟು 1 ಕಪ್,ಗಸಗಸೆ 1 ಚಮಚ , ಹುರಿದ ಶೇಂಗಾ 2 ಚಮಚ, ಬೆಲ್ಲ 1 1/2ಕಪ್, ತುಪ್ಪ.

ಮಾಡುವ ವಿಧಾನ: ಪ್ರತ್ಯೇಕವಾಗಿ ಎಳ್ಳು,ಗಸಗಸೆ ಮತ್ತು ಗೋಧಿ ಹಿಟ್ಟನ್ನು ತುಪ್ಪದಲ್ಲಿ ಹುರಿದಿಟ್ಟುಕೊಳ್ಳಿ. ಶೇಂಗಾ, ಗಸಗಸೆಯನ್ನು ಮಿಕ್ಸಿಯಲ್ಲಿ ತರಿತರಿಯಾಗಿ ಅರೆದುಕೊಳ್ಳಿ. ದಪ್ಪತಳದ ಪಾತ್ರೆಗೆ ಬೆಲ್ಲ ಹಾಕಿ ಅದು ಕರಗುವಷ್ಟು ಮಾತ್ರ ನೀರು ಸಣ್ಣ ಉರಿಯಲ್ಲಿ ಇಡಿ. ಬೆಲ್ಲ ಕರಗಿ ನೊರೆಯುಕ್ಕುವಾಗ ಹುರಿದ ಗೋಧಿ ಹಿಟ್ಟು,ಎಳ್ಳು, ಶೇಂಗಾ ಗಸಗಸೆ ಪುಡಿ ಹಾಕಿ ಕೈಯಾಡಿಸುತ್ತಿರಿ. ಅವಶ್ಯಕತೆಗೆ ತಕ್ಕಂತೆ ತುಪ್ಪ ಹಾಕಿ ಚೆನ್ನಾಗಿ ಮಗುಚಿ. ಮಿಶ್ರಣ ಪಾತ್ರೆಯನ್ನು ಬಿಟ್ಟು ಬರುತ್ತಿದ್ದಂತೆ, ತುಪ್ಪದ ಜಿಡ್ಡು ಕಾಣಿಸಿದ ತಟ್ಟೆಯ ಮೇಲೆ ಮಿಶ್ರಣವನ್ನು ಸುರಿಯಿರಿ. ಬಿಸಿಯಿದ್ದಾಗಲೇ, ಸಣ್ಣ ಸಣ್ಣ ಉಂಡೆಗಳನ್ನು ಕಟ್ಟಿ.





1.ಕಲಬುರಗಿಯ ತಾರ್‌ಫೈಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವದಲ್ಲಿ ಶಿಕ್ಷಕರು ಹೂವುಗಳನ್ನು ಎರಚಿ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್ 2. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕು ಆಲ್ಕೇರಿ ಗೌಳಿವಾಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದನೇ ತರಗತಿಗೆ ದಾಖಲಾಗುವ ಮಕ್ಕಳನ್ನು ಶುಕ್ರವಾರ ಎತ್ತಿನ ಗಾಡಿಯಲ್ಲಿ ಮೆರವಣಿಗೆಯೊಂದಿಗೆ ಕರೆತರಲಾಯಿತು– ಪ್ರಜಾವಾಣಿ ಚಿತ್ರ

ವಿಶ್ವಕ್ಷೀರ ದಿನಾಚರಣೆ

ಶಂಕರಪ್ಪ ಅಮಾನತು

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ₹ 47.10 ಕೋಟಿ ಅಕ್ರಮ ಎಸಗಿದ ಆರೋಪ ಎದುರಿಸುತ್ತಿರುವ ಎಸ್. ಶಂಕರಪ್ಪ ಅವರನ್ನು ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಸ್ಥಾನದಿಂದ ಅಮಾನತುಗೊಳಿಸಿದೆ.

ಶಂಕರಪ್ಪ ಹಿಂದೆ ಡಿಡಿಯುಟಿಟಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಅವರ ಅವಧಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಪುರಾವೆ ಸಂಗ್ರಹಿಸಿದ್ದ ಸಿಐಡಿ ಅಧಿಕಾರಿಗಳು ಮೇ 27ರಂದು ಅವರನ್ನು ಬಂಧಿಸಿದ್ದರು.



ಎಸ್. ಶಂಕರಪ್ಪ

ಶಂಕರಪ್ಪ ನ್ಯಾಯಾಂಗ ಬಂಧನದಲ್ಲಿ ಇರುವುದರಿಂದ ನಿಯಮಾನುಸಾರ ಸೇವೆಯಿಂದ ಅಮಾನತುಗೊಳಿಸಿ ಸರ್ಕಾರವು ಶುಕ್ರವಾರ ಆದೇಶ ಹೊರಡಿಸಿದೆ.

ಶಾಲಾ ಪ್ರಾರಂಭೋತ್ಸವ: ಡಿ.ಸಿ ಪಾಠ

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದ ಸರ್ಕಾರಿ ಮಾದರಿ ಪ್ರಾಯೋಗಿಕ ಉರ್ದು ಮತ್ತು ಕನ್ನಡ ಶಾಲೆಯಲ್ಲಿ ಶುಕ್ರವಾರ ನಡೆದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ ಅವರು ವಿದ್ಯಾರ್ಥಿಗಳಿಗೆ ಪಾಠ ಮಾಡಿದರು.

8ನೇ ತರಗತಿಯ ಇಂಗ್ಲಿಷ್ ಪಠ್ಯಪುಸ್ತಕದ 'ದಿ ಸ್ವಾನ್ ಅಂಡ್ ದಿ ಪ್ರಿನ್ಸಸ್' ಜನಪದ ನಾಟಕವನ್ನು ಬೋಧಿಸಿದರು. ಐವರು ವಿದ್ಯಾರ್ಥಿನಿಯರನ್ನು ನಾಟಕದ ಪಾತ್ರವರ್ಗದಲ್ಲಿ (ರಾಜ, ಮಂತ್ರಿ...) ಪರಿಚಯಿಸಿ ಕತೆ ವಿವರಿಸಿದರು. 30 ನಿಮಿಷ ಅವರು ಶಿಕ್ಷಕಿಯಾಗಿ ಪಾಠ ಮಾಡಿ, ಸರಳವಾಗಿ ವಿವರಿಸಿದರು.

ಕಪ್ಪು ಹಲಗೆ ಮೇಲೆ ಪದಗಳನ್ನು ಬರೆದು ಮಕ್ಕಳಿಗೆ ವಿವರಿಸಿದರು. ಪಾಠದ ಪ್ರತಿ ಸಾಲಿನ ಪದಗಳಿಗೆ (ಥ್ರೋನ್- ಸಿಂಹಾಸನ, ಪರ್ ಹ್ಯಾಪ್ಸ್- ಬಹುಶಃ...) ಕನ್ನಡ ಅರ್ಥ ತಿಳಿಸಿದರು.

ಪಾಠಕ್ಕೆ ಪೂರಕವಾಗಿ ಹಾಸ್ಯ ಪ್ರಸಂಗಗಳನ್ನು ಹೇಳಿದರು. ಪಾಠ ಗಮನವಿಟ್ಟು ಓದಿ, ವಿಷಯಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು ಎಂದು ತಿಳಿ ಹೇಳಿದರು.

ನಂತರ ಅವರು ವಿದ್ಯಾರ್ಥಿನಿಯೊಬ್ಬರಿಂದ ಪಾಠದ ಒಂದು ಪ್ಯಾರಾವನ್ನು ಓದಿಸಿದರು.

'ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕಲಿಕೆ, ಬೋಧನೆಗೆ ಪ್ರೇರೇಪಿಸಲು ಪಾಠ ಮಾಡಿದೆ. ಶಾಲೆಯಲ್ಲಿ ಜಿಲ್ಲಾಧಿಕಾರಿ ಪಾಠ ಮಾಡಿದ್ದನ್ನು ಮಕ್ಕಳು ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಬಾಲಕಿಯರಿಗೆ ಪಾಠ ಮಾಡಿದ್ದು ತುಂಬಾ ಖುಷಿ ನೀಡಿತು' ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.



ಧಾರವಾಡದ ಸರ್ಕಾರಿ ಮಾದರಿ ಪ್ರಾಯೋಗಿಕ ಉರ್ದು ಮತ್ತು ಕನ್ನಡ ಶಾಲೆಯಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ದಿವ್ಯಪ್ರಭು ಪಾಠ ಮಾಡಿದರು

ರಾಕೇಶ್ ಸಿಂಗ್, ವಿ.ಮಂಜುಳಾ ನಿವೃತ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಾಭಿವೃದ್ಧಿ, ಜಲಸಂಪನ್ಮೂಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಸೇವೆಯಿಂದ ನಿವೃತ್ತಿಗೊಂಡಿದ್ದಾರೆ.

ಇವರ ನಿವೃತ್ತಿಯಿಂದ ತೆರವಾದ ನಗರಾಭಿವೃದ್ಧಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಹುದ್ದೆಯನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಎಸ್.ಆರ್, ಜಲಸಂಪನ್ಮೂಲ ಇಲಾಖೆ ಹೊಣೆಗಾರಿಕೆಯನ್ನು ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ ಹಾಗೂ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನು ಶಾಲಿನಿ ರಜನೀಶ್ ಅವರಿಗೆ ನೀಡಲಾಗಿದೆ.

ಹಿರಿಯ ಐಎಎಸ್ ಅಧಿಕಾರಿ ವಿ.ಮಂಜುಳಾ ಅವರ ನಿವೃತ್ತಿಯಿಂದ ತೆರವಾಗಿರುವ ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ(ಕೆಎಟಿ) ಅಧ್ಯಕ್ಷ ಹುದ್ದೆಯನ್ನು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಕರ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಪ್ರಾಣಿ ಬಲಿ: ಡಿಕೆಶಿ ಹೇಳಿಕೆಗೆ ಕೇರಳ ಕಿಡಿ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ಕರ್ನಾಟಕದ ಕಾಂಗ್ರೆಸ್ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ತಮ್ಮನ್ನು ಗುರಿಯಾಗಿಸಿಕೊಂಡು ಉತ್ತರ ಕೇರಳದ ದೇವಸ್ಥಾನದ ಬಳಿ ಪ್ರಾಣಿ ಬಲಿ (ಶತ್ರು ಭೈರವಿ ಯಾಗ) ನಡೆಸಲಾಗಿದೆ ಎಂಬ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಕ್ಕೆ ಕೇರಳದಿಂದ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಡಿ.ಕೆ.ಶಿವಕುಮಾರ್ ಅವರ ಈ ಹೇಳಿಕೆಯು ಉತ್ತರ ಕೇರಳದ ಹಲವು ದೇವಸ್ಥಾನಗಳಲ್ಲಿ ಈ ಹಿಂದೆ ನಡೆಯುತ್ತಿದ್ದ ಪ್ರಾಣಿ ಬಲಿ ವಿಚಾರವನ್ನು ಮುನ್ನೆಲೆಗೆ ತಂದಿದೆ.

ಈ ಕುರಿತು ಶುಕ್ರವಾರ ಪ್ರತಿಕ್ರಿಯಿಸಿದ ರಾಜ್ಯ ಪ್ರೌಢ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಚಿವೆ ಆರ್. ಬಿಂದು, 'ಡಿ.ಕೆ. ಶಿವಕುಮಾರ್ ಅವರ ಆರೋಪವು ಅರ್ಥಹೀನ. ಕೇರಳದಲ್ಲಿ ಇಂಥವುಗಳೆಲ್ಲ ನಡೆಯುವುದಿಲ್ಲ. ದೇಶದ ಇತರೆ ಭಾಗಗಳಲ್ಲಿ ಸಮಾಜವನ್ನು ಮತ್ತೆ ಕತ್ತಲೆ ಕೂಪಕ್ಕೆ ಎಳೆಯುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಹೇಳಿದರು.



ಆರ್. ಬಿಂದು

'ಇಂಥ ಪ್ರಯತ್ನಗಳು ನಮ್ಮ ರಾಜ್ಯದಲ್ಲೂ ನಡೆಯುತ್ತಿವೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗುವುದು' ಎಂದು ಇದೇ ವೇಳೆ ತಿಳಿಸಿದರು.

'ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿ ಈ ರೀತಿ ಆಧಾರರಹಿತ ಹೇಳಿಕೆ ನೀಡುವುದು ದುರದೃಷ್ಟಕರ ಮತ್ತು ಖಂಡನಾರ್ಹ. ರಾಜ್ಯದಲ್ಲಿ ಪ್ರಾಣಿ ಬಲಿಯನ್ನು ನಿಷೇಧಿಸಿದ ಬಳಿಕ ಯಾವುದೇ ದೇವಸ್ಥಾನಗಳಲ್ಲಿ ಪ್ರಾಣಿಬಲಿ ಮತ್ತು ಇಂಥ ಯಾವುದೇ ಆಚರಣೆಯನ್ನು ನಿಲ್ಲಿಸಲಾಗಿದೆ' ಎಂದು ಉತ್ತರ ಕೇರಳದ ದೇವಸ್ಥಾನಗಳನ್ನು ನಿರ್ವಹಿಸುವ ಮಲಬಾರ್ ದೇವಸ್ವಂ ತಿಳಿಸಿದೆ.

ಸುಮಲತಾ, ರವಿಕುಮಾರ್, ಪ್ರೊ.ನಾಗರಾಜ್ ಪರಿಷತ್ತಿಗೆ?

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಜೂನ್ 13 ರಂದು ನಡೆಯುವ ದ್ವೈವಾರ್ಷಿಕ ಚುನಾವಣೆಗೆ ಬಿಜೆಪಿ ತನ್ನ ಪಾಲಿನ ಮೂರು ಸ್ಥಾನಗಳಿಗೆ ವಿಧಾನಪರಿಷತ್‌ನ ಹಾಲಿ ಸದಸ್ಯ ಎನ್.ರವಿಕುಮಾರ್, ಸಂಸದೆ ಸುಮಲತಾ ಮತ್ತು ಪ್ರೊ.ಎಂ.ನಾಗರಾಜ್ ಅವರನ್ನು ಸಂಭಾವ್ಯ ಅಭ್ಯರ್ಥಿಗಳನ್ನಾಗಿ ಕಣಕ್ಕೆ ಇಳಿಸುವ ಸಾಧ್ಯತೆಗಳಿವೆ.

ಮೂರು ಸ್ಥಾನಗಳಿಗೆ ಬಿಜೆಪಿಯಲ್ಲಿ ಭಾರಿ ಪೈಪೋಟಿ ಏರ್ಪಟ್ಟಿತ್ತು. 40ಕ್ಕೂ ಹೆಚ್ಚು ಆಕಾಂಕ್ಷಿಗಳು ಇದ್ದರು. ನಳಿನ್‌ಕುಮಾರ್ ಕಟೀಲ್, ಪ್ರತಾಪ ಸಿಂಹ, ಸಿ.ಟಿ.ರವಿ, ಜೆ.ಸಿ. ಮಾಧುಸ್ವಾಮಿ ಸೇರಿ ಹಲವರ ಹೆಸರುಗಳು ಮುಂಚೂಣಿಗೆ ಬಂದಿದ್ದವು. ಮಂಡ್ಯ ಲೋಕಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟ ಹಿನ್ನೆಲೆಯಲ್ಲಿ ಸುಮಲತಾ ಅವರಿಗೆ ಪರಿಷತ್ ಸ್ಥಾನ ನೀಡುವ ಸಾಧ್ಯತೆ ಇದೆ. ಹುಬ್ಬಳ್ಳಿ-ಧಾರವಾಡ ಮೂಲದ ಎಂ. ನಾಗರಾಜ್ ಅವರು ಆರ್‌ಎಸ್‌ಎಸ್ ಮತ್ತು ಬಿಜೆಪಿಯಲ್ಲೂ ಕೆಲಸ ಮಾಡಿದ್ದಾರೆ. ಪರಿಷತ್ತಿನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿರುವ ಎನ್.ರವಿಕುಮಾರ್ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಪರಿಷತ್ ಸದಸ್ಯರಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ಹಿನ್ನೆಲೆಯಲ್ಲಿ ಅವರಿಗೆ ಮತ್ತೊಮ್ಮೆ ಅವಕಾಶ ಸಿಗಲಿದೆ ಎಂದು ಮೂಲಗಳು ಹೇಳಿವೆ.

ಕೆಎಸ್‌ಪಿಸಿಬಿ ಅಧ್ಯಕ್ಷ ಶಾಂತ್ ತಿಮ್ಮಯ್ಯ ವಜಾ

ಒಂದನೇ ಪುಟದಿಂದ...

ಸರ್ಕಾರದ ವ್ಯಾಪ್ತಿಯ ಎಲ್ಲಾ ನಿಗಮ ಮತ್ತು ಮಂಡಳಿಗಳ ಎಲ್ಲಾ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕವೇ ಬಿಡುಗಡೆ ಮಾಡುವುದು ಕಡ್ಡಾಯವಾಗಿದ್ದರೂ, ಖಾಸಗಿಯವರಿಗೆ ನೀಡಲಾಗಿತ್ತು ಎಂದು ವರದಿ ತಿಳಿಸಿದೆ.

ಅಲ್ಲದೇ, ಬಿಬಿಎಂಪಿಯಿಂದ ಅನುಮತಿ ಪಡೆಯದೇ ಜಾಹೀರಾತು ಪ್ರದರ್ಶಿಸಿರುವುದರಿಂದ ಬಿಬಿಎಂಪಿಗೆ ಜಾಹೀರಾತು ಶುಲ್ಕದಲ್ಲಿ ಗಣನೀಯ ನಷ್ಟವಾಗಿದೆ. ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರಾರು ಒಪ್ಪಂದವನ್ನು ಮಾಡಿಕೊಳ್ಳದ ಕಾರಣ ಜಿಎಸ್‌ಟಿ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ಜಮೆಯಾಗಬೇಕಿದ್ದ ₹57.46 ಲಕ್ಷ ವರಮಾನ ಕೈತಪ್ಪಿದೆ ಎಂದು ವರದಿ ವಿವರಿಸಿದೆ.

ಮಂಡಳಿಯ ಮಾಹಿತಿ ತಂತ್ರಜ್ಞಾನ (ಐ.ಟಿ) ವಿಭಾಗದ ವ್ಯವಸ್ಥಾಪಕ ಸೂರಿ ಪಾಯಲ್ ಅವರಿಗೆ ಹೆಚ್ಚುವರಿಯಾಗಿ ಸದಸ್ಯ ಕಾರ್ಯದರ್ಶಿ ಹುದ್ದೆಯ ಪ್ರಭಾರವನ್ನೂ ನೀಡಲಾಗಿತ್ತು. ಆ ಬಳಿಕ ಪ್ರಭಾರವನ್ನು ಹಿಂಪಡೆಯುವ ಮೂಲಕ ಶಾಂತ್ ತಿಮ್ಮಯ್ಯ ತಮ್ಮ ಅಧಿಕಾರ ಮೀರಿ ನಡೆದುಕೊಂಡಿದ್ದಾರೆ ಎಂದೂ ವರದಿ ಉಲ್ಲೇಖಿಸಿದೆ.

ಪಾಪೇಗೌಡ ಗುತ್ತಿಗೆಯಡಿ ಮರುನೇಮಕ

ಒಂದನೇ ಪುಟದಿಂದ...

ವಜಾಕ್ಕೆ ಕಾರಣಗಳು?: ಇವರು ಕರ್ನಾಟಕ ಹೈಕೋರ್ಟ್, ಲೋಕಾಯುಕ್ತ ಮತ್ತು ಕೇಂದ್ರೀಯ ಅಧಿಕಾರಯುಕ್ತ ಸಮಿತಿಯಲ್ಲಿ ನಿಗಮದ ಅಧಿಕಾರಿಗಳ ವಿರುದ್ಧ ಪದೇ ಪದೇ ದಾವೆಗಳನ್ನು ಹೂಡಿದ್ದರು. ಅವುಗಳಲ್ಲಿ ಹಲವು ಅರ್ಜಿಗಳು ವಜಾಗೊಂಡಿವೆ. ಅಲ್ಲದೇ, ರಾಜಕೀಯ ವ್ಯಕ್ತಿಗಳಿಂದ ಮತ್ತು ಹೊರಗಿನ ಪ್ರಾಧಿಕಾರಿಗಳಿಂದ ಪ್ರಭಾವ ಮೂಲಕ ಮೇಲಧಿಕಾರಿಗಳಿಗೆ ಮತ್ತು ಸಿಬ್ಬಂದಿ ಮೇಲೆ ಅನಗತ್ಯ ಒತ್ತಡ ತರುತ್ತಿದ್ದರು ಎಂದು ಶಿಸ್ತು ಪ್ರಾಧಿಕಾರ ತನ್ನ ವರದಿಯಲ್ಲಿ ತಿಳಿಸಿದೆ.

ಸುದ್ದಿವಾಹಿನಿಗಳು ಮತ್ತು ಇತರ ಮಾಧ್ಯಮಗಳನ್ನು ಬಳಸಿಕೊಂಡು ನಿಗಮದ ಪ್ರತಿಷ್ಠೆಗೆ ಧಕ್ಕೆ ತಂದಿದ್ದರು. ನಿಗಮದಿಂದ ಅವರಿಗೆ ನೀಡಿದ್ದ ಎಚ್ಚರಿಕೆ, ಮೆಮೋಗಳು ಮತ್ತು ಸೂಚನೆಗಳನ್ನು ಉಲ್ಲಂಘಿಸುತ್ತಿದ್ದರು. ಕಚೇರಿಯಲ್ಲಿನ ಸಿಬ್ಬಂದಿಗೆ ಕಿರುಕುಳ ನೀಡುತ್ತಾ, ಮಾಧ್ಯಮಗಳ ಮೂಲಕ ಆಪಾದನೆ ಮಾಡುತ್ತಿದ್ದರು. ಅದನ್ನು ಸಾಬೀತುಪಡಿಸಲು ಸಾಧ್ಯವಾಗದೇ ಇದ್ದಾಗ ನಿಗಮದವರಿಂದ ತಮಗೆ ಬೆದರಿಕೆ ಇದೆ ಎಂದು ಹೇಳಿ ರಕ್ಷಣೆ ನೀಡುವಂತೆ ಕೋರುತ್ತಿದ್ದರು. 2018ರಿಂದ 2020ರ ಅವಧಿಯಲ್ಲಿ 44 ಅರ್ಜಿಗಳನ್ನು ಮಾಹಿತಿ ಹಕ್ಕಿನಡಿ ಸಲ್ಲಿಸಿದ್ದಾರೆ ಎಂದು ಹೇಳಿದೆ.

ನಿಗಮಕ್ಕೆ ಉಪಯುಕ್ತವಾಗಿ ಕಾರ್ಯ ನಿರ್ವಹಿಸುವ ಸಿಬ್ಬಂದಿಯಾಗುವ ಬದಲಿಗೆ ಪಾಪೇಗೌಡ ಅವರು ನಿಗಮಕ್ಕೆ ಹೊರೆಯಾಗಿದ್ದಾರೆ. ಇವರು ನ್ಯಾಯಾಲಯಗಳಲ್ಲಿ ಹೂಡುವ ದಾವೆ, ಲೋಕಾಯುಕ್ತಕ್ಕೆ ಸಲ್ಲಿಸುವ ದೂರು ಮತ್ತು ಮಾಹಿತಿ ಹಕ್ಕು ಅಡಿ ಸಲ್ಲಿಸುವ ಅರ್ಜಿಗಳಿಂದಾಗಿ ನಿಗಮವು ತನ್ನ ಶಕ್ತಿ ಮತ್ತು ಹಣವನ್ನು ಆ ಅವುಗಳಿಗೇ ವ್ಯಯಿಸುವಂತಾಗಿದೆ ಎಂದು ತಿಳಿಸಿದೆ.

ನಿಗಮವು ಒಂದು ವಾಣಿಜ್ಯ ಉದ್ದಿಮೆಯಾಗಿದ್ದು, ಸರ್ಕಾರದಿಂದ ಯಾವುದೇ ಅನುದಾನ ಪಡೆಯುತ್ತಿಲ್ಲ. ನಿಗಮವು ಪಾಪೇಗೌಡ ಅವರಿಂದ ಯಾವುದೇ ಕೆಲಸ ಪಡೆಯಲು ಸಾಧ್ಯವಾಗುತ್ತಿಲ್ಲ. ಇವರಿಗೆ ವೇತನ ರೂಪದಲ್ಲಿ ₹50 ಲಕ್ಷ ಪಾವತಿಸಲಾಗಿದೆ. ಇವರ ದೂರು- ಅರ್ಜಿಗಳಿಗೆ ವಕೀಲರನ್ನು ನೇಮಿಸಲು ಅಪಾರ ಹಣ ವ್ಯಯಿಸಲಾಗಿದೆ ಎಂದು ಹೇಳಿದೆ.

ಈ ವರದಿ ಆಧರಿಸಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಂದಿನ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಶಿಸ್ತು ಪ್ರಾಧಿಕಾರಿಯಾಗಿದ್ದ ಮಧುಶರ್ಮ ಅವರು ಪಾಪೇಗೌಡ ಅವರನ್ನು ಸೇವೆಯಿಂದ ವಜಾಗೊಳಿಸಿದ್ದರು. ಅಲ್ಲದೇ, ಭವಿಷ್ಯದಲ್ಲಿ ಮುಂದಿನ ನೌಕರಿ ಪಡೆಯದಂತೆ ಅನರ್ಹಗೊಳಿಸಿದ್ದರು.

ನಿಗಮದಿಂದ ಯಾವುದೇ ರೀತಿಯ ಸೇವೆ ಮತ್ತು ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಪಾಪೇಗೌಡ ಅರ್ಹರಿರುವುದಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಿ ಕೆಲಸದಿಂದ ವಜಾ ಮಾಡಿದ್ದರೂ, ಮರಳಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ನೌಕರರು ಹೇಳಿದ್ದಾರೆ.

ಈಗ ಹೊಸ ಜವಾಬ್ದಾರಿ

ಏಪ್ರಿಲ್‌ನಲ್ಲಿ ಹೊರಗುತ್ತಿಗೆಯಡಿ ನೇಮಕಾತಿ ಮಾಡಿದ ಬಳಿಕ ಹಲವು ಜವಾಬ್ದಾರಿ ನೀಡಲಾಗಿದೆ.

- ಅರಣ್ಯ ಭೂಮಿ ಒತ್ತುವರಿ ಮಾಡಿರುವವರು ಮತ್ತು ಹೊಸದಾಗಿ ಮಾಡಲು ಯತ್ನಿಸುವವರ ಮೇಲೆ ನಿಗಾ ಇಡುವುದು
- ಮರಳು, ಮಣ್ಣು, ಕಲ್ಲು, ಗಣಿಗಾರಿಕೆ, ಮರಗಿಡಗಳನ್ನು ತೆಗೆದು ಸಾಗಿಸುತ್ತಿರುವುದರ ಮೇಲೆ ಕಣ್ಗಾವಲು
- ಅರಣ್ಯ ನೆಡುತೋಪುಗಳಲ್ಲಿ ಯಾವುದೇ ವ್ಯಕ್ತಿ ಅತಿಕ್ರಮ ಪ್ರವೇಶ, ನಿಗಮದ ಅಥವಾ ಅರಣ್ಯ ಪ್ರದೇಶದಲ್ಲಿ ಅಕ್ರಮ ಕಡಿತಲೆ ಮಾಡುತ್ತಿರುವುದರ ಮೇಲೆ ನಿಗಾ
- ನಿಗಮದ ವತಿಯಿಂದ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳಲ್ಲಿನ ಅಕ್ರಮಗಳ ಬಗ್ಗೆ ಕಣ್ಗಾವಲು

ರಸ್ತೆಯಲ್ಲಿ ನಮಾಜ್: ತನಿಖೆ ನಡೆಸದೇ 'ಬಿ ರಿಪೋರ್ಟ್' ಸಲ್ಲಿಕೆ ಆರೋಪ

ಮುಂದೆ ದಂಡ ಹಿಡಿಯುತ್ತೇವೆ: ವಿಎಚ್‌ಪಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ಕಂಕನಾಡಿಯ ಮಸೀದಿ ಬಳಿ ರಸ್ತೆಯಲ್ಲಿ ನಮಾಜ್ ಮಾಡಿದ ಪ್ರಕರಣದಲ್ಲಿ ಪೊಲೀಸರು ಒತ್ತಡಕ್ಕೆ ಮಣಿದು, ತನಿಖೆ ನಡೆಸದೇ ನ್ಯಾಯಾಲಯಕ್ಕೆ 'ಬಿ ರಿಪೋರ್ಟ್' ಸಲ್ಲಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ರಸ್ತೆಯಲ್ಲಿ ನಮಾಜ್ ಮಾಡಿದವರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿದ್ದೇ ತಪ್ಪು ಎಂದು ಕಾಂಗ್ರೆಸ್ ಪ್ರತಿಪಾದಿಸಿದೆ.

'ರಸ್ತೆ ಮೇಲೆ ನಮಾಜ್ ಮಾಡಿದವರ ಮೇಲೆ ದಾಖಲಿಸಿದ್ದ ಪ್ರಕರಣಕ್ಕೆ ಮರುದಿನವೇ 'ಬಿ' ರಿಪೋರ್ಟ್ ಹಾಕಿದಂತೆ, ರಸ್ತೆಯಲ್ಲಿ ನಮಾಜ್ ಮಾಡಿದ್ದನ್ನು ಪ್ರಶ್ನಿಸಿದ ವಿಶ್ವ ಹಿಂದೂ ಪರಿಷತ್ ಮುಖಂಡ ಶರಣ್ ಪಂಪ್‌ವೆಲ್ ಮೇಲೆ ದಾಖಲಿಸಿರುವ ಪ್ರಕರಣದಲ್ಲೂ ಬಿ ರಿಪೋರ್ಟ್ ಸಲ್ಲಿಸಬೇಕು' ಎಂದು ಒತ್ತಾಯಿಸಿ ವಿಎಚ್‌ಪಿಯವರು ಶುಕ್ರವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ವಿಶ್ವಹಿಂದೂ ಪರಿಷತ್ ವಿಭಾಗ ಸಂಯೋಜಕ ಪುನೀತ್ ಅತ್ತಾವರ, 'ಇದೇ ರೀತಿ ರಸ್ತೆಯ ಮೇಲೆ ನಮಾಜ್ ಮಾಡುವ ಕಾರ್ಯ ಮರುಕಳಿಸಿದರೆ, ಎಲ್ಲ ಮಸೀದಿಗಳ ಎದುರು ಸಾಮೂಹಿಕವಾಗಿ ಹನುಮಾನ್ ಚಾಲೀಸಾ ಪಠಣ ಮಾಡಲಾಗುತ್ತದೆ. ಈಗ ಕೈಯಲ್ಲಿ ಧ್ವಜ ಇದೆ, ಮುಂದೆ ಇದೇ ರೀತಿ ರಸ್ತೆಯಲ್ಲಿ ನಮಾಜ್ ಮಾಡಿದ್ದು ಕಂಡರೆ ನಮ್ಮ ಕೈಯಲ್ಲಿ ದಂಡ ಇರುತ್ತದೆ' ಎಂದರು.

ಹೋರಾಟ: 'ರಸ್ತೆಯಲ್ಲಿ ನಮಾಜ್ ಮಾಡಿದವರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಕಡ್ಡಾಯ ರಜೆ ಶಿಕ್ಷೆ ನೀಡಿರುವುದು ಕಾಂಗ್ರೆಸ್‌ನ ಮುಸ್ಲಿಂ ಓಲೈಕೆ ರಾಜಕಾರಣದ ಭಾಗವೇ ಆಗಿದೆ. ಪೊಲೀಸರು ಸ್ಥಳ ಮಹಜರು ಸೇರಿ ಯಾವುದೇ ತನಿಖೆ ನಡೆಸದೇ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದಾರೆ. ಈ ವಿಷಯದಲ್ಲಿ ಸರ್ಕಾರ ನಡೆದುಕೊಂಡ ರೀತಿ ಸಮಾಜದ ಸ್ವಾಸ್ಥ್ಯಕ್ಕೆ ವಿಷ ಹಾಕಿದಂತಿದೆ' ಎಂದು ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಡಾ. ವೈ. ಭರತ್ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದ ಪೊಲೀಸ್ ಇಲಾಖೆ ದ್ವಂದ್ವ ನೀತಿ ಅನುಸರಿಸುತ್ತಿದೆ. ರಾಜ್ಯ ಸರ್ಕಾರ, ಪೊಲೀಸ್ ಇಲಾಖೆಗಳೇ ಶಾಂತಿ ಕದಡುವ ಕೆಲಸ ಮಾಡುತ್ತಿವೆ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ಆರೋಪಿಸಿದರು.

ಪ್ರಕರಣ ದಾಖಲಿಸಿದ್ದೇ ತಪ್ಪು: ಕಾಂಗ್ರೆಸ್

'ಕಂಕನಾಡಿಯಲ್ಲಿ ಮಸೀದಿಯ ಹೊರಗೆ ಪ್ರಾರ್ಥನೆ ಮಾಡಿದ್ದಕ್ಕೆ ಪ್ರಕರಣ ದಾಖಲಿಸುವ ಅಗತ್ಯ ಇರಲಿಲ್ಲ. ಎಲ್ಲ ಧರ್ಮಗಳ ಕಾರ್ಯಕ್ರಮಗಳು ಕೆಲವೊಮ್ಮೆ ರಸ್ತೆಯಲ್ಲಿ ನಡೆಯುತ್ತವೆ. ಮಸೀದಿಯಲ್ಲಿ ಸ್ಥಳಾವಕಾಶ ಇಲ್ಲದಾಗ ಹೊರಗೆ ನಮಾಜ್ ಮಾಡಿರಬಹುದು. ಅದನ್ನು ತಪ್ಪು ಎಂದು ಹೇಳಲು ಆಗದು. ಅಲ್ಲಿ ನಡೆದಿರುವುದು ಪ್ರಾರ್ಥನೆ, ದೇವರು ಎಲ್ಲರಿಗೂ ಒಬ್ಬನೇ' ಎಂದು ಕೆಪಿಸಿಸಿ ಉಪಾಧ್ಯಕ್ಷ ರಮಾನಾಥ ರೈ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಜಿಲ್ಲೆಯಲ್ಲಿ ಅನೇಕ ಬಾರಿ ಬೇರೆ ಬೇರೆಯವರಿಂದ ಪ್ರಚೋದನಕಾರಿ ಮಾತು ವ್ಯಕ್ತವಾದಾಗಲೂ ಈ ರೀತಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿರಲಿಲ್ಲ. ಈಗ ಇಂತಹ ಸಣ್ಣ ವಿಷಯವನ್ನು ರಂಪಾಟ ಮಾಡುವ ಅಗತ್ಯ ಇರಲಿಲ್ಲ. ಪ್ರಾರ್ಥನೆಯ ವಿಡಿಯೊ ಮಾಡಿ, ಅದನ್ನು ಪ್ರಚಾರ ಮಾಡುವ ಮೂಲಕ ಸೌಹಾರ್ದಕ್ಕೆ ಧಕ್ಕೆ ತರುವ ಕಾರ್ಯ ಮಾಡಿದವರ ಮೇಲೆಯೂ ಕ್ರಮ ಆಗಬೇಕು' ಎಂದು ಆಗ್ರಹಿಸಿದರು.

ಎಸ್‌ಡಿಪಿಐ ಪ್ರತಿಭಟನೆ: ಮಸೀದಿ ಎದುರಿನ ರಸ್ತೆಯಲ್ಲಿ ನಮಾಜ್ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿದ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ)ದವರು ಪ್ರತಿಭಟನೆ ನಡೆಸಿದರು.

ಪ್ರಾಧ್ಯಾಪಕ ಬಿ.ಸಿ. ಮೈಲಾರಪ್ಪ ಅಮಾನತು

ಒಂದನೇ ಪುಟದಿಂದ...

48 ಗಂಟೆಗಳಿಗೂ ಹೆಚ್ಚು ಸಮಯ ಕಾರಾಗೃಹದಲ್ಲಿ ಇದ್ದುದರಿಂದ ನಿಯಮದಂತೆ ಪ್ರಕರಣವನ್ನು ಪರಿಶೀಲಿಸಬೇಕು. ಆರೋಪಿ ಪ್ರಾಧ್ಯಾಪಕರ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕು ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀಕರ್, ಕುಲಸಚಿವರಿಗೆ ನಿರ್ದೇಶನ ನೀಡಿದ್ದರು.

ತೆಲಂಗಾಣದ ನಂದಗಿರಿ ಹಿಲ್ಸ್‌ನ ರಿಯಲ್ ಎಸ್ಟೇಟ್ ಉದ್ಯಮಿ ಕೆ.ಶಶಿಧರ ರೆಡ್ಡಿ ಅವರು 2023 ಫೆಬ್ರುವರಿಯಲ್ಲಿ ನೀಡಿದ್ದ ವಂಚನೆ, ಜೀವ ಬೆದರಿಕೆ ದೂರಿನ ಆಧಾರದಲ್ಲಿ ತೆಲಂಗಾಣ ಪೊಲೀಸರು ಮೈಲಾರಪ್ಪ ಅವರನ್ನು ಬಂಧಿಸಿದ್ದರು.

ಶಶಿಧರ ರೆಡ್ಡಿ ತಮ್ಮ ಒಡೆತನದ ಶ್ರೀವೆನ್ ಇನ್‌ಫ್ರಾ ಹೆಸರಿನಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಪ್ರಕರಣದ ಮುಖ್ಯ ಆರೋಪಿ ಸುರೇಂದ್ರ ರೆಡ್ಡಿ ಅವರಿಂದ ಯಲಹಂಕದ ಹೊಸಳ್ಳಿ ಬಳಿ ಇರುವ 11.30 ಎಕರೆ ಜಮೀನು ಖರೀದಿಸಿದ್ದರು. ಮಾತುಕತೆಯ ವೇಳೆ ಮುಂಗಡವಾಗಿ ನೀಡಿದ್ದ ₹50 ಲಕ್ಷ ಸೇರಿ, ಒಟ್ಟು ₹5.35 ಕೋಟಿ ಪಾವತಿಸಿದ್ದರು. ಸುರೇಂದ್ರ ರೆಡ್ಡಿ ಅವರು ನೀಡಿದ್ದ ಜಮೀನಿನ ದಾಖಲೆಗಳನ್ನು ಪರಿಶೀಲಿಸಿದಾಗ ನಕಲಿ ಎನ್ನುವುದು ದೃಢಪಟ್ಟಿತ್ತು.

ಹಣ ವಾಪಸ್ ಕೇಳಿದಾಗ ಮಧ್ಯ ಪ್ರವೇಶಿಸಿದ್ದ ಮೈಲಾರಪ್ಪ ಆರೋಪಿಗಳ ಪರವಾಗಿ ತಮ್ಮ ಪ್ರಭಾವ ಬಳಸಿದ್ದರು. ಬೆದರಿಕೆ ಹಾಕಿದ್ದರು ಎಂದು ಅವರನ್ನೂ ಸೇರಿಸಿ, ಪ್ರಕರಣ ದಾಖಲಿಸಲಾಗಿತ್ತು.

ಎಸ್‌ಐಟಿ ನನ್ನನ್ನು ಕೂರಿಸಿದ್ದ ಕೊಠಡಿಯಲ್ಲಿ ತುಂಬಾ ವಾಸನೆ ಎಂಬ ಆರೋಪಿ ಮಾತಿಗೆ ಕೋರ್ಟ್‌ನಲ್ಲಿ ನಗೆಯ ಅಲೆ

ಪ್ರಜ್ವಲ್ ಆರು ದಿನ ಪೊಲೀಸ್ ಕಸ್ಟಡಿಗೆ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಎಸಗಿದ ಆರೋಪಿಯಾಗಿರುವ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಹೆಚ್ಚಿನ ತನಿಖೆಗಾಗಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದೆ.

ಈ ಕುರಿತಂತೆ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಸಲ್ಲಿಸಿದ ರಿಮ್ಯಾಂಡ್ (ಪೊಲೀಸ್ ಬಂಧನ ವಿಸ್ತರಣಾ ಕೋರಿಕೆ) ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ (42ನೇ ಎಸಿಎಂಎಂ) ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಶುಕ್ರವಾರ ವಿಚಾರಣೆ ನಡೆಸಿ, ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದರು. ಅಷ್ಟರೊಳಗೆ ತನಿಖೆ ಪೂರ್ಣಗೊಂಡರೆ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಎಂದು ನಿರ್ದೇಶಿಸಿದರು.

ಎಸ್‌ಐಟಿ ಪರ ಹಾಜರಿದ್ದ ಅಶೋಕ್ ನಾಯಕ್ ಸುದೀರ್ಘ ವಾದ ಮಂಡಿಸಿ, 'ಆರೋಪಿ ಪ್ರಜ್ವಲ್ ಒಬ್ಬ ವಿಕೃತ ಕಾಮಿ. ದುಷ್ಕೃತ್ಯದಿಂದ ನೂರಾರು ಹೆಣ್ಣು ಮಕ್ಕಳು ನೊಂದಿದ್ದಾರೆ. ಪ್ರಕರಣ ದಾಖಲಾದ ಬೆನ್ನಲ್ಲೇ ದೇಶ ಬಿಟ್ಟು ಓಡಿ ಹೋಗಿದ್ದಾರೆ. ದೇಶಕ್ಕೆ ವಾಪಸು ಬರುತ್ತೇನೆ ಎಂದು ಟಿಕೆಟ್ ಬುಕ್ ಮಾಡಿಸಿದವರು ರದ್ದು ಮಾಡಿದ್ದಾರೆ. ಅಂತೆಯೇ ಈಗ ಬಂದಿರುವುದೂ ತನಿಖೆಗೆ ಸಹಕರಿಸುವ ಉದ್ದೇಶದಿಂದ ಅಲ್ಲ' ಎಂದು ಆರೋಪಿಸಿದರು.

'ಪ್ರಕರಣವೀಗ ಜಾಗತಿಕ ಮಟ್ಟದ ಗಮನ ಸೆಳೆದಿದೆ. ಸಂತ್ರಸ್ತರು ಮತ್ತು ಅವರ ಕುಟುಂಬದ ಹೆಣ್ಣು ಮಕ್ಕಳು ಕಂಗಾಲಾಗಿದ್ದಾರೆ. ಇವರ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿರುವ ಲೈಂಗಿಕ ದೃಶ್ಯಗಳ ಕುರಿತಂತೆ ಆಳವಾದ ವೈಜ್ಞಾನಿಕ ತನಿಖೆ ನಡೆಯಬೇಕಿದೆ. ಮೊಬೈಲ್ ಸಾಧನಗಳ ಪರೀಕ್ಷೆಯ ಜೊತೆಗೆ ಇತ್ಯಾದಿ ಸಾಕ್ಷ್ಯಗಳ ಒಟ್ಟುಗೂಡಿಸುವಿಕೆಯ ನಿಟ್ಟಿನಲ್ಲಿ ಆರೋಪಿಯನ್ನು 15 ದಿನಗಳ ಕಾಲ ಕಸ್ಟಡಿಗೆ ನೀಡಬೇಕು' ಎಂದು ಕೋರಿದರು.

ಇದನ್ನು ಆಕ್ಷೇಪಿಸಿದ ಪ್ರಜ್ವಲ್ ಪರ ವಕೀಲ ಜಿ.ಅರುಣ್, 'ಎಸ್‌ಐಟಿ ಆರೋಪದ ಕಥೆ ನಾಲ್ಕು ವರ್ಷಗಳ ಹಿಂದಿನದ್ದು. ದೂರು ದಾಖಲಾದ ನಂತರ ಸಿಆರ್‌ಪಿಸಿ 164ರ ಅನ್ವಯದ ಹೇಳಿಕೆಯ ಅನುಸಾರ ಅತ್ಯಾಚಾರದ ಆರೋಪ ಸೇರ್ಪಡೆ ಮಾಡಲಾಗಿದೆ. ಇದರಲ್ಲಿ ಹುರುಳಿಲ್ಲ. ಆರೋಪಿಯನ್ನು ಪ್ರಾಸಿಕ್ಯೂಷನ್ ಒಂದು ದಿನದ ಮಟ್ಟಿಗೆ ಮಾತ್ರವೇ ವಶಕ್ಕೆ ಪಡೆಯಬಹುದು. 15 ದಿನ ಕಸ್ಟಡಿಗೆ ಕೇಳುವುದು ನ್ಯಾಯಯುತವಲ್ಲ' ಎಂದರು.



ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಶುಕ್ರವಾರ ವೈದ್ಯಕೀಯ ತಪಾಸಣೆಗೆ ಕರೆತರಲಾಯಿತು —ಪ್ರಜಾವಾಣಿ ಚಿತ್ರ

ಗುಪ್ತಾಂಗ ಪರೀಕ್ಷೆಯಲ್ಲಿ ಸತ್ಯ ಗೊತ್ತಾಗುತ್ತೆ...!

ಪ್ರಾಸಿಕ್ಯೂಟರ್ ಅಶೋಕ್ ನಾಯಕ್ ಅವರು, 'ಪ್ರಜ್ವಲ್ ರೇವಣ್ಣ ಕಾಮ ಕೇಳಿಯನ್ನೆಲ್ಲಾ ತಮ್ಮದೇ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು ಮೆರೆದಿದ್ದಾರೆ. ಅದರಲ್ಲಿ ತಮ್ಮ ಮುಖ ಕಾಣುವುದಿಲ್ಲ, ಹೀಗಾಗಿ ತಾನು ಬಚಾವ್ ಆಗಬಹುದು ಎಂದು ಅವರೇನೋ ಅಂದುಕೊಂಡಿರಬಹುದು. ಆದರೆ, ನಾಳೆ ಅವರ ಗುಪ್ತಾಂಗವನ್ನು ವೈದ್ಯಕೀಯ ಪರೀಕ್ಷೆ ನಡೆಸಿ; ವಿಡಿಯೊದಲ್ಲಿರುವ ದೃಶ್ಯಾವಳಿಗೆ ಹೋಲಿಕೆ ಮಾಡಿದರೆ ಸತ್ಯ ಪತ್ತೆಯಾಗುತ್ತದೆ ಎಂಬುದನ್ನು ಮರೆಯಬಾರದು' ಎಂದು ಹೇಳಿದರು.

ಗಮನ ಸೆಳೆದ ಕ್ಷಣಗಳು

- ಮಧ್ಯಾಹ್ನ 1.30ರ ವೇಳೆಗೆ ಪ್ರಜ್ವಲ್ ಅವರನ್ನು ಸಿಟಿ ಸಿವಿಲ್ ಕೋರ್ಟ್‌ನ ಆರನೇ ಮಹಡಿಯಲ್ಲಿರುವ 42ನೇ ಎಸಿಎಂಎಂ ಕೋರ್ಟ್ ಹಾಲ್‌ಗೆ ಕರೆದುಕೊಂಡು ಬರಲಾಯಿತು. ನ್ಯಾಯಾಧೀಶರು ಮಧ್ಯಾಹ್ನ 2.50ಕ್ಕೆ ವಿಚಾರಣೆ ನಡೆಸುವುದಾಗಿ ತಿಳಿಸಿದರು.
- ಬಂದ ಗಳಿಗೆಯಿಂದಲೂ 2.45ರವರೆಗೆ ಕೋರ್ಟ್ ಹಾಲ್ ಎದುರಿಗಿದ್ದ 53ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಪ್ರಾಸಿಕ್ಯೂಟರ್ ಸವಿತಾ ಡಿ.ರತನ್ ಅವರ ಕೊಠಡಿಯಲ್ಲಿ ಕೂರಿಸಲಾಗಿತ್ತು. ವಿಮಾನ ಪ್ರಯಾಣದಲ್ಲಿ ಧರಿಸಿದ್ದ ದಿರಿಸಿನಲ್ಲೇ ಇದ್ದರು.
- 2.45ಕ್ಕೆ ಕೋರ್ಟ್ ಹಾಲ್ ಪ್ರವೇಶಿಸಿದ ಪ್ರಜ್ವಲ್ ಕನಿಷ್ಠ ಎರಡು ಗಂಟೆ ಕಾಲ ಕೋರ್ಟ್ ಡಾಕ್‌ನಲ್ಲಿ (ಆರೋಪಿ ಸ್ಥಾನ) ಕೈಕಟ್ಟಿಕೊಂಡೇ ನಿಂತಿದ್ದರು. ನ್ಯಾಯಾಧೀಶರು ನಿಮ್ಮ ಹೆಸರೇನು, ಬಂಧನ ಯಾವಾಗ ಆಯಿತು, ನಿಮಗೆ ಏನಾದರೂ ತೊಂದರೆ ಕೊಟ್ಟರೇ... ಹೇಗೆ ಎಂಬೆಲ್ಲಾ ಸಾಂಪ್ರದಾಯಿಕ ಕಾನೂನಾತ್ಮಕ ಪ್ರಶ್ನೆಗಳನ್ನು ಕೇಳಿದರು.
- ನ್ಯಾಯಾಧೀಶರ ಪ್ರಶ್ನೆಗೆ ಉತ್ತರಿಸಿದ ಮೇಲೆ ಪ್ರಜ್ವಲ್, 'ಎಸ್‌ಐಟಿ ನನ್ನನ್ನು ಕೂರಿಸಿದ್ದ ರೂಮಿನಲ್ಲಿ ತುಂಬಾ ವಾಸನೆ ಬರುತ್ತದೆ' ಎಂದರು.
- ಈ ಮಾತಿಗೆ ಕಿಕ್ಕಿರಿದು ತುಂಬಿದ್ದ ಕೋರ್ಟ್ ಹಾಲ್ ಗೊಳ್ಳೆಂದು ಪ್ರತಿಕ್ರಿಯಿಸಿತು.
- ಆಗಾಗ್ಗೆ ತಮ್ಮ ತೋರುಬೆರಳಿನಿಂದ ಕಣ್ಣು, ಮೂಗು ಉಜ್ಜಿಕೊಳ್ಳುತ್ತಲೇ ಎಡಬದಿಯಲ್ಲಿ ನಿಂತು ವಾದ ಮಂಡಿಸುತ್ತಿದ್ದ ಪ್ರಾಸಿಕ್ಯೂಟರ್ ಅಶೋಕ್ ನಾಯಕ್ ಅವರನ್ನು ಪ್ರಜ್ವಲ್ ತದೇಕಚಿತ್ತರಾಗಿ ನೋಡುತ್ತಿದ್ದರು.
- ವಿಚಾರಣೆ ಮುಗಿದು ಆದೇಶ ಪ್ರಕಟಿಸಿದ ನಂತರ, 'ಮೀಡಿಯಾದವರು ನನ್ನ ಬೆನ್ನು ಬಿದ್ದಿದ್ದಾರೆ. ಅವರು ಟ್ರಯಲ್ ನಡೆಸದಂತೆ ಆದೇಶಿಸಬೇಕು' ಎಂದು ನ್ಯಾಯಾಧೀಶರನ್ನು ಕೋರಿದರು. ಇದಕ್ಕೆ ನ್ಯಾಯಾಧೀಶರು, 'ಇಂತಹುದನ್ನೆಲ್ಲಾ ನಿಮ್ಮ ವಕೀಲರ ಬಳಿ ಹೇಳಿಕೊಂಡು ಕೋರ್ಟ್ ಪ್ರಕ್ರಿಯೆಗೆ ಅನುಗುಣವಾಗಿ ಪರಿಹಾರ ಪಡೆಯಿರಿ' ಎಂದರು.
- 4.50ಕ್ಕೆ ಪೊಲೀಸರು ಪ್ರಜ್ವಲ್ ಅವರನ್ನು ಕೋರ್ಟ್‌ನಿಂದ ಹೊರಗೆ ಕರೆತರುತ್ತಿದ್ದಂತೆಯೇ ಸ್ಥಳದಲ್ಲಿದ್ದ ಬಹುತೇಕರು ತಮ್ಮ ಮೊಬೈಲ್‌ಗಳಲ್ಲಿ ಆ ಕ್ಷಣವನ್ನು ಸೆರೆಹಿಡಿಯಲು ಪ್ರಯತ್ನಿಸಿದರು. ವಿಶೇಷವಾಗಿ ಸ್ಥಳದಲ್ಲಿದ್ದ ಮಹಿಳೆಯರು, ತರುಣಿಯರು ಪ್ರಜ್ವಲ್ ಅವರನ್ನು ನೋಡಲು ಮುಗಿಬಿದ್ದಿದ್ದರು.
- ವಿಚಾರಣೆ ಮುಗಿದ ನಂತರ ಕೋರ್ಟ್ ಹಾಲ್‌ನಿಂದ ಪ್ರಜ್ವಲ್‌ಗೆ ಹೊರ ಹೋಗಲು ತಕ್ಷಣವೇ ಅವಕಾಶ ಸಿಗಲಿಲ್ಲ. ಸರಿಸುಮಾರು 500ಕ್ಕೂ ಹೆಚ್ಚು ವಕೀಲರು ತುಂಬಿದ್ದ ಕೋರ್ಟ್ ಹಾಲ್‌ನಲ್ಲಿ ದಿಗ್ಬಂಧನಕ್ಕೆ ಒಳಗಾಗಿದ್ದ ಪ್ರಜ್ವಲ್ 3.40ರಿಂದ 4.35ರವರೆಗೂ ಕೋರ್ಟ್ ಡಾಕ್‌ನಲ್ಲೇ ಕೈಕಟ್ಟಿ ನಿಲ್ಲಬೇಕಾಯಿತು.
- ನ್ಯಾಯಾಧೀಶರು ಪ್ರಕಟಿಸಿದ ಆದೇಶ ಸರಿಯಾಗಿ ಕೇಳಿಸಲಿಲ್ಲ. ಇದಕ್ಕೆ ವಕೀಲ ವೃಂದ ಜೋರು ದನಿಯಲ್ಲಿ 'ಇನ್ನೊಮ್ಮೆ ಗಟ್ಟಿಯಾಗಿ ಓದಿ' ಎಂದು ಮನವಿ ಮಾಡಿದಾಗ ನ್ಯಾಯಾಧೀಶರು ಮತ್ತೊಮ್ಮೆ ಗಟ್ಟಿಯಾಗಿ ಓದಿದರು.

ಸುದ್ದಿ 2 ನಿಮಿಷ

'ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ'

ಹಾಸನ: 'ಸಂಸದ ಪ್ರಜ್ವಲ್ ರೇವಣ್ಣ ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ ಎಂದು ಹೇಳಿದ್ದೇವೆ. ಪಕ್ಷವು ಸಂತ್ರಸ್ತೆಯರ ಪರವಾಗಿ ನಿಲ್ಲಲಿದೆ. ಎಸ್‌ಐಟಿ ತನಿಖೆಯಿಂದ ಸತ್ಯ ಹೊರ ಬರುವವರೆಗೂ ನಾವೇನೂ ಹೇಳಲಾಗದು' ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ,



'ಪಕ್ಷದಿಂದ ಪ್ರಜ್ವಲ್ ಅವರನ್ನು ಅಮಾನತು ಮಾಡಿದ್ದು, ಅವರ ಬಂಧನದಿಂದ ಪಕ್ಷದ ಮೇಲೆ ಯಾವುದೇ ಪರಿಣಾಮ ಬೀರಲ್ಲ. ನಮಗೆ ಯಾವುದೇ ಮುಜುಗರ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಎಸ್‌ಐಟಿ ತನಿಖೆಯನ್ನು ಸ್ವಾಗತಿಸಿ, ಪ್ರಜ್ವಲ್ ಬಂಧನಕ್ಕೆ ಎಲ್ಲರೂ ಒತ್ತಾಯಿಸಿದ್ದೆವು. ಈಗ ಬಂಧನವಾಗಿದೆ. ನಮ್ಮ ಕೆಲಸ ಮುಗಿಯಿತು. ಎಸ್‌ಐಟಿ ತನಿಖೆ ಮುಂದುವರಿಸುತ್ತದೆ. ಪೆನ್‌ಡ್ರೈವ್ ಹಂಚಿದವರ ಬಂಧನವೂ ಆಗಬೇಕು' ಎಂದು ಒತ್ತಾಯಿಸಿದರು.

'ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು ಎಂದು ಪಕ್ಷದ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರೂ ಮೊದಲೇ ಹೇಳಿದ್ದರು' ಎಂದರು.

ಪ್ರತಿಕ್ರಿಯೆಗೆ ವಿಜಯೇಂದ್ರ ನಕಾರ

ಕುಂದಾಪುರ (ಉಡುಪಿ): ಸಂಸದ ಪ್ರಜ್ವಲ್ ರೇವಣ್ಣ ಬಂಧನ, ತಮ್ಮ ಹಾಗೂ ಮುಖ್ಯಮಂತ್ರಿ ವಿರುದ್ಧ ಕೇರಳದಲ್ಲಿ ಶತ್ರು ಭೈರವಿ ಯಾಗ ನಡೆಸಲಾಗುತ್ತಿದೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನಿರಾಕರಿಸಿದರು.

ಕುಂಭಾಸಿಯ ಆನೆಗುಡ್ಡೆ ವಿನಾಯಕ ದೇವಸ್ಥಾನದಲ್ಲಿ ಶುಕ್ರವಾರ ನಡೆದ ಸಹಸ್ರ ನಾರಿಕೇಳ ಗಣಯಾಗದಲ್ಲಿ ಭಾಗಿಯಾಗಿದ್ದ ಅವರು, 'ವಿಧಾನ ಪರಿಷತ್‌ಗೆ ಮಂಡ್ಯ ಸಂಸದೆ ಸುಮಲತಾ ಮತ್ತು ರವಿಕುಮಾರ್ ಅವರ ಹೆಸರು ಕೇಳಿಬರುತ್ತಿರುವ ಬಗ್ಗೆ ಮಾಧ್ಯಮದ ಮೂಲಕವೇ ನಮ್ಮ ಗಮನಕ್ಕೆ ಬಂದಿದೆ. ಅಭ್ಯರ್ಥಿ ಯಾರು ಎನ್ನುವುದನ್ನು ಪಕ್ಷ ತೀರ್ಮಾನಿಸಲಿದೆ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಬಂಧಿಸಿ ಕರೆತಂದದ್ದು ಮಹಿಳಾ ಶಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗುರುವಾರ ತಡರಾತ್ರಿ ಬಂದಿಳಿದ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಎಸ್‌ಐಟಿ ಮಹಿಳಾ ಅಧಿಕಾರಿಗಳೇ ಬಂಧಿಸಿ ಜೀಪಿನಲ್ಲಿ ಕಚೇರಿಗೆ ಕರೆತಂದಿದ್ದು, ವಿಶೇಷವಾಗಿತ್ತು.

ಜರ್ಮನಿಯ ಮ್ಯೂನಿಕ್ ನಗರದಿಂದ ಬೆಂಗಳೂರಿಗೆ ಪ್ರಜ್ವಲ್ ಬರುತ್ತಿದ್ದ ಮಾಹಿತಿ ತಿಳಿದಿದ್ದ ಎಸ್‌ಐಟಿ ಅಧಿಕಾರಿಗಳು, ಬಂಧನಕ್ಕೆಂದು ಮಹಿಳಾ ಐಪಿಎಸ್ ಅಧಿಕಾರಿಗಳಾದ ಸುಮನ್ ಡಿ. ಪೆನ್ನೇಕರ್ ಹಾಗೂ ಸೀಮಾ ಲಾಟ್ಕರ್ ನೇತೃತ್ವದಲ್ಲಿ ತಂಡ ರಚಿಸಿದ್ದರು. ಮಹಿಳಾ ಸಿಬ್ಬಂದಿಯನ್ನೇ ತಂಡಕ್ಕೆ ನಿಯೋಜಿಸಲಾಗಿತ್ತು.

ಗುರುವಾರ ತಡರಾತ್ರಿ 12.50 ಗಂಟೆ ಸುಮಾರಿಗೆ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಇದೇ ಸಂದರ್ಭದಲ್ಲಿ ವಿಮಾನದೊಳಗೆ ಹೋಗಿದ್ದ ಭದ್ರತಾ ಸಿಬ್ಬಂದಿ, ಪ್ರಜ್ವಲ್ ರೇವಣ್ಣ ಅವರನ್ನು ಅಲ್ಲಿಯೇ ವಶಕ್ಕೆ ಪಡೆದು ಹೊರಗೆ ಕರೆತಂದರು. ವಲಸೆ ಅಧಿಕಾರಿಗಳೂ ಜೊತೆಗಿದ್ದರು. ನಿರ್ಗಮನ ಗೇಟ್‌ನಲ್ಲಿದ್ದ ಸುಮನ್ ಪೆನ್ನೇಕರ್ ನೇತೃತ್ವದ ತಂಡ, ಪ್ರಜ್ವಲ್ ಅವರಿಗೆ ವಾರಂಟ್ ತೋರಿಸಿ ವಶಕ್ಕೆ ಪಡೆದರು.

ಪೊಲೀಸ್ ಜೀಪಿನಲ್ಲಿ ಪ್ರಜ್ವಲ್ ಅವರನ್ನು ಕೂರಿಸಲಾಗಿತ್ತು. ಅಕ್ಕ–ಪಕ್ಕ ಹಾಗೂ ಹಿಂದೆ–ಮುಂದೆ ಮಹಿಳಾ ಅಧಿಕಾರಿಗಳಿದ್ದರು. ವಿಮಾನ ನಿಲ್ದಾಣದಿಂದ ಹೊರಟ ಜೀಪು, ಸಿಐಡಿ ಕಟ್ಟಡದಲ್ಲಿರುವ ಎಸ್‌ಐಟಿ ಕಚೇರಿಗೆ ಬಂದು ತಲುಪಿತು. ಮಹಿಳಾ ಅಧಿಕಾರಿಗಳೇ, ಜೀಪಿನಿಂದ ಇಳಿದ ಪ್ರಜ್ವಲ್‌ನನ್ನು ಸೆಲ್‌ಗೆ ಕರೆದೊಯ್ದು ಒಳಗೆ ಹಾಕಿದರು.

ಮಹಿಳೆಯರ ಶಕ್ತಿ ತೋರಿಸಿದ್ದೇವೆ: 'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣದ ಸಂತ್ರಸ್ತರ ಗೋಳು ನೋಡಿದ್ದೇವೆ. ಅವರು ಪಟ್ಟ ಕಷ್ಟಕ್ಕೆ ಮರುಗಿದ್ದೇವೆ. ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಪ್ರಜ್ವಲ್‌ಗೆ ಮಹಿಳೆಯರ ಶಕ್ತಿ ತೋರಿಸಬೇಕಿತ್ತು. ಹೀಗಾಗಿ, ಮಹಿಳಾ ಅಧಿಕಾರಿಗಳ ತಂಡದಿಂದಲೇ ಬಂಧಿಸಿ ಜೀಪಿನಲ್ಲಿ ಕರೆತಂದಿದ್ದೇವೆ' ಎಂದು ಎಸ್‌ಐಟಿಯ ಮೂಲಗಳು ಹೇಳಿವೆ.

'ಹಲವು ಆಮಿಷವೊಡ್ಡಿ ಮಹಿಳೆಯರ ಮೇಲೆ ದೌರ್ಜನ್ಯ ಎಸಗಲಾಗಿದೆ. ಇದೀಗ, ಮಹಿಳಾ ಶಕ್ತಿಯೇ ಪ್ರಜ್ವಲ್ ಅವರನ್ನು ಎಳೆದು ತಂದು ಸೆಲ್‌ಗೆ ಬಿಟ್ಟಿದೆ' ಎಂದೂ ತಿಳಿಸಿವೆ.

ಪ್ರಜ್ವಲ್ ಸೆರೆ: ಭವಾನಿ ಕಣ್ಮರೆ

ಒಂದನೇ ಪುಟದಿಂದ...

'35 ದಿನಗಳಿಂದ ತಲೆಮರೆಸಿಕೊಂಡಿದ್ದ ಪ್ರಜ್ವಲ್, ಜರ್ಮನಿಯ ಆಪ್ತರ ಮನೆಯಲ್ಲಿ ವಾಸವಿದ್ದ ಬಗ್ಗೆ ಮಾಹಿತಿ ಲಭ್ಯವಾಗಿದೆ. ಈಗಾಗಲೇ ಪ್ರಜ್ವಲ್ ಅವರ ಮೊಬೈಲ್ ಜಪ್ತಿ ಮಾಡಲಾಗಿದ್ದು, ಅಸಲಿ ವಿಡಿಯೊಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಜೊತೆಗೆ, ಆಶ್ರಯ ಕೊಟ್ಟವರ ವಿರುದ್ಧವೂ ಕ್ರಮ ಜರುಗಿಸಲು ಚಿಂತನೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ತಡರಾತ್ರಿ ಪ್ರಜ್ವಲ್ ಅವರನ್ನು ಬಂಧಿಸಿದ್ದ ಎಸ್‌ಐಟಿ ಅಧಿಕಾರಿಗಳು, ಶುಕ್ರವಾರ ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ನಂತರ, ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡರು.

ಭವಾನಿ ಅರ್ಜಿ ತಿರಸ್ಕಾರ

ಒಂದನೇ ಪುಟದಿಂದ..

ಪ್ರಾಸಿಕ್ಯೂಷನ್ ವಾದಕ್ಕೆ ಮನ್ನಣೆ: ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರ ವಾದವನ್ನು ನ್ಯಾಯಾಲಯ ಮನ್ನಿಸಿದೆ.

'ಪ್ರಕರಣದ ಅನೇಕ ಆರೋಪಿಗಳ ಜೊತೆ ಭವಾನಿ ಫೋನ್ ಸಂಭಾಷಣೆ ನಡೆಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಸಂಭಾಷಣೆಯಲ್ಲಿ ಭವಾನಿಯವರ ಪಾತ್ರವೇನು ಎಂಬುದನ್ನು ನಿರೂಪಿಸುವ ಹಲವು ಸ್ವಾರಸ್ಯಕರ ಅಂಶಗಳಿವೆ. ಇವುಗಳನ್ನೆಲ್ಲಾ ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ಸಲ್ಲಿಸಲಾಗಿದೆ' ಎಂದು ಅರುಹಿದ್ದರು. ಈ ಅಂಶಗಳ ಸಹಿತ ಪ್ರಾಸಿಕ್ಯೂಷನ್‌ನ ಇನ್ನುಳಿದ ವಾದಾಂಶವನ್ನೂ ಮನ್ನಿಸಿರುವ ನ್ಯಾಯಾಧೀಶರು ಭವಾನಿ ಅರ್ಜಿ ತಿರಸ್ಕರಿಸಿದ್ದಾರೆ.

ಶಾಸಕ ಪೂಂಜ ವರ್ತನೆಗೆ ಹೈಕೋರ್ಟ್ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಗಣಿಗಾರಿಕೆ ಹಾಗೂ ಸ್ಫೋಟಕಗಳ ಅಕ್ರಮ ದಾಸ್ತಾನು ಮಾಡಿದ ಆರೋಪ ಎದುರಿಸುತ್ತಿದ್ದ ವ್ಯಕ್ತಿಯ ಬಂಧನ ಖಂಡಿಸಿ ಪೊಲೀಸ್ ಠಾಣೆ ಮುಂದೆ ಪ್ರತಿಭಟಿಸಿ, ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಆರೋಪ ಎದುರಿಸುತ್ತಿರುವ ಬೆಳ್ತಂಗಡಿ ಕ್ಷೇತ್ರದ ಬಿಜೆಪಿ ಶಾಸಕ ಹರೀಶ್ ಪೂಂಜ ನಡೆಗೆ ಹೈಕೋರ್ಟ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್‌ಗಳನ್ನು ಪ್ರಶ್ನಿಸಿ ಹರೀಶ್ ಪೂಂಜ ಸಲ್ಲಿಸಿದ್ದ ಅರ್ಜಿಗಳನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ವಕೀಲರ ವಿವರಣೆ ಆಲಿಸಿದ ನಂತರ ಪೂಂಜ ವರ್ತನೆಯನ್ನು ಕಠಿಣ ಪದಗಳಲ್ಲಿ ತರಾಟೆಗೆ ತೆಗೆದುಕೊಂಡ ನ್ಯಾಯಮೂರ್ತಿ ದೀಕ್ಷಿತ್, 'ಜನಪ್ರತಿನಿಧಿ ಎಂದ ಮಾತ್ರಕ್ಕೆ ಪೊಲೀಸ್ ಠಾಣೆಗೆ ಹೋಗಿ ಪ್ರತಿಭಟನೆ ನಡೆಸುವುದು ಎಷ್ಟು ಸರಿ?, ಶಾಸಕರ ಜಾಗ ಏನಿದ್ದರೂ ವಿಧಾನಸೌಧ. ಅವರು ಅಲ್ಲಿ ಕುಳಿತು ಶಾಸನ ರೂಪಿಸುವ ಕೆಲಸ ಮಾಡಬೇಕು. ಅದು ಬಿಟ್ಟು ಪೊಲೀಸ್ ಠಾಣೆಗೆ ಬಂದು ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಅವರೆಲ್ಲಾ ನಿರ್ಭಯದಿಂದ, ಒತ್ತಡರಹಿತವಾಗಿ ತನಿಖೆ ಮಾಡಲು ಹೇಗೆ ಸಾಧ್ಯ' ಎಂದು ಕಿಡಿ ಕಾರಿದರು.

'ಪೊಲೀಸರು ಭಯೋತ್ಪಾದಕನನ್ನು ಬಂಧಿಸಿದಾಗ, ಅವನ ಪತ್ನಿ ಬಂದು; ನನ್ನ ಪತಿ ಭಾಳಾ ಒಳ್ಳೆಯ ವ್ಯಕ್ತಿ. ಪೊಲೀಸರು ಬಂಧಿಸಿದ್ದಾರೆ ಎಂದರೆ ಜನಪ್ರತಿನಿಧಿ ಪೊಲೀಸ್ ಠಾಣೆಗೆ ಹೋಗಲು ಸಾಧ್ಯವೇ? ಎಂದು ಪ್ರಶ್ನಿಸಿದ ನ್ಯಾಯಮೂರ್ತಿಯವರು, 'ಇತ್ತೀಚಿನ ದಿನಗಳಲ್ಲಿ ಪೊಲೀಸರ ವಿರುದ್ಧ ಧರಣಿ ನಡೆಸುವುದು, ಕಲ್ಲು ಎಸೆಯುವುದು, ಅವರ ಕರ್ತವ್ಯಕ್ಕೆ ಅಡ್ಡಿಪಡಿಸುವುದು ಸಾಮಾನ್ಯವಾಗಿ ಹೋಗಿದೆ. ಯಾವುದೋ ಒಂದು ಪ್ರಕರಣದಲ್ಲಿ ಪೊಲೀಸರಿಂದ ಒಬ್ಬರಿಗೆ ತೊಂದರೆ ಆಗಬಹುದು. ಹಾಗೆಂದ ಮಾತ್ರಕ್ಕೆ ಶಾಸಕರು ಕೋರ್ಟ್ ಮಾಡುವ ಕೆಲಸವನ್ನು ಮಾಡಿದರೆ ಹೇಗೆ? ಶಾಸಕರು ಠಾಣೆಗೆ ಹೋಗಬಾರದಿತ್ತು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಈ ರೀತಿಯ ಪ್ರಕರಣದಲ್ಲಿ ದೇಶದ ಯಾವುದೇ ನ್ಯಾಯಾಲಯ ಆರೋಪಿತರ ಪರವಾಗಿ ಆದೇಶಿಸಿದ್ದರೆ ಅಥವಾ ವಿದೇಶಿ ನ್ಯಾಯಾಲಯಗಳು ಒಂದೇ ಒಂದು ಆದೇಶ ನೀಡಿದ್ದರೆ ಅಂತಹ ಪೂರ್ವನಿದರ್ಶನಗಳನ್ನು ಕೋರ್ಟ್‌ಗೆ ಸಲ್ಲಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ತಾಕೀತು ಮಾಡಿದ ನ್ಯಾಯಮೂರ್ತಿಗಳು ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದರು.

ಉತ್ತರಾಖಂಡದಲ್ಲಿ ಮತ್ತೆ ಕಾಳ್ಗಿಚ್ಚು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ಮತ್ತೊಮ್ಮೆ ಭಾರಿ ಪ್ರಮಾಣದ ಕಾಳ್ಗಿಚ್ಚು ಸಂಭವಿಸಿದೆ. ರಾಜ್ಯದ ವಿವಿಧೆಡೆ ಒಟ್ಟು 11 ಪ್ರದೇಶಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 13 ಹೆಕ್ಟೇರ್‌ಗೂ ಹೆಚ್ಚಿನ ಅರಣ್ಯ ಪ್ರದೇಶ ಸುಟ್ಟು ಭಸ್ಮವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಾಜಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಗೌಹರಿ ವಲಯದಲ್ಲಿ ಗುರುವಾರ ಸಂಜೆ ಬೆಂಕಿ ಬಿದ್ದು, 1.5 ಹೆಕ್ಟೇರ್‌ನಷ್ಟು ಅರಣ್ಯವನ್ನು ಆವರಿಸಿತ್ತು.



ಉರುಸ್ ಸಂಭ್ರಮ

ಕಲಬುರಗಿಯ ಹಜರತ್ ಖಾಜಾ ಬಂದಾ ನವಾಜ್ ಅವರ ಉರುಸ್ ಅಂಗವಾಗಿ ಶುಕ್ರವಾರ ದರ್ಗಾಕ್ಕೆ ವಿದ್ಯುತ್ ದೀಪ ಅಲಂಕಾರ ಮಾಡಲಾಯಿತು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಉದ್ಯೋಗ ಹೆಚ್ಚಿಸಿ, ಬಾಂಧವ್ಯ ಬೆಸೆದ 'ಶಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ 'ಶಕ್ತಿ' ಜಾರಿಯ ನಂತರ ಉದ್ಯೋಗ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ.

ಆರ್ಥಿಕ ನೀತಿ ಸಂಸ್ಥೆ, ಜಸ್ಟ್‌ಜಾಬ್ಸ್ ನೆಟ್‌ವರ್ಕ್ ಸಹಯೋಗದಲ್ಲಿ ನಡೆಸಿದ ಸಮೀಕ್ಷೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಪ್ರಮಾಣ ಶೇ 5.1ರಷ್ಟು ಹೆಚ್ಚಳವಾಗಿದೆ. ಅಕ್ಟೋಬರ್–ಡಿಸೆಂಬರ್ 2022ರಲ್ಲಿ ಉದ್ಯೋಗಗಳಲ್ಲಿ ಮಹಿಳಾ ಸಹಭಾಗಿತ್ವದ ಪ್ರಮಾಣ 25.1ರಷ್ಟಿತ್ತು. 2023ರ ಅದೇ ಅವಧಿಯಲ್ಲಿ ಶೇ 30.2ರಷ್ಟಾಗಿದೆ. ಒಟ್ಟು ಕಾರ್ಮಿಕರ ಸಂಖ್ಯೆ ಶೇ 23.7ರಿಂದ ಶೇ 28.8ಕ್ಕೆ ಹೆಚ್ಚಳವಾಗಿದೆ.

ವಿಧಾನಸಭಾ ಚುನಾವಣೆಗೂ ಮೊದಲು ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ರಾಜ್ಯ ಸರ್ಕಾರ ಜೂನ್ 11ರಂದು ಯೋಜನೆಗೆ ಚಾಲನೆ ನೀಡಿತ್ತು. ಉಚಿತ ಬಸ್ ಪ್ರಯಾಣದ ವ್ಯವಸ್ಥೆಯನ್ನು ಬಳಸಿಕೊಂಡ ಮಹಿಳೆಯರು ತಾವು ವಾಸ ಮಾಡುತ್ತಿರುವ ಸ್ಥಳದಿಂದ ಮತ್ತೊಂದು ಪ್ರದೇಶಕ್ಕೆ ಕೆಲಸ ಅರಸಿಕೊಂಡು ಹೋಗುತ್ತಿದ್ದಾರೆ. ಕೆಲಸ ಮುಗಿದ ನಂತರ ಸುರಕ್ಷಿತವಾಗಿ ಬಸ್‌ಗಳಲ್ಲಿ ಪ್ರಯಾಣ ಮಾಡಿ ಮರಳಿ ಮನೆ ಸೇರುತ್ತಿದ್ದಾರೆ.

ಉಚಿತ ಪ್ರಯಾಣದ ಕಾರಣಕ್ಕೆ ತಮ್ಮ ತವರಿಗೆ ಹೋಗಿ ಬರುವ ಮಹಿಳೆಯರ ಸಂಖ್ಯೆಯಲ್ಲೂ ಗಣನೀಯ ಹೆಚ್ಚಳವಾಗಿದೆ. ಹಣದ ಕೊರತೆ ಅಥವಾ ಪ್ರಯಾಣದ ವೆಚ್ಚಕ್ಕೆ ಗಂಡ ಅಥವಾ ಮಕ್ಕಳ ಮುಂದೆ ಕೈಚಾಚಬೇಕಾದ ಕಾರಣಕ್ಕಾಗಿ ಮದುವೆಯಾದ ನಂತರ ತವರನ್ನೇ ಮರೆತಂತಿದ್ದ ಮಹಿಳೆಯರು ನಿಯಮಿತವಾಗಿ ಹೋಗಿ ಬರುತ್ತಿರುವ ಕಾರಣ ಸಂಬಂಧಗಳು ಇನ್ನಷ್ಟು ಗಟ್ಟಿಯಾಗುತ್ತಿವೆ ಎಂದೂ ವರದಿ ಹೇಳಿದೆ.

ಜಿಎಸ್‌ಟಿಗೂ 'ಶಕ್ತಿ': 2023–24ನೇ ಹಣಕಾಸು ಅಂತ್ಯದವರೆಗೆ ರಾಜ್ಯದ ಮಹಿಳೆಯರು 183.07 ಕೋಟಿ ಟಿಕೆಟ್ ಪಡೆದಿದ್ದಾರೆ. ಅವರು ಪ್ರಯಾಣಿಸಿದ ದೂರದ ಆಧಾರದ ಟಿಕೆಟ್‌ನ ಒಟ್ಟು ಮೌಲ್ಯ ₹4,380.37 ಕೋಟಿ. ಅದಕ್ಕಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ₹5,015 ಕೋಟಿ ಮೀಸಲಿಟ್ಟಿತ್ತು. ಈ ವಹಿವಾಟಿನ ಭಾಗವಾಗಿ ಸರ್ಕಾರ ₹309.64 ಕೋಟಿ ಜಿಎಸ್‌ಟಿ ಭರಿಸಿದೆ. 2024-25ನೇ ಸಾಲಿನಲ್ಲಿ ಶಕ್ತಿ ಯೋಜನೆಯಿಂದ ₹371.57 ಕೋಟಿ ಜಿಎಸ್‌ಟಿ ಭರಿಸಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಪ್ರಯಾಣದ ಮೂಲಕ ಉಳಿತಾಯವಾದ ಮೊತ್ತ ಆ ಕುಟುಂಬದ ಆದಾಯದ ಒಂದು ಭಾಗವಾಗುತ್ತಿದೆ.

'ನಾಗೇಂದ್ರ ರಾಜೀನಾಮೆ ಮುಖ್ಯಮಂತ್ರಿ ವಿವೇಚನೆಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಪಟ್ಟು ಹಿಡಿದಿರುವ ಕುರಿತು ಕೆಲವು ಸಚಿವರ ಜತೆ ಶುಕ್ರವಾರ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಂದಿನ ಹೆಜ್ಜೆ ಬಗ್ಗೆ ಸಮಾಲೋಚಿಸಿದ್ದಾರೆ. ರಾಜೀನಾಮೆ ಪಡೆಯುವುದು ಮುಖ್ಯಮಂತ್ರಿಯವರ ವಿವೇಚನೆಗೆ ಬಿಟ್ಟದ್ದು ಎಂಬ ಅಭಿಪ್ರಾಯ ಸಚಿವರಿಂದ ವ್ಯಕ್ತವಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮುಖ್ಯಮಂತ್ರಿಯವರನ್ನು ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಭೇಟಿಯಾಗಿ ಸಮಾಲೋಚನೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಗೃಹ ಸಚಿವರ ಅನುಪಸ್ಥಿತಿಯಲ್ಲಿ ಗುರುವಾರ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದ ಸಿದ್ದರಾಮಯ್ಯ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಕುರಿತು ಮಾಹಿತಿ ಪಡೆದಿದ್ದರು. ಸಚಿವರ ಜತೆ ಪ್ರಕರಣದ ವಿವರಗಳನ್ನು ಶುಕ್ರವಾರ ಹಂಚಿಕೊಂಡಿರುವ ಮುಖ್ಯಮಂತ್ರಿ, ವಿರೋಧ ಪಕ್ಷ ಬಿಜೆಪಿಯ ಪ್ರತಿಭಟನೆಯನ್ನು ಎದುರಿಸುವ ಬಗ್ಗೆ ಅಭಿಪ್ರಾಯ ಕೇಳಿದ್ದಾರೆ ಎಂದು ಮೂಲಗಳು ಹೇಳಿವೆ.

ಕೆಲವು ಸಚಿವರು ಕಾದು ನೋಡುವ ತಂತ್ರ ಅನುಸರಿಸುವಂತೆ ಸಲಹೆ ನೀಡಿದ್ದಾರೆ. ಇನ್ನು ಕೆಲವರು ಸಚಿವ ನಾಗೇಂದ್ರ ಅವರಿಂದ ರಾಜೀನಾಮೆ ಪಡೆಯುವುದು ತಮ್ಮ ವಿವೇಚನೆಗೆ ಬಿಟ್ಟ ವಿಚಾರ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಗೃಹ ಸಚಿವರ ಭೇಟಿಯಾದ ದದ್ದಲ್: ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಗೃಹ ಸಚಿವ ಪರಮೇಶ್ವರ ಅವರನ್ನು ಶುಕ್ರವಾರ ಬೆಳಿಗ್ಗೆ ಭೇಟಿಯಾದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿರುವ ಶಾಸಕ ಬಸನಗೌಡ ದದ್ದಲ್, ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೊಂಡರು. ತಾವು ನಿಗಮದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಲೋಕಸಭೆ ಚುನಾವಣೆಯ ನೀತಿಸಂಹಿತೆ ಜಾರಿಯಾಯಿತು. ಆ ಬಳಿಕ ನಿಗಮದ ಕಚೇರಿಗೆ ಹೋಗಿಲ್ಲ. ಅಲ್ಲಿ ಏನು ನಡೆಯಿತು ಎಂಬ ವಿವರ ತಮಗೆ ತಿಳಿದಿಲ್ಲ ಎಂಬ ಮಾಹಿತಿಯನ್ನು ದದ್ದಲ್ ಗೃಹ ಸಚಿವರಿಗೆ ನೀಡಿದ್ದಾರೆ.

ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಕನಕಪುರ: 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ವಾಸ್ತವಾಂಶ ಪರಿಶೀಲನೆ ಮಾಡುತ್ತಿದ್ದೇವೆ. ಈ ವಿಷಯದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಾಗ ನೈತಿಕ ಹೊಣೆ ಹೊತ್ತು ನಾನು ರಾಜೀನಾಮೆ ನೀಡಿದೆ. ಈಗ ಸಚಿವ ನಾಗೇಂದ್ರ ರಾಜೀನಾಮೆ ನೀಡಲಿ' ಎಂಬ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿಕೆ ಕುರಿತು ಪಟ್ಟಣದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ವಾಸ್ತವಾಂಶ ಹೊರಬಂದ ಬಳಿಕ ರಾಜೀನಾಮೆ ಕುರಿತು ತೀರ್ಮಾನ ಮಾಡುತ್ತೇವೆ' ಎಂದರು.

'ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಜೂನ್ 6ರವರೆಗೆ ಯಾಕೆ ಕಾಯಬೇಕು. ಈಗಿನಿಂದಲೇ ಹೋರಾಟ ಮಾಡಲಿ. ಅವರಿಗೆ ಬೇಡ ಎಂದಿರುವವರು ಯಾರು. ಅವತ್ತೇನಾದರೂ ಒಳ್ಳೆಯ ಮುಹೂರ್ತ ಇದೆಯೇ? ಯಾವ ವಿಷಯಕ್ಕೆ ಬಾಯಿ ಬಿಡಬೇಕಿತ್ತೊ ಅದಕ್ಕೆ ಬಾಯಿ ಬಿಡದವರು ಈಗ ಮಾತನಾಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ: ಆರ್.ಅಶೋಕ ಪ್ರಶ್ನೆ

₹187 ಕೋಟಿಯಲ್ಲಿ ಸಿ.ಎಂ ಪಾಲು ಎಷ್ಟು?

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವೇನು ಎಂಬುದು ಸ್ಪಷ್ಟವಾಗಬೇಕು. ₹ 187 ಕೋಟಿಯಲ್ಲಿ ಅವರಿಗೆ ಎಷ್ಟು ಪಾಲು ಸಂದಾಯವಾಗಿದೆ?' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದರು.


ಆತ್ಮಹತ್ಯೆ ಮಾಡಿಕೊಂಡ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ.ಚಂದ್ರಶೇಖರನ್ ಅವರ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಅವರು ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಸಿದ್ದರಾಮಯ್ಯ ಅವರೇ ಹಣಕಾಸು ಖಾತೆ ನಿಭಾಯಿಸುತ್ತಾರೆ. ಹಣಕಾಸು ಸಚಿವಾಲಯದ ಅನುಮತಿ ಇಲ್ಲದೇ ಇಷ್ಟೊಂದು ದೊಡ್ಡ ಮೊತ್ತದ ಹಣ ಬೇನಾಮಿ ಖಾತೆಗಳಿಗೆ ವರ್ಗಾವಣೆ ಮಾಡಲು ಸಾಧ್ಯವೇ ಇಲ್ಲ' ಎಂದರು.

'ಹಗರಣದಲ್ಲಿ ಒಬ್ಬ ಮಂತ್ರಿ ಮಾತ್ರವಲ್ಲ, ಅನೇಕ ಮಂತ್ರಿಗಳು ಭಾಗಿಯಾಗಿದ್ದಾರೆ. ಇದಕ್ಕೆ ಮುಖ್ಯಮಂತ್ರಿಯ ಸಹಕಾರವೂ ಇದೆ' ಎಂದು ಆರೋಪಿಸಿದ ಆರ್.ಅಶೋಕ್, 'ನಿಗಮದ ಹಣ ಕಳವು ಮಾಡಿದವರು ಆರಾಮಾಗಿ ಓಡಾಡಿಕೊಂಡಿದ್ದಾರೆ. ಅವರೆಲ್ಲ ಮುಖ್ಯಮಂತ್ರಿ ವಿರುದ್ಧ ಹೇಳಿಕೆ ನೀಡುತ್ತಾರೆ ಎಂಬ ಭಯದಿಂದಲೇ ಬಂಧಿಸದೇ ಬಿಟ್ಟಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಬಂದಾಗಲೆಲ್ಲ ಅಧಿಕಾರಿಗಳ ಮೇಲೆ ನಿರಂತರವಾಗಿ ದೌರ್ಜನ್ಯ, ದಬ್ಬಾಳಿಕೆ ನಡೆದಿರುವುದು ಕಾಣುತ್ತೇವೆ. ನಾವು ಆ ಭಾಗ್ಯ ಈ ಭಾಗ್ಯ ಕೊಟ್ಟೆವು ಎನ್ನುತ್ತಾರೆ. ಭಾಗ್ಯ, ಭಾಗ್ಯ ಅನ್ನುತ್ತಲೇ ನಿಷ್ಠಾವಂತ ಅಧಿಕಾರಿಗಳ ಬದುಕುವ ಭಾಗ್ಯವನ್ನೇ ಸಿದ್ದರಾಮಯ್ಯ ಕಿತ್ತುಕೊಂಡುಬಿಟ್ಟಿದ್ದಾರೆ' ಎಂದು ಹರಿಹಾಯ್ದರು.

'ಚಂದ್ರಶೇಖರನ್ ಕುಟುಂಬದವರು ಕೇಳದೇ ಇದ್ದರೂ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ಇದೆಲ್ಲವೂ ಹಗರಣ ಮುಚ್ಚಿಹಾಕುವ ಷಡ್ಯಂತ್ರ. ಈಗ ಸಿಬಿಐ ತನಿಖೆಗೆ ಬ್ಯಾಂಕ್‌ನವರೇ ವಿನಂತಿ ಮಾಡಿದ್ದಾರೆ. ಹೇಗಿದ್ದರೂ ಸತ್ಯ ಹೊರಬರಲಿದೆ. ಸರ್ಕಾರದ ಮಾನ ಮರ್ಯಾದೆ ಉಳಿಸಿಕೊಳ್ಳಲಾದರೂ ಸಿಬಿಐ ತನಿಖೆಗೆ ಕೊಟ್ಟು ಕೈ ತೊಳೆದುಕೊಳ್ಳಲಿ' ಎಂದರು.



ಶಿವಮೊಗ್ಗದಲ್ಲಿ ಶುಕ್ರವಾರ ಪಿ.ಚಂದ್ರಶೇಖರನ್ ಅವರ ನಿವಾಸಕ್ಕೆ ಭೇಟಿ ನೀಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಕುಟುಂಬದವರಿಗೆ ಸಾಂತ್ವನ ಹೇಳಿದರು. ಶಾಸಕ ಎಸ್.ಎನ್.ಚನ್ನಬಸಪ್ಪ, ವಿಧಾನಪರಿಷತ್ ಸದಸ್ಯ ಡಿ.ಎಸ್.ಅರುಣ್ ಚಿತ್ರದಲ್ಲಿದ್ದಾರೆ

ಹಗರಣದಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಶಾಮೀಲಾಗಿದ್ದಾರೆ. ಸಿಬಿಐ ತನಿಖೆಗೆ ವಹಿಸಿದರೆ, ಸತ್ಯಾಂಶ ಹೊರಬರಲಿದೆ.
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ಪರಮೇಶ್ವರ ಅಸಹಾಯಕ ಗೃಹ ಸಚಿವ'

ಶಿವಮೊಗ್ಗ: ಪ್ರಕರಣದ ತನಿಖೆ ಸಿಬಿಐಗೆ ಕೊಡುವುದಿಲ್ಲ ಎಂಬ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿಕೆಗೆ ಪ್ರತಿಕ್ರಿಯಿಸಿದ ಆರ್.ಅಶೋಕ, 'ಪರಮೇಶ್ವರ ಒಬ್ಬ ಅಸಹಾಯಕ ಗೃಹಸಚಿವ. ದಾರಿಯಲ್ಲಿ ಹೋಗುವವರೆಲ್ಲ ಅವರ ಖಾತೆ ನಿರ್ವಹಿಸುತ್ತಿದ್ದಾರೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಆಯಾ ಜಿಲ್ಲೆಗಳ ಮಂತ್ರಿಗಳು ಕೈ ಆಡಿಸುತ್ತಾರೆ. ಹೀಗಾಗಿ ಅವರಿಗೆ ಇಲಾಖೆಯ ಬಗ್ಗೆ ಆಸಕ್ತಿಯೂ ಇಲ್ಲ. ಗಮನವೂ ಇಲ್ಲ' ಎಂದರು.

ಪ್ರಾಮಾಣಿಕ ಅಧಿಕಾರಿ ಸರ್ಕಾರದ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿರುವುದೇ ಕಾಂಗ್ರೆಸ್‌ನ ಒಂದು ವರ್ಷದ ಸಾಧನೆ. ಮೊದಲ ವಿಕೆಟ್ (ಸಚಿವ ಬಿ.ನಾಗೇಂದ್ರ ರಾಜೀನಾಮೆ) ಪತನವಾಗುವವರೆಗೂ ನಾವು ಬಿಡುವುದಿಲ್ಲ.

'ಹಣದಲ್ಲಿ ರಾಹುಲ್ ಗಾಂಧಿಗೂ ಪಾಲು'

ಕಲಬುರಗಿ: 'ನಿಗಮದ ₹ 187 ಕೋಟಿ ಅವ್ಯವಹಾರದಲ್ಲಿ ಬರೀ ರಾಜ್ಯ ಸರ್ಕಾರವಷ್ಟೇ ಭಾಗಿಯಾಗಿಲ್ಲ. ಇದು ಕಾಂಗ್ರೆಸ್ ಹೈಕಮಾಂಡ್‌ವರೆಗೂ ಚಾಚಿದ್ದು, ರಾಹುಲ್ ಗಾಂಧಿ ಅವರಿಗೂ ಇದರಲ್ಲಿ ಪಾಲು ಹೋಗಿರುವ ಶಂಕೆ ಇದೆ. ಹೀಗಾಗಿ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಹಗರಣದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ತಲೆದಂಡವಷ್ಟೇ ಸಾಲದು. ಇದರಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಭಾಗಿಯಾಗಿರುವ ಬಗ್ಗೆಯೂ ತನಿಖೆ ನಡೆಯಬೇಕು. ಚುನಾವಣೆಗಾಗಿ ಖರ್ಚು ಮಾಡಲು ಹೈಕಮಾಂಡ್‌ಗೆ ಎಷ್ಟು ಹಣ ಹೋಗಿದೆ ಎಂಬುದರ ವಿವರವೂ ಬಹಿರಂಗವಾಗಬೇಕು.

ಇದಕ್ಕಾಗಿ ಪ್ರಕರಣವನ್ನು ಸಿಐಡಿ ಬದಲು ಸಿಬಿಐಗೆ ಕೊಡಬೇಕು' ಎಂದು ಆಗ್ರಹಿಸಿದರು.

ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಜನಪರ ಸೇವೆಗೆ ಪ್ರೇರಣೆ– ಡಾ.ಪ್ರತಿಮಾಮೂರ್ತಿ

ನಿಮ್ಹಾನ್ಸ್‌ಗೆ ‘ಮಂಡೇಲಾ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಂಸ್ಥೆಯ ಆರೋಗ್ಯ ಜಾಗೃತಿ ಸೇವೆಗೆ ದೊರೆತ ಮನ್ನಣೆ
- ಆರೋಗ್ಯದ ಕಾಳಜಿ ವಹಿಸುವ ಭಾರತ ಯತ್ನಕ್ಕೆ ಸಿಕ್ಕ ಗೌರವ –ಕೇಂದ್ರ ಸಚಿವ
- ನಿಮ್ಹಾನ್ಸ್ ದೂರದೃಷ್ಟಿಗೆ ದೊರೆತ ಗೌರವ ಮುದ್ರೆ– ನಿರ್ದೇಶಕಿ ಸಂತಸ

ನವದೆಹಲಿ (ಪಿಟಿಐ): ಆರೋಗ್ಯ ಜಾಗೃತಿ ಮೂಡಿಸುವ ವಿಷಯದಲ್ಲಿ ಗಮನಾರ್ಹ ಸಾಧನೆ ಮಾಡಿದ ಕಾರಣಕ್ಕೆ ಬೆಂಗಳೂರಿನ ನಿಮ್ಹಾನ್ಸ್ ಅನ್ನು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) 2024ನೇ ಸಾಲಿನ ನೆಲ್ಸನ್ ಮಂಡೇಲಾ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಡಬ್ಲ್ಯುಎಚ್‌ಒ 2019ರಿಂದ ನೆಲ್ಸನ್ ಮಂಡೇಲಾ ಪ್ರಶಸ್ತಿ ಪ್ರದಾನ ಮಾಡುತ್ತಾ ಬಂದಿದೆ. ಆರೋಗ್ಯ ಜಾಗೃತಿ ಮೂಡಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ ವ್ಯಕ್ತಿಗಳು, ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳನ್ನು ಈ ಪ್ರಶಸ್ತಿಯ ಮೂಲಕ ಗೌರವಿಸುತ್ತದೆ.

ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಪ್ರಶಸ್ತಿಗೆ ಪಾತ್ರವಾಗಿರುವ ನಿಮ್ಹಾನ್ಸ್‌ಗೆ ಅಭಿನಂದನೆ ಸಲ್ಲಿಸಿದ್ದು, ‘ಎಲ್ಲರ ಆರೋಗ್ಯದ ಕಾಳಜಿ ವಹಿಸುವ ಭಾರತದ ಪ್ರಯತ್ನಗಳನ್ನು ಈ ಪ್ರಶಸ್ತಿ ಗುರುತಿಸಿದಂತಾಗಿದೆ’ ಎಂದು ಹೇಳಿದ್ದಾರೆ.

ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ಕೆಲಸಗಳನ್ನು ಮಾಡುತ್ತಿರುವ ನಿಮ್ಹಾನ್ಸ್‌ಗೆ ಪ್ರಶಸ್ತಿ ಸಂದಿರುವುದಕ್ಕೆ ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ ಅವರೂ ಹರ್ಷ ವ್ಯಕ್ತಪಡಿಸಿದ್ದಾರೆ.

‘ಪ್ರಶಸ್ತಿಗೆ ಆಯ್ಕೆಯಾಗಿರುವುದು ಸಂತಸದ ವಿಷಯವಾಗಿದೆ. ಇದು ನಿಮ್ಹಾನ್ಸ್‌ನ ಈವರೆಗಿನ ಹಾಗೂ ಹಿಂದಿನ ಕೆಲಸಗಳಿಗೆ ಸಂದಿರುವ ಮನ್ನಣೆಯಷ್ಟೇ ಅಲ್ಲ, ಅದು ಪ್ರಾರಂಭ ಆದಾಗಿನಿಂದಲೂ ಇರುವ ದೂರದೃಷ್ಟಿಗೆ ದೊರೆತಿರುವ ಗೌರವದ ಮುದ್ರೆ, ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಜನೋಪಯೋಗಿ ಕೆಲಸಗಳನ್ನು ಮಾಡಲು ಇದು ಪ್ರೇರಣೆಯಾಗುತ್ತದೆ’ ಎಂದು ನಿಮ್ಹಾನ್ಸ್ ನಿರ್ದೇಶಕರಾದ ಡಾ. ಪ್ರತಿಮಾ ಮೂರ್ತಿ ಅವರು ಹೇಳಿದ್ದಾರೆ.



ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯ ಒಂದು ನೋಟ –ಪ್ರಜಾವಾಣಿ ಚಿತ್ರ

ಹೊಸಕೋಟೆಯಲ್ಲಿ ಹೆಣ್ಣು ಭ್ರೂಣ ಹತ್ಯೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ಹೋಬಳಿಯ ಹೊಸಕೋಟೆ ಗ್ರಾಮದ ಮನೆಯೊಂದರಲ್ಲಿ ಹೆಣ್ಣು ಭ್ರೂಣ ಹತ್ಯೆ ನಡೆದಿರುವ ಸಂಬಂಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಗುರುವಾರ ರಾತ್ರಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ತನಿಖೆ ಆರಂಭಿಸಲಾಗಿದೆ.

ವಿವರ: ಶ್ರೀರಂಗಪಟ್ಟಣ ತಾಲ್ಲೂಕಿನ ಕೆಟ್ಟಹಳ್ಳಿಯ ಮಾಲಾಶ್ರೀ (34) ಅವರ ಹೊಟ್ಟೆ ನೋವು, ತೀವ್ರ ರಕ್ತಸ್ರಾವದ ಚಿಕಿತ್ಸೆಗಾಗಿ ತಾಯಿಯೊಂದಿಗೆ ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ಗುರುವಾರ ದಾಖಲಾಗಿದ್ದರು.

ತಪಾಸಣೆ ವೇಳೆ ವೈದ್ಯೆ ಎಂ.ಕೆ. ಶಿಲ್ಪಶ್ರೀ ಅವರು ರಕ್ತಸ್ರಾವದ ಬಗ್ಗೆ ವಿಚಾರಿಸಿದಾಗ, ‘ಮೇ.16ರಂದು ಹಿರೇಮರಳಿಯ ಗೀತಾ ಹಾಗೂ ಕೆ.ಆರ್. ಪೇಟೆಯ ಶೃತಿ ಎಂಬುವರು ತಮ್ಮನ್ನು ಹೊಸಕೋಟೆಯ ಮನೆಯೊಂದಕ್ಕೆ ಕರೆದೊಯ್ದು ಮಾತ್ರೆ ಕೊಟ್ಟು ನುಂಗಲು ತಿಳಿಸಿದ್ದರು.

ಆ ನಂತರ ಗರ್ಭಪಾತವಾಗಿದ್ದು, ಭ್ರೂಣವನ್ನು ಪಾಂಡವಪುರ ತಾಲ್ಲೂಕಿನ ಮಹದೇಶ್ವರಪುರ ಗ್ರಾಮದಲ್ಲಿ ಹೂಳಲಾಗಿದೆ. ಗರ್ಭಪಾತ ಮಾಡಿದ್ದಕ್ಕಾಗಿ ಚೇತನ್ ಕುಮಾರ್, ಆಶಾ ಶಿವರಾಜ್, ಗೀತಾ ಎಂಬುವರ ಖಾತೆಗಳಿಗೆ ಫೋನ್ ಪೇ ಮೂಲಕ ಹಣ ಹಾಕಲಾಗಿದೆ’ ಎಂದು ಅವರು ತಿಳಿಸಿದ್ದರು.

ವೈದ್ಯೆಯು ಕೂಡಲೇ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಿ.ಎ. ಅರವಿಂದ್ ಅವರಿಗೆ ವಿಷಯ ತಿಳಿಸಿದರು. ಅವರಿಂದ ಮಾಹಿತಿ ಪಡೆದ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಚೆಲ್ವಮ್ಮ ಅವರು ಪೊಲೀಸರಿಗೆ ದೂರು ನೀಡಿದರು.

ಆರೋಪಿಗಳಾದ ಗೀತಾ, ಶ್ರುತಿ, ಚೇತನ್ ಕುಮಾರ್, ಆಶಾ ಶಿವರಾಜ್, ಗರ್ಭಪಾತಕ್ಕೆ ಒಳಗಾಗಿರುವ ಮಾಲಾಶ್ರೀ, ಆಕೆಯ ಪತಿ ರವಿಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಒತ್ತಾಯಿಸಿದ್ದು, ತನಿಖೆ ನಡೆದಿದೆ.

ಶಿವಮೂರ್ತಿ ಶರಣರ ವಿರುದ್ಧದ ಪೋಕ್ಸೊ ಪ್ರಕರಣ

ದೋಷಾರೋಪ ಮರುನಿಗದಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಾದ ಮೊದಲ ಪ್ರಕರಣದಲ್ಲಿ ಪೊಲೀಸರು ಸಲ್ಲಿಸಿದ ದೋಷಾರೋಪ ಪಟ್ಟಿಯ ಮರುನಿಗದಿ ಮಾಡಿದ ಇಲ್ಲಿನ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಶುಕ್ರವಾರ ಪ್ರಕರಣದ ವಿಚಾರಣೆ ಆರಂಭಿಸಿತು.

ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಾಲಯ, ಮೊದಲ ಆರೋಪಿ ಶಿವಮೂರ್ತಿ ಶರಣರು, ಎರಡನೇ ಆರೋಪಿ ಹಾಸ್ಟೆಲ್ ಮಹಿಳಾ ವಾರ್ಡನ್ ಹಾಗೂ ಮೂರನೇ ಆರೋಪಿ ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಯಾಗಿದ್ದ ಪರಮಶಿವಯ್ಯ ವಿರುದ್ಧದ ದೋಷಾರೋಪ ನಿಗದಿಪಡಿಸಿತು. ಈ ದೋಷಾರೋಪವನ್ನು ಆರೋಪಿಗಳು ‘ಶುದ್ಧ ಸುಳ್ಳು’ ಎಂದು ನಿರಾಕರಿಸಿದರು.



ಶಿವಮೂರ್ತಿ ಶರಣರು

ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ಎರಡು ದೋಷಾರೋಪ ಪಟ್ಟಿಗಳನ್ನು ಸಲ್ಲಿಸಿದ್ದರು. ಸೆಷನ್ಸ್ ನ್ಯಾಯಾಲಯ ಈ ಮೊದಲು ನಿಗದಿಪಡಿಸಿದ ದೋಷಾರೋಪವನ್ನು ರದ್ದುಪಡಿಸುವಂತೆ ಕೋರಿ ಶಿವಮೂರ್ತಿ ಮುರುಘಾ ಶರಣರು ಹೈಕೋರ್ಟ್ ಮೊರೆ ಹೋಗಿದ್ದರು.

ಪರಿಶಿಷ್ಟ ಜಾತಿ, ಪಂಗಡದ ಜನರ ಮೇಲಿನ ದೌರ್ಜನ್ಯ ತಡೆ ಕಾಯ್ದೆ, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆಯ ಮೇಲಿನ ಆರೋಪಗಳನ್ನು ನ್ಯಾಯಾಲಯ ಕೈಬಿಟ್ಟಿತ್ತು. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಮತ್ತು ಐಪಿಸಿ ಸೆಕ್ಷನ್ ಅಡಿಯಲ್ಲಿನ ಆರೋಪಗಳ ಮೇಲೆ ನಿಗದಿ ಪ್ರಕ್ರಿಯೆ ನಡೆಯಿತು. ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಗಂಗಾಧರ ಹಡಪದ ಜೂನ್ 3ಕ್ಕೆ ಮುಂದೂಡಿದರು.

ಭ್ರೂಣಹತ್ಯೆ: ಮತ್ತಿಬ್ಬರ ಬಂಧನ

ಸ್ವಯಂ ಪ್ರೇರಿತ ದೂರು ದಾಖಲು: ಶಶಿಧರ ಕೋಸಂಬೆ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ): ಪಟ್ಟಣದಲ್ಲಿ ನಡೆದ ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತರಾದ ಸೋನಾಲಿ ಕದಮ್ ಅವರ ತಂದೆ ಸಂಜಯ ಗೌಳಿ ಹಾಗೂ ತಾಯಿ ಸಂಗೀತಾ ಗೌಳಿ ಅವರನ್ನು ಬಂಧಿಸಲಾಗಿದೆ. ಈವರೆಗೆ ಒಟ್ಟು ಐವರ ಬಂಧನವಾಗಿದೆ.

ಭ್ರೂಣಹತ್ಯೆ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಸುದ್ದಿಗಾರರ ಜೊತೆ ಮಾತನಾಡಿ, ‘ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ಮೂರು ದಿನಗಳಲ್ಲಿ ಅಧಿಕಾರಿಗಳಿಂದ ವರದಿ ತರಿಸಿಕೊಳ್ಳಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗುವುದು’ ಎಂದರು.



ಸಂಜಯ ಗೌಳಿ ಸಂಗೀತಾ ಗೌಳಿ

‘ಭ್ರೂಣ ಹತ್ಯೆಯು ವ್ಯವಸ್ಥಿತ ಯೋಜನಾಬದ್ಧ ಹೇಯ ಕೃತ್ಯ. 2019 ಮತ್ತು 2022ರಲ್ಲಿ ಇಲ್ಲಿ ಭ್ರೂಣಹತ್ಯೆ ನಡೆದಿದ್ದು ಬೆಳಕಿಗೆ ಬಂದಿತ್ತು. ಮತ್ತೆ ನಡೆದಿರುವುದಕ್ಕೆ ಅಧಿಕಾರಿಗಳ ಸಹಕಾರ ಇರುವುದರ ಬಗ್ಗೆ ಅನುಮಾನವಿದೆ. ಇಂತಹ ಪ್ರಕರಣದಲ್ಲಿ ತ್ವರಿತಗತಿಯಲ್ಲಿ ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ಸರ್ಕಾರದ ಮಟ್ಟದಲ್ಲಿ ಪತ್ರ ವ್ಯವಹಾರವನ್ನು ಮಾಡಲು ಆಯೋಗ ಸಿದ್ಧವಿದೆ’ ಎಂದು ಹೇಳಿದರು.

‘ಎಂಟಿಪಿ (ಮೆಡಿಕಲ್ ಟರ್ಮಿನೇಷನ್ ಪ್ರೆಗ್ನೆನ್ಸಿ) ಮತ್ತು ಪಿಸಿಪಿಎನ್‌ಡಿಟಿ (ಗರ್ಭಪೂರ್ವ ಮತ್ತು ಪ್ರಸವಪೂರ್ವ ಲಿಂಗ ಪತ್ತೆ) ನಿಷೇಧ ಕಾಯ್ದೆಯಡಿ ದೂರು ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಿದೆ. ಕವಿತಾ ಅವರ ಮೊಬೈಲ್‌ಫೋನ್ ಪರಿಶೀಲನೆ ಮಾಡಲಾಗುತ್ತಿದೆ. ಇಂಥ ಪ್ರಕರಣಗಳಲ್ಲಿ ಬೇರೆಯವರದ್ದು ಪಾತ್ರವಿದ್ದರೆ, ಅವರ ವಿರುದ್ಧವೂ ಕಠಿಣ ಕ್ರಮ ಜರುಗಿಸಲಾಗುವುದು’ ಎಂದರು.

ನಿಗಮ ಅಕ್ರಮ: ಸಿಬಿಐ ತನಿಖೆ ಖಚಿತ

ಒಂದನೇ ಪುಟದಿಂದ...

₹89.62 ಕೋಟಿ ವರ್ಗಾವಣೆ: ವಾಲ್ಮೀಕಿ ಅಭಿವೃದ್ಧಿ ನಿಗಮವು ಯೂನಿಯನ್ ಬ್ಯಾಂಕ್‌ನ ಎಂ.ಜಿ. ರಸ್ತೆ ಶಾಖೆಯಲ್ಲಿ ಹೊಂದಿದ್ದ ಖಾತೆಯಿಂದ ಆರ್‌ಬಿಎಲ್ ಬ್ಯಾಂಕ್‌ನ (ರತ್ನಾಕರ ಬ್ಯಾಂಕ್ ಲಿಮಿಟೆಡ್) ಹೈದರಾಬಾದ್ ಬಂಜಾರಾ ಹಿಲ್ಸ್ ಶಾಖೆಯಲ್ಲಿನ ಹತ್ತು ಖಾಸಗಿ ಕಂಪನಿಗಳು ಮತ್ತು ಎಂಟು ವ್ಯಕ್ತಿಗಳ ಖಾತೆಗಳಿಗೆ ₹89.62 ಕೋಟಿ ಅಕ್ರಮವಾಗಿ ವರ್ಗಾವಣೆ ಆಗಿದೆ.

ತರಬೇತಿ ಸಂಸ್ಥೆಗಳು, ಮಾನವ ಸಂಪನ್ಮೂಲ ನಿರ್ವಹಣೆ, ಭದ್ರತಾ ಏಜೆನ್ಸಿ, ವಾಣಿಜ್ಯ ವಹಿವಾಟು ಸಂಸ್ಥೆ, ಸಾಫ್ಟ್‌ವೇರ್ ಕಂಪನಿಗಳ ಹೆಸರಿನಲ್ಲಿರುವ ಖಾತೆಗಳಿಗೆ ಮಾರ್ಚ್ 30ರಂದ ಮಾರ್ಚ್ 30ರ ಅವಧಿಯಲ್ಲಿ ₹49.52 ಕೋಟಿ ವರ್ಗಾವಣೆ ಆಗಿದೆ. ವ್ಯಕ್ತಿಗಳ ಹೆಸರಿನಲ್ಲಿರುವ ಎಂಟು ಖಾತೆಗಳಿಗೆ ಮಾರ್ಚ್ 30ರಂದು ಒಂದೇ ಚೆಕ್ ಬಳಸಿ ₹40.10 ಕೋಟಿ ವರ್ಗಾಯಿಸಿರುವುದು ಪತ್ತೆಯಾಗಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆ ಆಗಿರುವ ಖಾತೆಗಳನ್ನು ಹೊಂದಿರುವ ಬಹುತೇಕ ಖಾಸಗಿ ಕಂಪನಿಗಳು ಬೆಂಗಳೂರಿನವು.

ಕೆಲವು ಮಾತ್ರ ಹೊರ ರಾಜ್ಯದಲ್ಲಿವೆ. ಈ ಎಲ್ಲ ಕಂಪನಿಗಳ ಹೆಸರಿನಲ್ಲಿ ಆರ್‌ಬಿಎಲ್ ಬ್ಯಾಂಕ್‌ನ ಬಂಜಾರಾ ಹಿಲ್ಸ್ ಶಾಖೆಯಲ್ಲಿ ಖಾತೆ ತೆರೆದು ಅಕ್ರಮವಾಗಿ ಹಣ ವರ್ಗಾವಣೆ ಮಾಡಿ ಕೊಳ್ಳಲಾಗಿದೆ.

ಈ ಎಲ್ಲ ಮೊತ್ತವನ್ನೂ ಸದರಿ ಬ್ಯಾಂಕ್ ಖಾತೆಗಳಿಂದ ಮುಟ್ಟುಗೋಲು ಹಾಕಿಕೊಳ್ಳುವಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್. ಮಂಜುನಾಥ್ ಪ್ರಸಾದ್ ಅವರು ಆರ್‌ಬಿಎಲ್ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್. ಸುಬ್ರಮಣಿಯಕುಮಾರ್ ಮತ್ತು ಕಾರ್ಪೊರೇಟ್ ಕಚೇರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

ಪತ್ರದ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ತನಿಖೆ ಸಿಬಿಐಗೆ ವರ್ಗಾವಣೆ ಆಗಬಹುದು’

‘₹3 ಕೋಟಿಗಿಂತ ಹೆಚ್ಚಿನ ಮೊತ್ತದ ಬ್ಯಾಂಕ್ ವಂಚನೆ ನಡೆದರೆ ಪ್ರಕರಣದ ತನಿಖೆ ಸಿಬಿಐಗೆ ವರ್ಗಾವಣೆ ಆಗಬೇಕೆಂಬ ಆದೇಶ ಇದೆ. ಆ ಪ್ರಕಾರ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯೂ ಸಿಬಿಐಗೆ ವರ್ಗಾವಣೆ ಆಗಬಹುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಈ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ಈಗ ಸಿಐಡಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಒಂದೇ ಪ್ರಕರಣಕ್ಕೆ ಎರಡು ತನಿಖೆ ನಡೆಯುವುದಿಲ್ಲ. ಸಿಬಿಐ ತನಿಖೆ ಕೈಗೆತ್ತಿಕೊಂಡರೆ ಪ್ರಕರಣವನ್ನು ವರ್ಗಾವಣೆ ಮಾಡಲಾಗುತ್ತದೆ’ ಎಂದರು.

ಇನ್ನೂ ಮರಳಿ ಬಾರದ ಹಣ!

ಅಕ್ರಮವಾಗಿ ವರ್ಗಾವಣೆಯಾಗಿರುವ ಮೊತ್ತದಲ್ಲಿ ₹50 ಕೋಟಿಯನ್ನು ಮಂಗಳವಾರ ಸಂಜೆಯೊಳಗೆ ಮರಳಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಗೆ ವರ್ಗಾಯಿಸುವುದಾಗಿ ಯೂನಿಯನ್ ಬ್ಯಾಂಕ್ ಅಧಿಕಾರಿಗಳು ಭರವಸೆ ನೀಡಿದ್ದರು. ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಕೂಡ ಇದನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ್ದರು.

ಶುಕ್ರವಾರ ಸಂಜೆಯವರೆಗೆ ಯಾವ ಮೊತ್ತವೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಗೆ ಮರಳಿ ಬಂದಿಲ್ಲ ಎಂಬುದನ್ನು ಇಲಾಖೆಯ ಮೂಲಗಳು ಖಚಿತಪಡಿಸಿವೆ.

ಪಿಯು ಕಾಲೇಜು ಇಂದಿನಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ಹಾಗೂ ದ್ವಿತೀಯ ಪಿಯು ತರಗತಿಗಳು ಜೂನ್ 1ರಿಂದ ಪುನರಾರಂಭವಾಗುತ್ತಿವೆ.

ಅಕ್ಟೋಬರ್ 2ರಿಂದ ಅ. 18ರ ವರೆಗೆ ದಸರಾ ರಜೆ ಇದ್ದು, ಅ.19ರಿಂದ ಮಾರ್ಚ್ 31ರವರೆಗೆ (2025) ಎರಡನೇ ಅವಧಿಯ ತರಗತಿಗಳು ನಡೆಯಲಿವೆ. ಏ.1ರಿಂದ ಬೇಸಿಗೆ ರಜೆ ಘೋಷಿಸಲಾಗಿದೆ. ಪ್ರತಿ ದಿನ ಬೆಳಿಗ್ಗೆ 9.30ರಿಂದ 3.30 ರವರೆಗೆ ಅಥವಾ 10.30ರಿಂದ 4.30ರವರೆಗೆ ತರಗತಿಗಳನ್ನು ನಡೆಸಲು ಸ್ಥಳೀಯ ಅನುಕೂಲಕ್ಕೆ ತಕ್ಕಂತೆ ಆಯಾ ಕಾಲೇಜುಗಳ ಪ್ರಾಂಶುಪಾಲರು ನಿರ್ಧಾರ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ.

2024–25ನೇ ಸಾಲಿನ ಪದವಿ ಪೂರ್ವ ಕೋರ್ಸ್‌ಗಳಿಗೆ ಈಗಾಗಲೇ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ವಿದ್ಯಾರ್ಥಿಗಳು ದಂಡ ಶುಲ್ಕವಿಲ್ಲದೇ ಜೂನ್ 14ರ ಒಳಗೆ ಪ್ರವೇಶ ಪಡೆಯಬಹುದು. ದ್ವಿತೀಯ ಪಿಯು ಸೇರಿದಂತೆ ಜೂನ್ 29ರ ಒಳಗೆ ಎಲ್ಲ ಪ್ರವೇಶ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ.

ಪ್ರವೇಶ ಶುಲ್ಕಗಳನ್ನು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಇದ್ದಂತೆ ಮುಂದುವರಿಸಲಾಗಿದ್ದು, ಯಾವುದೇ ಬದಲಾವಣೆ ಮಾಡಿಲ್ಲ. ಮಾರ್ಗಸೂಚಿಯಂತೆ ಎಲ್ಲ ಕಾಲೇಜುಗಳು ಮೀಸಲಾತಿ ಅನ್ವಯ ಮೆರಿಟ್ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು ಎಂದು ಪಿಯು ನಿರ್ದೇಶನಾಲಯ ಸೂಚಿಸಿದೆ.

ಸುಧಾ, ಮಯೂರ ಓದಿ

ಎಸಿಬಿ ತನಿಖೆ ಶುರು

ರಾಜ್‌ಕೋಟ್ (ಪಿಟಿಐ): ಮಕ್ಕಳು ಸೇರಿ 27 ಜನರ ಸಾವಿಗೆ ಕಾರಣವಾದ ಮೇ 25ರಂದು ನಡೆದ ರಾಜ್‌ಕೋಟ್ ಟಿಆರ್‌ಪಿ ಗೇಮ್ ಜೋನ್ ಅಗ್ನಿ ದುರಂತ ಪ್ರಕರಣದ ತನಿಖೆಯನ್ನು ಗುಜರಾತ್ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶುಕ್ರವಾರ ಕೈಗೆತ್ತಿಕೊಂಡಿದೆ. ಬಂಧಿಸಲಾಗಿರುವ ಅಧಿಕಾರಿಗಳ ಕಚೇರಿಗಳು, ಮನೆಗಳು ಮತ್ತು ಅವರಿಗೆ ಸೇರಿದ ಕೆಲವು ಸ್ಥಳಗಳ ಮೇಲೆ ಎಸಿಬಿ ಅಧಿಕಾರಿಗಳು ದಾಳಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆರೋಪಿ ಗಿರೀಶ ನ್ಯಾಯಾಂಗ ವಶಕ್ಕೆ

ಹುಬ್ಬಳ್ಳಿ: ಇಲ್ಲಿನ ವೀರಾಪುರ ಓಣಿ ನಿವಾಸಿ ಅಂಜಲಿ ಅಂಬಿಗೇರ ಕೊಲೆ ಪ್ರಕರಣದ ಆರೋಪಿ ಗಿರೀಶ ಸಾವಂತನನ್ನು ಸಿಐಡಿ ಪೊಲೀಸರು ಶುಕ್ರವಾರ ನ್ಯಾಯಾಂಗ ವಶಕ್ಕೆ ಒಪ್ಪಿಸಿದರು.

‘ಕೊಲೆ ಪ್ರಕರಣ ಕುರಿತು ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಮೇ 23ರಂದು ಸಿಐಡಿ ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದಿದ್ದರು. 8 ದಿನ ವಿಚಾರಣೆ ನಡೆಸಿದ ಬಳಿಕ, 3ನೇ ಹೆಚ್ಚುವರಿ ದಿವಾಣಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಫಯಾಜ್ ಖಾನ್‌ರಿಗೆ ಕೃಷ್ಣಾ ಹಾನಗಲ್ ಪ್ರಶಸ್ತಿ



ಫಯಾಜ್ ಖಾನ್

ಧಾರವಾಡ: ಗಂಗೂಬಾಯಿ ಹಾನಗಲ್ ಸಂಗೀತ ವಿದ್ಯಾಲಯ ನೀಡುವ ಕೃಷ್ಣಾ ಹಾನಗಲ್ ರಾಷ್ಟ್ರೀಯ ಪ್ರಶಸ್ತಿಗೆ ಸಾರಂಗಿ ವಾದಕ ಕಿರಾಣಾ ಘರಾಣೆಯ ಫಯಾಜ್ ಖಾನ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಭಾನುವಾರ (ಜೂನ್ 2) ಸೃಜನಾ ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕನ್ನಡದಲ್ಲಿ ಪಿಯು ವಿಜ್ಞಾನ; ಶುಲ್ಕ ವಿನಾಯಿತಿ

ಮೈಸೂರು: ಇಲ್ಲಿನ ರಾಮಕೃಷ್ಣನಗರದ ‘ನೃಪತುಂಗ ಕನ್ನಡ ವಿಜ್ಞಾನ ಮತ್ತು ವಾಣಿಜ್ಯ ಪಿಯು ಕಾಲೇಜಿ’ನ ಪ್ರವೇಶಾತಿ ಆರಂಭವಾಗಿದ್ದು, ಕನ್ನಡ ಮಾಧ್ಯಮದಲ್ಲಿ ಪಿಯು ವಿಜ್ಞಾನ ಕಲಿಯುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.

‘ಪಿಯು ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಕಲಿಸುವ ಏಕೈಕ ಕಾಲೇಜು ಇದು. ವಿಜ್ಞಾನ ವಿಭಾಗದ ಪಿಸಿಎಂಬಿ, ಪಿಸಿಎಂಸಿಎಸ್ ಪ್ರವೇಶಾತಿ ನಡೆಯುತ್ತಿದೆ’ ಎಂದು ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿ ಸವಿತಾ ಪ.ಮಲ್ಲೇಶ್ ತಿಳಿಸಿದ್ದಾರೆ.

‘ಕುದೇರು ಮಠದಲ್ಲಿ ವಸತಿ ಉಚಿತವಾಗಿ ಸಿಗಲಿದ್ದು, ಊಟದ ಖರ್ಚು ಮಾತ್ರ ಇರಲಿದೆ. ಇದಲ್ಲದೇ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲೂ ವಸತಿ ಸೌಲಭ್ಯವಿದೆ. ನೀಟ್ ಹಾಗೂ ಸಿಇಟಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರಿಸುವ ಅವಕಾಶ ಇರುವುದರಿಂದ ರಾಜ್ಯದ ಅನಕ್ಷರ ವಿಜ್ಞಾನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದು’ ಎಂದಿದ್ದಾರೆ.

‘ಆಸಕ್ತರು ಜೂನ್ 10ರೊಳಗೆ ಮೊಬೈಲ್ ಸಂಖ್ಯೆ 99860 47382 ಕ್ಕೆ ಸಂಪರ್ಕಿಸಬೇಕು’ ಎಂದು ಕೋರಿದ್ದಾರೆ.

ಚಾವಣಿ ಕುಸಿದು ಇಬ್ಬರು ಮಕ್ಕಳು ಸಾವು

ಇಳಕಲ್ (ಬಾಗಲಕೋಟೆ ಜಿಲ್ಲೆ): ಕಂದಗಲ್ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ಮನೆಯ ಚಾವಣಿ ಕುಸಿದು ಗೀತಾ ಈಶ್ವರಯ್ಯ ಆದಾಪೂರಮಠ (14) ಮತ್ತು ರುದ್ರಯ್ಯ ಈಶ್ವರಯ್ಯ ಆದಾಪೂರಮಠ (10) ಎಂಬ ಮಕ್ಕಳು ಮೃತಪಟ್ಟಿದ್ದಾರೆ. ಇಬ್ಬರೂ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾಗಿದ್ದರು.

‘ಮಕ್ಕಳ ಪೋಷಕರು ಕೂಲಿಗೆಲಸಕ್ಕೆ ಹೋಗಿದ್ದರು. ಅಜ್ಜ ಮತ್ತು ಅಜ್ಜಿ ಅನ್ಯ ಕೆಲಸಕ್ಕೆ ಹೊರಗೆ ಹೋಗಿದ್ದರು. ಚಾವಣಿ ಏಕಾಏಕಿ ಬಿದ್ದ ಕಾರಣ ಮಕ್ಕಳಿಗೆ ಮನೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಮಣ್ಣಿನ ರಾಶಿ, ಕಟ್ಟಿಗೆಯ ಜಂತಿ, ತೊಲೆಯ ನಡುವೆ ಸಿಲುಕಿ, ಉಸಿರುಗಟ್ಟಿ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಶಾಲೆಗೆ ಹೋಗುವಂತೆ ತಿಳಿಸಿದರೂ ಇಬ್ಬರೂ ಮನೆಯಲ್ಲೇ ಉಳಿದಿದ್ದರು. ಶಾಲೆಗೆ ಹೋಗಿದ್ದರೆ, ಇಬ್ಬರೂ ಬದುಕುಳಿಯುತ್ತಿದ್ದರು’ ಎಂದು ಪೋಷಕರು ತಿಳಿಸಿದರು.

ಹಿಗ್ಗಾಮುಗ್ಗಾ ಥಳಿತ: ಯುವಕ ಸಾವು

ಬೀದರ್: ಇಲ್ಲಿನ ಪ್ರತಾಪ್ ನಗರದಲ್ಲಿ ಗುರುವಾರ ತಡರಾತ್ರಿ ಮನೆ ಕಳ್ಳತನಕ್ಕೆ ಯತ್ನಿಸಿ ಸಿಕ್ಕಿಬಿದ್ದ ಯುವಕನಿಗೆ ಸ್ಥಳೀಯರು ದೊಣ್ಣೆಗಳಿಂದ ಮನಬಂದಂತೆ ಥಳಿಸಿದ್ದರಿಂದ ಆತ ಮೃತಪಟ್ಟಿದ್ದಾನೆ. ಘಟನೆ ಸಂಬಂಧ ನಾಲ್ವರನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ.

ನೌಬಾದ್ ನಿವಾಸಿ ಸಂತೋಷ ನಾಗೂರ (30) ಮೃತ ಯುವಕ. ಆತನಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ.

ಎಂಜಿನಿಯರ್, ಮೆಕ್ಯಾನಿಕ್ ಅಮಾನತು

ಪ್ರಜಾವಾಣಿ ವಾರ್ತೆ

ಪಾವಗಡ: ಕಚೇರಿ ಸಮಯದಲ್ಲೇ ಮದ್ಯ ಕುಡಿದು, ಬಿಯರ್ ಬಾಟಲಿಯಿಂದ ಹೊಡೆದಾಡಿ ಕೊಂಡಿದ್ದ ಪ್ರಕರಣದಲ್ಲಿ ಪಟ್ಟಣದ ಕೆಎಸ್‌ಆರ್‌ಟಿಸಿ ಕಚೇರಿ ಕಿರಿಯ ಎಂಜಿನಿಯರ್ ವರದರಾಜು ಹಾಗೂ ಮೆಕ್ಯಾನಿಕ್ (ಗ್ರೇಡ್–1) ನರಸಿಂಹಮೂರ್ತಿ ಅವರನ್ನು ಅಮಾನತು ಮಾಡಲಾಗಿದೆ.

ಗಲಾಟೆಯಲ್ಲಿ ಭಾಗಿಯಾಗಿದ್ದ ಮತ್ತೊಬ್ಬ ಕಿರಿಯ ಎಂಜಿನಿಯರ್ ಶ್ರೀನಿವಾಸ್ ಹಾಗೂ ಮೆಕ್ಯಾನಿಕ್ (ಗ್ರೇಡ್–2) ಎಂ.ಆರ್.ಸಂತೋಷ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಕೆಎಸ್‌ಆರ್‌ಟಿಸಿ ತುಮಕೂರು ವಿಭಾಗದ ಸೂಪರಿಂಟೆಂಡಿಂಗ್ ಎಂಜಿನಿಯರ್ ಶುಕ್ರವಾರ ಅಮಾನತು ಆದೇಶ ಹೊರಡಿಸಿದ್ದಾರೆ. ಕಚೇರಿ ಸಮಯದಲ್ಲೇ ಮದ್ಯ ಸೇವಿಸಿ, ಬಿಯರ್ ಬಾಟಲಿಯಿಂದ ಹೊಡೆದಾಡಿ ಕೊಂಡಿದ್ದ ಕುರಿತು ‘ಪ್ರಜಾವಾಣಿ’ಯಲ್ಲಿ ಮೇ 30ರಂದು ವರದಿ ಪ್ರಕಟವಾಗಿತ್ತು.



❦ ಸುಭಾಷಿತ ❦

ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ನಂಬಿಕೆಯೇ ಅತ್ಯಂತ ಶಕ್ತಿಶಾಲಿಯಾದ ಮದ್ದು. ಸಂಕಷ್ಟದಿಂದ ಪಾರಾಗುತ್ತೇನೆ ಎಂದು ನಂಬಿದ್ದೇ ಆದರೆ, ಆ ಮಾರ್ಗದಲ್ಲಿ ನೀವು ಅರ್ಧ ಜಯವನ್ನು ಸಾಧಿಸಿದಂತೆಯೇ ಸರಿ.

–ನಾರ್ಮನ್ ವಿನ್ಸೆಂಟ್ ಪೀಲೆ

ಶಕ್ತಿ ಯೋಜನೆ: ಮಹಿಳೆಯರ ಸಬಲೀಕರಣಕ್ಕೆ ತುಂಬಿದೆ ಬಲ

ಕರ್ನಾಟಕ ಸರ್ಕಾರವು ಜಾರಿಗೆ ತಂದಿರುವ, ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸುವ ಶಕ್ತಿ ಯೋಜನೆಯು ಒಂದು ವರ್ಷ ಪೂರ್ಣಗೊಳಿಸಿದೆ. ಯೋಜನೆಯ ಕುರಿತು ಇದ್ದ ಕಟು ಟೀಕೆಗಳು ಮತ್ತು ಸಿನಿಕತನದ ಮನೋಭಾವಗಳೆಲ್ಲವೂ ತಪ್ಪು ಎಂಬುದನ್ನು ಯೋಜನೆಯು ಸಾಬೀತುಗೊಳಿಸಿದೆ. ನಮ್ಮಂತಹ ಬಹುಸ್ತರದ ಸಮಾಜದಲ್ಲಿ ಸಮರ್ಪಕವಾದ ಕಲ್ಯಾಣ ಯೋಜನೆಯು ಹಲವು ರೀತಿಯಲ್ಲಿ ಪ್ರಯೋಜನಕಾರಿಯಾಗಬಹುದು ಎಂಬುದಕ್ಕೆ ಈ ಯೋಜನೆಯು ನಿದರ್ಶನವಾಗಿದೆ. ಕಳೆದ ವರ್ಷ ಅಧಿಕಾರಕ್ಕೆ ಬಂದ ತಕ್ಷಣವೇ ಕಾಂಗ್ರೆಸ್ ನೇತೃತ್ವದ ಸರ್ಕಾರವು ಈ ಯೋಜನೆಯನ್ನು ಜಾರಿ ಮಾಡಿತು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಯೋಜನೆ ಜಾರಿಗೊಳಿಸುವುದಾಗಿ ಕಾಂಗ್ರೆಸ್ ಪಕ್ಷವು ಚುನಾವಣೆಗೆ ಮುನ್ನ ಭರವಸೆ ಕೊಟ್ಟಿತ್ತು. ಆಗ ಇದನ್ನು ಒಂದು ರಾಜಕೀಯ ಕಾರ್ಯತಂತ್ರ ಮತ್ತು ಚುನಾವಣಾ ಭರವಸೆ ಎಂದಷ್ಟೇ ಎಲ್ಲರೂ ಪರಿಗಣಿಸಿದ್ದರು. ಆದರೆ, ಜಾರಿಗೆ ಬಂದ ಬಳಿಕ ಈ ಯೋಜನೆಯು ಸಾಮಾಜಿಕ ಪ್ರಯೋಜನದ ಆರ್ಥಿಕ ಯೋಜನೆಯಾಗಿ ಪರಿವರ್ತನೆ ಆಗಿದೆ. ರಾಜ್ಯದ ಆರ್ಥಿಕ ನೀತಿ ಸಂಸ್ಥೆಯು (ಎಫ್‌ಪಿಐ) ಈ ಯೋಜನೆಯ ಕುರಿತು ಅಧ್ಯಯನ ನಡೆಸಿದೆ. ಈ ಯೋಜನೆಯಿಂದಾಗಿ ಮಹಿಳೆಯರ ಆದಾಯ ಮತ್ತು ಉಳಿತಾಯದಲ್ಲಿ ಹೆಚ್ಚಳವಾಗಿದೆ, ಕಾರ್ಮಿಕ ಬಲದಲ್ಲಿ ಅವರ ಭಾಗೀದಾರಿಕೆ ಹೆಚ್ಚಿದೆ ಮತ್ತು ರಾಜ್ಯದ ತೆರಿಗೆ ವರಮಾನ ಏರಿಕೆಯಾಗಿದೆ ಎಂದು ಅಧ್ಯಯನದಲ್ಲಿ ತಿಳಿದುಬಂದಿದೆ. ಕಾರ್ಮಿಕ ಬಲದಲ್ಲಿ ಮಹಿಳೆಯರ ಭಾಗೀದಾರಿಕೆಯು 2022ರ ಅಕ್ಟೋಬರ್-ಡಿಸೆಂಬರ್‌ನಲ್ಲಿ ಶೇ 25.2ರಷ್ಟಿದ್ದರೆ, 2023ರ ಇದೇ ಅವಧಿಯಲ್ಲಿ ಅದು ಶೇ 30.2ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹವು ₹ 309 ಕೋಟಿಗಳಷ್ಟು ಹೆಚ್ಚಾಗಿದೆ.



ಸಾವಿರಾರು ಮಹಿಳೆಯರು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಹರಿಕಾರರಾಗಲು ಈ ಯೋಜನೆಯು ನೆರವಾಗಿದೆ

ಸಾವಿರಾರು ಮಹಿಳೆಯರು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಹರಿಕಾರರಾಗಲು ಯೋಜನೆಯು ನೆರವಾಗಿದೆ. ಮಹಿಳೆಯರು ಮಾರ್ಚ್‌ವರೆಗೆ ಬಸ್‌ಗಳಲ್ಲಿ ಪ್ರಯಾಣಿಸಿದ್ದಕ್ಕಾಗಿ ಸರ್ಕಾರ ಭರಿಸಿದ ಟಿಕೆಟ್ ಮೊತ್ತ ₹ 4,380 ಕೋಟಿ. ಇದರಿಂದಾಗಿ ದೊಡ್ಡ ಮಟ್ಟದಲ್ಲಿಯೇ ಲಾಭ ಆಗಿದೆ. ಕೆಲವು ಲಾಭಗಳು ನೇರವಾಗಿಯೇ ಆಗಿದ್ದರೆ, ಹಲವು ಪರೋಕ್ಷ ಪ್ರಯೋಜನಗಳು ಆಗಿವೆ. ಯೋಜನೆಯಿಂದ ಆಗಿರುವ ಸಕಾರಾತ್ಮಕ ಪರಿಣಾಮವನ್ನು ಹಲವು ಪ್ರದೇಶಗಳಲ್ಲಿ ಕಾಣಬಹುದಾಗಿದೆ. ಮಹಿಳೆಯರು ಉಳಿತಾಯ ಮಾಡಿದ ಹಣವನ್ನು ಆರೋಗ್ಯ, ಶಿಕ್ಷಣ ಮತ್ತು ಕುಟುಂಬದ ಇತರ ಅಗತ್ಯಗಳಿಗಾಗಿ ವ್ಯಯ ಮಾಡಿದ್ದಾರೆ. ಅಗತ್ಯ ವಸ್ತುಗಳು, ಗ್ರಾಹಕ ವಸ್ತುಗಳು ಮತ್ತು ಸೇವೆಗಳ ಮೇಲೆ ಮಾಡಿದ ವೆಚ್ಚವು ಸಂಬಂಧಪಟ್ಟ ಇತರ ವ್ಯಾಪಾರಗಳಿಗೂ ಉತ್ತೇಜನ ನೀಡಿದೆ. ವ್ಯಾಪಾರ ಮಾಡುವವರು ಮತ್ತು ಸರ್ಕಾರಕ್ಕೆ ಇದರಿಂದ ಲಾಭವಾಗಿದೆ. ವ್ಯಾಪಕವಾದ ಖರೀದಿ ಮತ್ತು ಮಾರಾಟವು ರಾಜ್ಯದಾದ್ಯಂತ ನಡೆದಿದೆ. ಪರಿಣಾಮವಾಗಿ, ಈ ವರ್ಷದ ಜಿಎಸ್‌ಟಿ ಸಂಗ್ರಹದಲ್ಲಿ ₹ 371 ಕೋಟಿ ಹೆಚ್ಚಳವಾಗಬಹುದು ಎಂದು ಅಂದಾಜಿಸಲಾಗಿದೆ.

ಕಾರ್ಮಿಕ ಬಲದಲ್ಲಿ ಮಹಿಳೆಯರ ಭಾಗೀದಾರಿಕೆಯ ಹೆಚ್ಚಳವು ಯೋಜನೆಯಿಂದ ಆಗಿರುವ ಗಮನಾರ್ಹವಾದ ಇನ್ನೊಂದು ಪ್ರಯೋಜನ. ತಮ್ಮ ಸುತ್ತಲಿನ ಗಡಿರೇಖೆಗಳನ್ನು ಮಹಿಳೆಯರು ದಾಟಿದ್ದಾರೆ. ಕಾಲ್ನಡಿಗೆಯ ದೂರದಲ್ಲಿ ಇರುವ ಸ್ಥಳದಲ್ಲಿ ಮಾತ್ರ ಕೆಲಸ ಎಂಬುದನ್ನು ಮೀರಿ ಬಸ್‌ಗಳಲ್ಲಿ ಪ್ರಯಾಣಿಸಿ ಕೆಲಸ ಮಾಡಲು ಆರಂಭಿಸಿದ್ದಾರೆ. ಮಹಿಳೆಯರ ಭಾಗೀದಾರಿಕೆಯಲ್ಲಿ ಆಗಿರುವ ಶೇ 5ರಷ್ಟರ ಏರಿಕೆಯು ಗಣನೀಯವೇ ಆಗಿದೆ. ಕಾರ್ಮಿಕ ಬಲದಲ್ಲಿ ಮಹಿಳೆಯರ ಭಾಗೀದಾರಿಕೆ ಕಡಿಮೆಯಾಗಿಯೇ ಇರುವುದು ರಾಜ್ಯದ ಸಮಸ್ಯೆ ಮಾತ್ರವಲ್ಲ ದೇಶದ ಅರ್ಥವ್ಯವಸ್ಥೆಯ ಸಮಸ್ಯೆಯೂ ಆಗಿದೆ. ಪ್ರಯಾಣವು ಮಹಿಳೆಯರ ಮುಂದೆ ಹೊಸ ಜಗತ್ತುಗಳನ್ನು, ಹೊಸ ಅನುಭವಗಳನ್ನು ತೆರೆದಿಟ್ಟಿದೆ. ಈ ಯೋಜನೆಯು ಮಹಿಳೆಯರಲ್ಲಿ ಸ್ವಾತಂತ್ರ್ಯದ ಭಾವವನ್ನು ಮೂಡಿಸಿದೆ. ಆರ್ಥಿಕವಾಗಿ ಮಾತ್ರವಲ್ಲ, ಸಾಮಾಜಿಕವಾಗಿ ಕೂಡ ಸಶಕ್ತಗೊಳಿಸಿದೆ. ಈ ಯೋಜನೆಯನ್ನು ‘ಉಚಿತ ಕೊಡುಗೆಗಳು’ ಎಂದು ಆರಂಭದಲ್ಲಿ ಹೀಗಳೆಯಲಾಗಿತ್ತು. ಆದರೆ, ಅದರಿಂದ ಆಗಿರುವ ಪ್ರಯೋಜನಗಳು ಅದಕ್ಕೆ ಮಾಡಿದ ವೆಚ್ಚಕ್ಕಿಂತ ಎಷ್ಟೋ ಪಾಲು ಹೆಚ್ಚು ಎಂಬುದು ಈಗ ಅರಿವಿಗೆ ಬಂದಿದೆ. ಇದು ಕೇವಲ ಉಚಿತ ಬಸ್ ಪ್ರಯಾಣವಷ್ಟೇ ಅಲ್ಲ, ಬಹಳಷ್ಟು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ದಕ್ಕಿಸಿಕೊಟ್ಟ ಪ್ರಯಾಣವಾಗಿದೆ.

ದಿನದ ಟ್ವೀಟ್

ಸಕಾರಾತ್ಮಕ ಸಂದೇಶ



ಪಲಾಯನ ಮಾಡಿದ್ದ ಸಂಸದನನ್ನು ಬೆಂಗಳೂರು ವಿಮಾನ ನಿಲ್ದಾಣದಿಂದ ಮಹಿಳಾ ಪೊಲೀಸರ ತಂಡದ ಬೆಂಗಾವಲಿನಲ್ಲಿ ಕರೆತರಲಾಗಿದೆ. ಈ ಮೂಲಕ ಎಸ್‌ಐಟಿ ಪ್ರಬಲವಾದ ಸಕಾರಾತ್ಮಕ ಸಂದೇಶವೊಂದನ್ನು ನೀಡಿದೆ. ಕರ್ನಾಟಕದ ಸಬಲ ಮಹಿಳಾ ಪೊಲೀಸ್ ಪಡೆಯು ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳುವುದಷ್ಟೇ ಅಲ್ಲ ಘನತೆಗೆ ಕುಂದುಂಟಾಗಿದ್ದ ನೂರಾರು ಮಹಿಳೆಯರಿಗೂ ಮಹತ್ವದ ಸಂದೇಶವೊಂದನ್ನು ನೀಡಿದೆ ಮತ್ತು ಅವರಲ್ಲಿ ಆತ್ಮವಿಶ್ವಾಸ ಮೂಡಿಸಿದೆ. ಎಸ್‌ಐಟಿ ಮುಖ್ಯಸ್ಥರದು ಉತ್ತಮ ನಡೆ.

ಭಾಸ್ಕರ್ ರಾವ್, ಬಿಜೆಪಿ ಮುಖಂಡ

ಕಿಡಿನುಡಿ



ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಆಘಾತಕಾರಿ ಆದೇಶವನ್ನು ಗಮನಿಸಿದಾಗ, ಅಂತರಧರ್ಮೀಯ ವಿವಾಹಗಳಿಗೆ ಸಂಬಂಧಿಸಿದಂತೆ 1945ರಲ್ಲಿ ಗಾಂಧಿ ಬರೆದಿದ್ದುದು ನೆನಪಾಗುತ್ತಿದೆ: ‘ಪೋಷಕರು ವಿವೇಕಿಗಳಾಗಿದ್ದರೆ, ಭಿನ್ನ ಧರ್ಮದವರ ನಡುವೆ ವಿವಾಹಗಳು ನಡೆಯುವುದೂ ಕಷ್ಟವೇನಲ್ಲ. ಮುಂದಿನ ಪೀಳಿಗೆಯು ಯಾವ ಧರ್ಮವನ್ನು ಬೇಕಾದರೂ ಆಯ್ದುಕೊಳ್ಳಬಹುದು’.

(ಮುಸ್ಲಿಂ ಪುರುಷ ಮತ್ತು ಹಿಂದೂ ಮಹಿಳೆ ಈ ಇಬ್ಬರಲ್ಲಿ ಒಬ್ಬರು ಯಾವುದೇ ಧರ್ಮಕ್ಕೆ ಮತಾಂತರವಾಗದೆ ವಿವಾಹವಾದರೆ ಅದು ಮುಸ್ಲಿಂ ವೈಯಕ್ತಿಕ ಕಾನೂನಿನ ಅನ್ವಯ ಮಾನ್ಯವಾಗದು ಎಂದಿರುವ ಮಧ್ಯಪ್ರದೇಶ ಹೈಕೋರ್ಟ್, ತಮ್ಮ ಅಂತರಧರ್ಮೀಯ ವಿವಾಹ ನೋಂದಣಿಗೆ ಪೊಲೀಸ್ ರಕ್ಷಣೆ ಕೋರಿದ್ದ ಜೋಡಿಯ ಮನವಿಯನ್ನು ತಳ್ಳಿಹಾಕಿರುವುದಕ್ಕೆ ಪ್ರತಿಕ್ರಿಯೆ)

ರಾಮಚಂದ್ರ ಗುಹಾ, ಇತಿಹಾಸಕಾರ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 1-6-1999

• ಉಗ್ರರ ನೆಲೆಯತ್ತ ಮಿರೇಜ್-2000 ದಾಳಿ; ಅಪಾರ ಸಾವು- ನೋವು

ನವದೆಹಲಿ, ಮೇ 31 (ಪಿಟಿಐ)– ಕಾಶ್ಮೀರದ ಕಾರ್ಗಿಲ್ ವಲಯದಲ್ಲಿ ಪಾಕಿಸ್ತಾನ ಬೆಂಬಲಿತ ಅತಿಕ್ರಮಣಕಾರರು ವಶಪಡಿಸಿಕೊಂಡಿರುವ ಪ್ರದೇಶಗಳ ಮೇಲೆ ಅತ್ಯಂತ ಹೆಚ್ಚಿನ ಸಾಮರ್ಥ್ಯದ ಮಿರೇಜ್-2000 ಸೇರಿದಂತೆ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳು ಆರನೇ ದಿನವಾದ ಇಂದು ದಾಳಿ ನಡೆಸಿ ಅಪಾರ ಸಾವು-ನೋವು ಉಂಟು ಮಾಡಿದವು.

ಅತಿಕ್ರಮಣಕಾರರು ಎಲೆಕ್ಟ್ರಾನಿಕ್ ಸಮರಾಸ್ತ್ರ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವುದರಿಂದ ಮಿಗ್ ವಿಮಾನಗಳಿಗಿಂತ ರಾತ್ರಿ ಕಾರ್ಯಾಚರಣೆಯಲ್ಲಿ ಅನುಕೂಲವಾಗುವ ಫ್ರೆಂಚ್ ನಿರ್ಮಿತ ಮಿರೇಜ್-2000 ವಿಮಾನ ಬಳಸಲು ನಿರ್ಧರಿಸಲಾಯಿತು. ವಿಮಾನ ದಾಳಿ ರಾತ್ರಿಯಿಡೀ ಮುಂದುವರಿಯುತ್ತದೆ.

ಭಾರತೀಯ ಸೇನೆ ನಡೆಸಿದ ದಾಳಿಗೆ ಸತ್ತ ಉಗ್ರಗಾಮಿಗಳ ಸಂಖ್ಯೆ 400 ಆಗಿದೆ. ಭಾರತದ ಕಡೆಯಿಂದ ಸತ್ತವರ ಸಂಖ್ಯೆ ನಿನ್ನೆವರೆಗೆ 33 ಆಗಿದ್ದು, 130 ಮಂದಿ ಗಾಯಗೊಂಡಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 1-6-1974

• ಆಡಳಿತ ಭಾಷೆ, ಶಿಕ್ಷಣ ಮಾಧ್ಯಮ ಆಗಲಿ ಕನ್ನಡ: ಆಗ್ರಹ

ಚಿಕ್ಕದೇವರಾಜ ಮಂಟಪ (ಮಂಡ್ಯ), ಮೇ 31– ‘ಆದಷ್ಟು ಬೇಗ ಕನ್ನಡ ಆಡಳಿತ ಭಾಷೆಯಾಗಬೇಕು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು’

ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಅವರು ಇಂದು ಇಲ್ಲಿ ಆರಂಭವಾದ 48ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ ಈ ಅಂಶವನ್ನು ಆಗ್ರಹಪೂರ್ವಕವಾಗಿ ಒತ್ತಾಯಪಡಿಸಿದರು.

ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಲು 17 ವರ್ಷಗಳ ಕಾಲ ಕಾಯಬೇಕಾಯಿತೆಂದು ಹೇಳಿದ ಅವರು, ಈಗ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಲು ಇನ್ನೂ ಹೆಚ್ಚು ಕಾಲ ಕಾಯಬೇಕೆಂದರೆ ಅದು ನಮ್ಮ ಸಹನೆಯನ್ನು ಒರೆಗೆ ಹಚ್ಚಿದಂತೆ ಆಗುವುದು ಎಂದು ಎಚ್ಚರಿಸಿದರು.

• ಪ್ರಚೋದಕ ಶಕ್ತಿಯ ವಿಚಾರಸಾಹಿತ್ಯ ರಚನೆಗೆ ಅರಸು ಕರೆ

ಚಿಕ್ಕದೇವರಾಜ ಮಂಟಪ (ಮಂಡ್ಯ), ಮೇ 31– ‘ಜನರ ಬದುಕಿಗೆ ನೆರವಾಗುವಂತಹ, ಅವರ ಮಾನಸಿಕ ದಾಸ್ಯವನ್ನು ಹೋಗಲಾಡಿಸಿ, ಅವರಲ್ಲಿ ಆತ್ಮಗೌರವ ಮೂಡಿಸುವಂತಹ ಚೇತನಪೂರ್ಣ ಸಾಹಿತ್ಯವನ್ನು ಹೆಚ್ಚು ಹೆಚ್ಚಾಗಿ ಸೃಷ್ಟಿಸಬೇಕು’ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಸಾಹಿತಿಗಳಿಗೆ ಕರೆ ನೀಡಿದರು.

ಇಲ್ಲಿ ಬೆಳಿಗ್ಗೆ 48ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಅವರು ‘ನಮಗೆ ಬೇಕಾಗಿರುವುದು ಪ್ರಚಾರ ಸಾಹಿತ್ಯವಲ್ಲ, ವಿಚಾರಸಾಹಿತ್ಯ. ರಾಷ್ಟ್ರದ ಪುನರ್ ನಿರ್ಮಾಣಕ್ಕೆ ಜನತೆಯನ್ನು ಸನ್ನದ್ಧಗೊಳಿಸುವ ಪ್ರಚೋದಕ ಸಾಹಿತ್ಯ’ ಎಂದರು.

ಯಾವುದೇ ಅಲೆ ಇಲ್ಲದ ಚುನಾವಣೆಯಲ್ಲಿ ಗೆಲುವಿನ ತಕ್ಕಡಿ ಯಾರ ಪರ ತೂಗಲಿದೆ?

ಕೊನೆಯ ಹಂತ: ಕಾಣುವುದೇನು?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ಇಂದು (ಜೂನ್ 1). ಏಳು ಹಂತಗಳ ಚುನಾವಣೆ ಹೊಸದೇನಲ್ಲ. 2019ರಲ್ಲೂ ಇದೇ ರೀತಿಯಲ್ಲಿ ಚುನಾವಣೆ ನಡೆದಿತ್ತು. ಹೊಸದೇನೆಂದರೆ, ಮೊದಲ ಹಂತ ಹಾಗೂ ಕೊನೆಯ ಹಂತದ ಮತದಾನದ ನಡುವೆ ಇದ್ದ ಆರು ವಾರಗಳ ಸುದೀರ್ಘ ಅಂತರ. ಹಿಂದಿನ ಬಾರಿ ಐದು ವಾರಗಳಷ್ಟು ಅಂತರವಿತ್ತು. ರಾಜಕೀಯ ಪಕ್ಷಗಳು, ನಾಯಕರು, ಅಭ್ಯರ್ಥಿಗಳು ಹಾಗೂ ಮತದಾರರಲ್ಲಿ ಒಂದು ಬಗೆಯ ಬಳಲಿಕೆ ಉಂಟಾಗಿರುವುದನ್ನು ಕಾಣಬಹುದು. ಚುನಾವಣಾ ಪ್ರಚಾರ ಪ್ರಕ್ರಿಯೆ ಏಪ್ರಿಲ್ ಆರಂಭದಲ್ಲಿ ಶುರುವಾಗಿ ಮೇ ಅಂತ್ಯಕ್ಕೆ ಸಮಾಪ್ತಿಯಾಗಿದೆ. ಹೀಗಾಗಿ, ಇಡೀ ಎರಡು ತಿಂಗಳು ಚುನಾವಣಾ ಪ್ರಚಾರದ ಅಬ್ಬರ.

ಚುನಾವಣಾ ಪ್ರಚಾರ ಆರಂಭವಾಗಿ ಮತದಾನದ ಕಡೆಯ ಹಂತಕ್ಕೆ ಬರುವುದರೊಳಗೆ ಎದ್ದುಕಾಣುವಂತಹ ಬದಲಾವಣೆಯೊಂದು ಸ್ಪಷ್ಟವಾಗಿ ಗೋಚರವಾಗಿದೆ. ಯಾರು ಜಯಶಾಲಿಗಳಾಗುತ್ತಾರೆ ಎಂಬ ಬಗ್ಗೆ ಅಷ್ಟೇನೂ ಚರ್ಚೆಯೇ ಇಲ್ಲದ್ದರಿಂದ ಈ ಚುನಾವಣೆಯಲ್ಲಿ ಹೆಚ್ಚಿನ ಉತ್ಸಾಹವೇನೂ ಇರದು ಎಂಬುದು ಚುನಾವಣಾ ಪ್ರಚಾರ ಆರಂಭವಾಗುವ ಮೊದಲು ಇದ್ದಂತಹ ಮಾತಾಗಿತ್ತು. ಎಷ್ಟು ಸ್ಥಾನಗಳನ್ನು ಗೆಲ್ಲಬಹುದು ಎಂಬುದರ ಸುತ್ತಲೇ ಹೆಚ್ಚಿನ ಚರ್ಚೆ ಇತ್ತು. ಆದರೆ ಪ್ರಚಾರ ಆರಂಭವಾಗುತ್ತಿದ್ದಂತೆಯೇ ಸ್ಪರ್ಧೆ ಹೆಚ್ಚು ಬಿರುಸಾಗಿಯೇ ಇದೆ ಎಂಬುದು ಗಮನಕ್ಕೆ ಬಂತು. ಎರಡು ಪ್ರಧಾನ ಪಕ್ಷಗಳ ನಡುವೆ ನೇರ ಸ್ಪರ್ಧೆ ಇರುವ ರಾಜ್ಯಗಳಲ್ಲಷ್ಟೇ ಅಂತಹ ಬಿರುಸಿನ ಸ್ಪರ್ಧೆ ಕಂಡುಬಂದಿಲ್ಲ; ಬಹುಕೋನದ ಸ್ಪರ್ಧೆ ಇರುವ ರಾಜ್ಯಗಳಲ್ಲಿಯೂ ಸ್ಪರ್ಧೆ ತೀವ್ರವಾಗಿದೆ. ಸ್ಪರ್ಧೆಯ ಸ್ವರೂಪ, ರೂಪುರೇಷೆಯಲ್ಲಿ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಇರುವಂತೆಯೂ ಭಾಸವಾಗಿದೆ.

ಪ್ರತಿ ಮತದಾನದ ಹಂತದಲ್ಲೂ ಕಡಿಮೆಯಾದ ಮತದಾನದ ಪ್ರಮಾಣದ ಬಗ್ಗೆ ಸಹ ಚುನಾವಣಾ ಪ್ರಚಾರದ ವೇಳೆಯ ಚರ್ಚೆಗಳಲ್ಲಿ ಗಮನಹರಿಸಲಾಗಿತ್ತು. ಮೊದಲ ಆರು ಹಂತಗಳ ಪ್ರವೃತ್ತಿಯೇ ಮುಂದುವರಿಯುತ್ತದೆಯೇ ಎಂಬುದನ್ನು ಅರ್ಥ ಮಾಡಿಕೊಳ್ಳಲು ಏಳನೇ ಹಂತದ ಮತದಾನದ ಅಂಕಿಅಂಶಗಳಿಗಾಗಿ ಈಗ ನಾವು ಕಾಯಬೇಕಿದೆ. ಇಲ್ಲಿ ಎರಡು ಅಂಶಗಳನ್ನು ಎತ್ತಿ ತೋರುವುದು ಮುಖ್ಯವಾಗುತ್ತದೆ. ಮೊದಲನೆಯದಾಗಿ, ಈ ಬಾರಿಯ ಮತದಾನದ ಪ್ರಮಾಣವನ್ನು, ವಿಶೇಷವಾಗಿ 2019ರ ಚುನಾವಣೆಯಲ್ಲಿನ ಮತದಾನದ ಪ್ರಮಾಣದ ಜೊತೆಗೆ ಹೋಲಿಕೆ ಮಾಡಲಾಗುತ್ತಿದೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಹೆಚ್ಚಿನ ಮತದಾನದ ಪ್ರಮಾಣವನ್ನು ಕಂಡ ವಿಶೇಷ ಚುನಾವಣೆಯಾಗಿತ್ತು 2019ರ ಚುನಾವಣೆ. ಈ ಬಾರಿಯ ಮತದಾನದ ಪ್ರಮಾಣವು ಈ ಹಿಂದಿನ ಅನೇಕ ಚುನಾವಣೆಗಳಿಗೆ ಸಮಾನವಾಗಿ ಇದ್ದಂತಿದೆ. ಎರಡನೆಯದಾಗಿ, ಸ್ಪರ್ಧೆ ತೀವ್ರವಾಗಿರುವ ಕೆಲವು ಪ್ರಮುಖ ಕ್ಷೇತ್ರಗಳನ್ನು ಗಮನಿಸಿದಲ್ಲಿ, ಆ ಕ್ಷೇತ್ರಗಳಲ್ಲಿನ ಮತದಾನದ ಪ್ರಮಾಣವು 2019ರಲ್ಲಿ ಇದ್ದಷ್ಟೇ ಅಥವಾ ಕೆಲವೆಡೆ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿದೆ.

ಚುನಾವಣಾ ಪ್ರಚಾರ ಸಾಗಿಬಂದಂತೆ, ಎದ್ದು ಕಾಣುವಂತಹ ಯಾವುದೇ ರಾಷ್ಟ್ರೀಯ ಅಲೆ ಇಲ್ಲ ಎಂಬುದೂ ಸ್ಪಷ್ಟವಾಯಿತು. ವಿವಿಧ ರಾಜ್ಯಗಳಲ್ಲಿ ಬದಲಾವಣೆಯ (ವಿವಿಧ ಮಟ್ಟದ ತೀವ್ರತೆಗಳಲ್ಲಿ) ಗಾಳಿ ಇರಬಹುದು. ಅದರ ಪರಿಣಾಮ ಮತ್ತು ಒಳಾರ್ಥಗಳು ಜೂನ್ 4ರಂದಷ್ಟೇ ಗೊತ್ತಾಗಲಿವೆ.

ಬಿಜೆಪಿ ನೇತೃತ್ವದ ಎನ್‌ಡಿಎಗೆ ಚುನಾವಣಾ ಪ್ರಚಾರ ಕುರಿತಂತೆ ಸ್ಪಷ್ಟವಾದ ಸಿದ್ಧ ಮಾದರಿ ಇತ್ತು. ಅದನ್ನು ದೇಶದಾದ್ಯಂತ ಪ್ರಯೋಗಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ನಾಯಕತ್ವದ ಬಗ್ಗೆ ಪ್ರಜ್ಞಾಪೂರ್ವಕವಾದ, ಎದ್ದುಕಾಣಿಸುವಂತಹ ಗಮನ ಕೇಂದ್ರೀಕರಿಸಲಾಗಿತ್ತು. ಹೀಗಾಗಿ, ಮತದಾರರು ಮತ ನೀಡುವುದು ತಮಗೆ ವೈಯಕ್ತಿಕವಾಗಿಯಲ್ಲ, ಮೋದಿಯವರನ್ನು ಮೂರನೇ ಬಾರಿಗೆ ಪ್ರಧಾನಿಯಾಗಿಸುವುದಕ್ಕಾಗಿ ಎಂಬುದನ್ನೇ ಎನ್‌ಡಿಎ ಅಭ್ಯರ್ಥಿಗಳು ರಾಷ್ಟ್ರದಾದ್ಯಂತ ಒತ್ತಿ ಹೇಳಿದರು. ಈ ಕಾರ್ಯತಂತ್ರವು ಮೈತ್ರಿಕೂಟಕ್ಕೆ ಮುಜುಗರ ತರಬಹುದಾದ ವಿಚಾರಗಳನ್ನೂ ಬದಿಗೆ ಸರಿಸುತ್ತದೆ ಎಂಬ ಭಾವನೆ ಆಡಳಿತ ಪಕ್ಷದ ನಾಯಕರದು. ಬಿಜೆಪಿಯಲ್ಲಿ ಈ ಬಾರಿ ಅಸಮಾಧಾನ ದೊಡ್ಡ ಮಟ್ಟದಲ್ಲಿ ಅದೂ ಬಹಿರಂಗವಾಗಿ ಕಾಣಿಸಿಕೊಂಡಿತು. ಹಿಂದೆಂದೂ ಈ ಮಟ್ಟದಲ್ಲಿ ಅಸಮಾಧಾನ ಭುಗಿಲೆದ್ದ ನಿದರ್ಶನಗಳು ಇಲ್ಲ. ಮೂರು ಅಥವಾ ನಾಲ್ಕು ಬಾರಿ ಸಂಸದರಾಗಿದ್ದ ಕೆಲವರೂ ಸೇರಿದಂತೆ ಸುಮಾರು ನೂರು ಅಭ್ಯರ್ಥಿಗಳನ್ನು ಬದಲಿಸಿ ಬೇರೆಯವರಿಗೆ ಟಿಕೆಟ್ ನೀಡಿದ್ದೂ ಸೇರಿದಂತೆ ಹಲವು ಅಂಶಗಳು ಈ ಅಸಮಾಧಾನಕ್ಕೆ ಕಾರಣವಾಗಿದ್ದವು.

ಇಂತಹ ಸವಾಲುಗಳಿಂದ ಗಮನ ಬೇರೆಡೆ ಸೆಳೆಯಲು ಪ್ರಧಾನಿ ನರೇಂದ್ರ ಮೋದಿಯವರನ್ನೇ ಪ್ರಚಾರದ ಕೇಂದ್ರಬಿಂದುವಾಗಿಸುವುದು ಉತ್ತಮ ಮಾರ್ಗವೆಂದು ಭಾವಿಸಲಾಯಿತು. ಮೊದಲ ಹಂತದ ಮತದಾನದ ನಂತರ, ಬಿಜೆಪಿ ಪ್ರಚಾರದಲ್ಲಿನ ಗಮನ ಹಾಗೂ ವಿಷಯ ಪೂರ್ಣ ಬದಲಾಯಿತು. ಕಾಂಗ್ರೆಸ್ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ನಂತರ, ತನ್ನ ಪ್ರತಿಸ್ಪರ್ಧಿಯ ವಿರುದ್ಧದ ಟೀಕೆಗಳನ್ನು ತೀವ್ರವಾಗಿಸಲು ಅದು ನೆಪ ಕಂಡುಕೊಂಡಿತು. ಇದರ ನೇರ ಪರಿಣಾಮವೆಂದರೆ, ಬಿಜೆಪಿ ಸ್ವತಃ ಸಂಕಥನವನ್ನು ಆರಂಭಿಸುವ ಬದಲಿಗೆ ಕಾಂಗ್ರೆಸ್ ಕಾರ್ಯಸೂಚಿಗೆ ಸ್ಪಂದಿಸಲು ತೊಡಗಿತು.



ವಿವಿಧ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಎನ್‌ಡಿಎಯೇತರ ಪಕ್ಷಗಳು, ಸ್ಥಳೀಯ ವಿಚಾರಗಳನ್ನು ಇಟ್ಟುಕೊಂಡು ಚುನಾವಣೆಗಳಲ್ಲಿ ಹೋರಾಡುವಂತಹ ಕಾರ್ಯವಿಧಾನವನ್ನು ಅಳವಡಿಸಿಕೊಂಡವು. ಹೀಗಾಗಿ, ತಮ್ಮ ಸರ್ಕಾರಗಳ ಸಾಧನೆಗಳನ್ನು ಬಿಂಬಿಸಿ, ರಾಜ್ಯಗಳಲ್ಲಿನ ಆಡಳಿತ ಪಕ್ಷ ಅಥವಾ ಮೈತ್ರಿಕೂಟಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಕೇಂದ್ರದಲ್ಲಿ ಪರಿಣಾಮಕಾರಿಯಾಗಿ ತಮ್ಮನ್ನು ಪ್ರತಿನಿಧಿಸುವಂತಹವರಿಗೇ ಮತ ಹಾಕಬೇಕೆಂದು ಮತದಾರರ ಮನ ಒಲಿಸುವ ಯತ್ನವನ್ನು ಅವು ಮಾಡಿದವು. ಬಿಜೆಪಿಯು ರೂಪಿಸಲು ಯತ್ನಿಸಿದ ರಾಷ್ಟ್ರೀಯ ಸಂಕಥನ ಹಾಗೂ ವಿರೋಧ ಪಕ್ಷಗಳು ರೂಪಿಸಲು ಯತ್ನಿಸಿದ ಸ್ಥಳೀಯ ವಿಚಾರಗಳ ಸಂಕಥನದ ಮಧ್ಯದ ಮುಖಾಮುಖಿಯನ್ನು ಈ ಚುನಾವಣೆ ಕಂಡಿದೆ.

ಭಾರತದ ಉತ್ತರ, ಪಶ್ಚಿಮ ಹಾಗೂ ಮಧ್ಯ ಭಾಗಗಳಲ್ಲಿ ಹೆಚ್ಚಿನ ಸ್ಥಾನಗಳನ್ನು (ಈ ಹಿಂದಿನಂತೆಯೇ) ಕಾಯ್ದುಕೊಳ್ಳುವ ಗುರಿ ಬಿಜೆಪಿಗೆ ಇದೆ. ಹರಿಯಾಣ, ದೆಹಲಿ ಹಾಗೂ ಮಹಾರಾಷ್ಟ್ರದಲ್ಲಿ ಬಿಜೆಪಿಗೆ ಕೆಲವೊಂದು ಗಂಭೀರ ಸವಾಲುಗಳಿವೆ. ರಾಜಸ್ಥಾನ ಹಾಗೂ ಗುಜರಾತ್‌ನಲ್ಲಿ ಜಯಭೇರಿ ಬಾರಿಸಬಹುದೇ ಎಂಬ ಬಗ್ಗೆಯೂ ಪ್ರಶ್ನೆಗಳಿವೆ. ಛತ್ತೀಸಗಢ ಹಾಗೂ ಜಾರ್ಖಂಡ್‌ನಲ್ಲಿ ಕಳೆದ ಸಲ ಗೆದ್ದಿದ್ದಕ್ಕಿಂತ ಇನ್ನೊಂದಿಷ್ಟು ಹೆಚ್ಚಿನ ಸ್ಥಾನಗಳನ್ನು ಗೆಲ್ಲಬಹುದು ಎಂಬ ನಿರೀಕ್ಷೆಯನ್ನೂ ಬಿಜೆಪಿ ಇಟ್ಟುಕೊಂಡಿದೆ. ಮಹಾರಾಷ್ಟ್ರ, ಬಿಹಾರ ಹಾಗೂ ಉತ್ತರಪ್ರದೇಶದ ಫಲಿತಾಂಶಗಳು ತಕ್ಕಡಿಯನ್ನು ಏರುಪೇರು ಮಾಡುವ ಸಾಮರ್ಥ್ಯ ಹೊಂದಿವೆ.

ಮಹಾರಾಷ್ಟ್ರದಲ್ಲಿ ಶಿವಸೇನೆ ಹಾಗೂ ಎನ್‌ಸಿಪಿಯ ಎರಡು ಬಣಗಳು ಇನ್ನೂ ಚುನಾವಣಾ ಪರೀಕ್ಷೆಗೆ ಒಳಪಟ್ಟಿಲ್ಲ. ಹೀಗಾಗಿ, ಯಾವ ಬಣಕ್ಕೆ ಹೆಚ್ಚಿನ ಜನಬೆಂಬಲವಿದೆ ಎಂಬುದನ್ನು ಈ ಚುನಾವಣೆ ಸೂಚಿಸಲಿದೆ. ಆ ಅಂಶವೇ ಅವರು ಗೆಲ್ಲುವ ಸೀಟುಗಳ ಮೇಲೂ ಪ್ರಭಾವ ಬೀರಲಿದೆ. ಬಿಹಾರದಲ್ಲಿ ಬಿಜೆಪಿ ಹಾಗೂ ಆರ್‌ಜೆಡಿ ಮೇಲುಗೈ ಸಾಧಿಸಿದಂತೆ ಕಾಣುತ್ತಿದೆ. ಜೆಡಿಯು ತೀವ್ರತರವಾದ ಸವಾಲು ಎದುರಿಸುತ್ತಿರುವಂತಿದೆ. ಈ ಹಿಂದಿ ಹೃದಯಭಾಗದಲ್ಲಿನ ಖೋತಾ ಸಾಧ್ಯತೆಯನ್ನು ಉತ್ತರಪ್ರದೇಶದಲ್ಲಿ ಹೆಚ್ಚಿನ ಸ್ಥಾನಗಳ ಗೆಲುವಿನ ಮೂಲಕ ಸುಧಾರಿಸಿಕೊಳ್ಳುವ ಆಶಯ ಬಿಜೆಪಿಯದ್ದು. ಆದರೆ ಇಲ್ಲಿಯೂ ಸ್ಪರ್ಧೆ ತುರುಸಾಗಿದೆ.

ದಕ್ಷಿಣ ಭಾಗದ ರಾಜ್ಯಗಳಲ್ಲಿ ಏನಾಗುತ್ತಿದೆ ಎಂಬ ಬಗ್ಗೆಯೂ ಹೆಚ್ಚಿನ ಚರ್ಚೆಗಳಾಗುತ್ತಿವೆ. ಕರ್ನಾಟಕದಲ್ಲಿ 2019ರಲ್ಲಿನ ಫಲಿತಾಂಶವನ್ನು ಉಳಿಸಿಕೊಳ್ಳುವುದು ಬಿಜೆಪಿಗೆ ಕಷ್ಟ. ಕರ್ನಾಟಕದಲ್ಲಿ ಕಳೆದುಕೊಂಡಿದ್ದನ್ನು ತೆಲಂಗಾಣ, ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ತುಂಬಿಕೊಳ್ಳಬಹುದು ಎಂಬ ವಾದ ಕೇಳಿಸುತ್ತಿದೆ. ಈಶಾನ್ಯ ರಾಜ್ಯಗಳಲ್ಲಿ ಹೆಚ್ಚಿನ ಬದಲಾವಣೆಗಳ ಸೂಚನೆ ಇಲ್ಲವಾದ್ದರಿಂದ ಪಶ್ಚಿಮ ಬಂಗಾಳ ಹಾಗೂ ಒಡಿಶಾದಲ್ಲಿನ ಚುನಾವಣಾ ಫಲಿತಾಂಶಗಳು ಕೂಡ ಸಂಖ್ಯಾದೃಷ್ಟಿಯಿಂದ ಈ ಸಲ ಮುಖ್ಯವಾಗುತ್ತವೆ. ನಿಜಕ್ಕೂ ಕುತೂಹಲ ಹೆಚ್ಚಾಗುತ್ತಿದೆ. ಆದರೆ, ಜೂನ್ 4ರವರೆಗೆ ನಾವು ಕಾಯಲೇಬೇಕಿದೆ.

ಚುರುಮುರಿ



ಜ್ಯೋತಿಷಿ ಪವರ್!

• ಗುರು ಪಿ.ಎಸ್.

ಶುಭ್ರ ಬಿಳಿ ಬಣ್ಣದ ಜುಬ್ಬಾ, ಪ್ಯಾಂಟ್ ಹಾಕಿಕೊಂಡು, ಹಣೆಗೆ ಕುಂಕುಮ ಧರಿಸಿ ಅತೀವ ಶ್ರದ್ಧೆ, ವಿನಯದಿಂದ ಬಂದು ಎದುರು ಕುಳಿತ ಮುದ್ದಣ್ಣ.

‘ಅಪಾರ ವಿಶ್ವಾಸದಿಂದ ನಿನ್ನ ಮೊಗ ಪ್ರಜ್ವಲಿಸುತ್ತಿದೆ. ಸಂಕಷ್ಟದಲ್ಲಿಯೂ ಇಷ್ಟು ಸಂತಸದಿಂದ ಇರಲು ಹೇಗೆ ಸಾಧ್ಯ ಅಣ್ಣ?’ ಕೇಳಿದ ವಿಜಿ.

‘ಮೇಲಿನವನು ಹೇಳಿದಂತೆ ನಡೆದರೆ ಎಲ್ಲವೂ ಸಾಧ್ಯ’ ಸಮಾಧಾನದಿಂದ ಹೇಳಿದ ಮುದ್ದಣ್ಣ.

‘ಮೇಲಿನವನು ಎಂದರೆ ದೇವರಾ?’

‘ಅಲ್ಲ. ನಮ್ಮ ಜ್ಯೋತಿಷಿ’.

‘ಜ್ಯೋತಿಷಿ ಮಾತು ಅಷ್ಟು ಮುಖ್ಯವೇ?’

‘ನಂಬಿಕೆ ಮುಖ್ಯ ವಿಜಿ. ನಂಬಿಕೆ ಇದ್ದರೆ ಯಾವುದೂ ಅಸಾಧ್ಯವಲ್ಲ’.

‘ಜ್ಯೋತಿಷಿಗಳೇ ಮಾರ್ಗದರ್ಶನ ನೀಡಿದ್ದಾರೆ ಎಂದರೆ, ನೀವು ಯಾವುದೋ ಮಹಾ ಕಾರ್ಯಕ್ಕೆ ತೆರಳುತ್ತಿದ್ದೀರಿ ಅನಿಸುತ್ತೆ, ಅಲ್ವಾ ಅಣ್ಣ?’

‘ಪೊಲೀಸರ ಬಳಿಗೆ’ ತಣ್ಣಗೆ ಹೇಳಿದ ಮುದ್ದಣ್ಣ.

‘ಅದ್ಯಾಕಣ್ಣ’ ಅಚ್ಚರಿಯಿಂದ ಕೇಳಿದ ವಿಜಿ.

‘ಕೇಸ್ ಹಾಕಿದ್ದಾರೆ. ಅದಕ್ಕೆ ಹೋಗಬೇಕು?’

‘ತಿಂಗಳಿಂದಲೂ ಪೊಲೀಸರು ನಿಮಗಾಗಿ ಕಾಯುತ್ತಿದ್ದರೂ ಇವತ್ತೇ ಏಕೆ ಹೋಗ್ತಿದ್ದೀರಣ್ಣ?’

‘ಶುಕ್ರವಾರ ಪೊಲೀಸರ ಮುಂದೆ ಹೋದರೆ ನಿಮಗೆ ಏನೂ ತೊಂದರೆಯಾಗದು ಅಂತ ನಮ್ಮ ಜ್ಯೋತಿಷಿ ಹೇಳಿದ್ದಾರೆ. ಅದಕ್ಕೆ ಇವತ್ತೇ ಹೋಗ್ತಿದ್ದೀನಿ. ಆ ದೇವರಿದ್ದಾನೆ’.

‘ಕೆಟ್ಟ ಕೆಲಸ ಮಾಡಿ ದೇವರಿದ್ದಾನೆ ಅಂದರೆ ಹೇಗೆ’ ಅಂತ ಗುನುಗಿಕೊಂಡ ವಿಜಿ, ‘ಹೌದಣ್ಣ, ಆ ದೇವರೇ ನೋಡಿಕೊಳ್ತಾನೆ ಬಿಡಿ’ ಎಂದ ಜೋರಾಗಿ.

ಮುದ್ದಣ್ಣನ ಬಂಧನವಾಯಿತು. ‘ಅಯ್ಯೋ, ಜ್ಯೋತಿಷಿ ಹೇಳಿದ್ದಾರೆ ಅಂತ ಶುಕ್ರವಾರ ಪೊಲೀಸರ ಬಳಿ ಹೋಗಿದ್ದರು ನಮ್ಮಣ್ಣ. ಆದರೂ ಅರೆಸ್ಟ್ ಆಗಿಬಿಡ್ತು’ ಟಿ.ವಿ ನೋಡುತ್ತಾ ಹೇಳಿದ ವಿಜಿ.

‘ಪೊಲೀಸಿನವರೂ ಜ್ಯೋತಿಷಿ ಬಳಿ ಹೋಗಿದ್ದರಂತೆ. ಮಹಿಳೆಯರು ದುರ್ಗೆಯ ರೂಪ. ಐವರು ಮಹಿಳೆಯರೇ ಅರೆಸ್ಟ್ ಮಾಡಿದರೆ ಗ್ಯಾರಂಟಿ ಶಿಕ್ಷೆಯಾಗುತ್ತೆ ಅಂತ ಅವರಿಗೆ ಹೇಳಿದರಂತೆ. ಅದಕ್ಕೆ ಲೇಡಿ ಆಫೀಸರ್ಸ್ ಬಂಧಿಸಿದ್ದಾರೆ. ಯಾವ ಜ್ಯೋತಿಷಿ ಭವಿಷ್ಯ ನಿಜವಾಗುತ್ತೋ ನೋಡೋಣ’ ಎಂದು ನಕ್ಕಳು ವಿಜಿಯ ಪತ್ನಿ.

ಸಂಗತ

ತಾಳ, ತಂತು ಇಲ್ಲದವರು, ನಮ್ಮ ಯುವಕರು!

ಪುಣೆ ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಬಾಲಕನ ಕುಟುಂಬಸ್ಥರು ಆತನನ್ನು ಪಾರು ಮಾಡಲು ನಾನಾ ಅಡ್ಡಮಾರ್ಗಗಳನ್ನು ಹಿಡಿದಿರುವುದು ದುರದೃಷ್ಟಕರ

• ಚನ್ನು ಅ. ಹಿರೇಮಠ

‘ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು’ ಎಂಬ ಗಾದೆ ಮಾತನ್ನು ನಾವು ಸಣ್ಣವರಿದ್ದಾಗ ಶಾಲೆಯ ಕೊಠಡಿಗಳಲ್ಲಿ, ಗೋಡೆಗಳ ಮೇಲೆ ಬರೆದದ್ದನ್ನು ಓದಿದ್ದ ನೆನಪು! ಮನೆಯಲ್ಲಿಯ ವಾತಾವರಣ, ತಂದೆ ತಾಯಿಯ ನಡೆ ನುಡಿಯೇ ಮಕ್ಕಳಲ್ಲಿ ಪ್ರತಿಫಲಿಸುವುದು ಸಾಮಾನ್ಯ. ಆದರೆ ಇತ್ತೀಚಿನ ಕೆಲವು ಪ್ರಕರಣಗಳು, ‘ತಾಳ ಇಲ್ಲ ತಂತು ಇಲ್ಲ, ಊದು ನನ್ನ ತುತ್ತೂರಿ’ ಎಂಬ ಗಾದೆಯನ್ನು ನೆನಪಿಸುವಂತಿವೆ.

ಪುಣೆಯಲ್ಲಿ ಇತ್ತೀಚೆಗೆ ಬಾಲಕನೊಬ್ಬ ಮದ್ಯ ಸೇವಿಸಿ ಪೋಶೆ ಕಾರನ್ನು ಚಲಾಯಿಸಿ, ಇಬ್ಬರು ಅಮಾಯಕರ ಸಾವಿಗೆ ಕಾರಣನಾಗುತ್ತಾನೆ. ಅವನೊಬ್ಬ ‘ಕಾನೂನಿನ ಎದುರು ಸಂಘರ್ಷಕ್ಕೆ ಒಳಗಾಗಿರುವ’ ಬಾಲಕ ಎಂಬ ಕಾರಣಕ್ಕೆ ಬಾಲನ್ಯಾಯ ಮಂಡಳಿಯು ಶಾಲೆಯಲ್ಲಿ ನೀಡುವ ‘ಹೋಮ್ ವರ್ಕ್’ನಂತೆ ರಸ್ತೆ ಸುರಕ್ಷತೆ ಕುರಿತು ಪ್ರಬಂಧ ಬರೆಯುವ ‘ಶಿಕ್ಷೆ’ ನೀಡುತ್ತದೆ! ‘ಏನೂ ಅರಿಯದ ಮುಗ್ಧ ಬಾಲಕ’ ಎಂಬ ಕಾರಣಕ್ಕೋ ಏನೋ ಜಾಮೀನನ್ನು ಸಹ ನೀಡುತ್ತದೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿನ ಪ್ರತಿಭಟನೆ, ಸಾರ್ವಜನಿಕರ ಆಕ್ರೋಶಕ್ಕೆ ಮಣಿದು, ಆ ಬಾಲಕನನ್ನು ಅನಿವಾರ್ಯವಾಗಿ ಬಾಲಮಂದಿರಕ್ಕೆ ಕಳುಹಿಸಲಾಗಿದೆ.

ಅಚ್ಚರಿಯೆಂದರೆ, ಈ ವಿಷಯದಲ್ಲಿ ಪುಣೆ ಪೊಲೀಸರು ಬಹಳ ಮುತುವರ್ಜಿಯಿಂದ ಪ್ರಕರಣ ದಾಖಲಿಸಿ, ಹಣದ ಕೈಚಳಕ ನಡೆಯದಂತೆ ಆರೋಪಿಯ ರಕ್ತದ ಮಾದರಿ ಸಂಗ್ರಹಿಸಿರುವುದು. ಪೊಲೀಸರ ಕರ್ತವ್ಯನಿಷ್ಠೆಯ ಕಾರಣ ಇಬ್ಬರು ವೈದ್ಯರು ಬಂಧನಕ್ಕೆ ಒಳಗಾಗಿದ್ದಾರೆ. ‘ವೈದ್ಯರು ದೇವರ ಸಮಾನ’ ಎಂಬ ವಿಶ್ವಾಸ, ಗೌರವಕ್ಕೆ ಧಕ್ಕೆ ತರುವಂತೆ ಈ ಇಬ್ಬರು ವೈದ್ಯರು ಆಮಿಷಕ್ಕೆ ಬಲಿಬಿದ್ದು, ರಕ್ತದ ಮಾದರಿಯನ್ನೇ ಬದಲಾಯಿಸಿ ಕಳಂಕಿತರಾಗಿದ್ದಾರೆ. ಸಾಮಾನ್ಯವಾಗಿ ಇಂಥ ಕುತಂತ್ರಗಳನ್ನು ಪೊಲೀಸರೇ ಮಾಡುವುದನ್ನು ಕೇಳಿರುತ್ತೇವೆ. ಆದರೆ ಇಲ್ಲಿ, ನ್ಯಾಯಾಲಯಗಳು ಮತ್ತು ಪೊಲೀಸರು ನಂಬುವಂತಹ ವೈದ್ಯರೇ ಇಂತಹ ದುಷ್ಕೃತ್ಯ ಎಸಗಿರುವುದು ನಾಚಿಕೆಗೇಡಿನ ಸಂಗತಿ.

ಸಾಕ್ಷಿಗಳಿಂದ ನಂಬಲರ್ಹವಾದ ಮಾಹಿತಿಯು ದೊರಕದೇ ಇದ್ದಾಗ ವೈದ್ಯರು ಹೇಳುವ ಮಾತುಗಳನ್ನೇ ಪ್ರಬಲ ಸಾಕ್ಷ್ಯ ಎಂದು ನ್ಯಾಯಾಲಯಗಳು ತೀರ್ಮಾನಿಸಿ, ಆರೋಪಿಗಳನ್ನು ಅಪರಾಧಿಗಳೆಂದು ನಿರ್ಣಯಿಸಿ ಶಿಕ್ಷೆ ನೀಡಿದ ನಿದರ್ಶನಗಳು ಅಸಂಖ್ಯ. ಇಂತಿರುವಾಗ ಸಮಾಜದ ಉಚ್ಚಸ್ತರದಲ್ಲಿರುವ, ಜವಾಬ್ದಾರಿಯುತ ನಾಗರಿಕರು ಎನ್ನಿಸಿಕೊಂಡಿರುವ ವೈದ್ಯರು ಆರೋಪಿಗೆ ನೆರವಾಗುವಂತೆ ವರ್ತಿಸಿರುವುದು ಅಮಾನವೀಯ, ಅಸಮರ್ಥನೀಯ. ಆಕಸ್ಮಿಕವಾಗಿ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಬಾಲಕನ ಹೆಚ್ಚುವರಿ ರಕ್ತದ ಮಾದರಿಯನ್ನು ಪಡೆಯದೇ ಇದ್ದಿದ್ದರೆ? ಆತ ಸುಲಭವಾಗಿ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿತ್ತಲ್ಲವೇ? ಆರೋಪಿಯ ತಂದೆ ವೈದ್ಯರೊಂದಿಗೆ ಸಂಪರ್ಕದಲ್ಲಿ ಇದ್ದುದನ್ನು ದೃಢಪಡಿಸುವ ತಾಂತ್ರಿಕ ಸಾಕ್ಷ್ಯಗಳು, ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳಲ್ಲಿನ ದಾಖಲೆಗಳಂತಹವು ವೈದ್ಯರು ಕಾನೂನು ಬಲೆಯಿಂದ ತಪ್ಪಿಸಿಕೊಳ್ಳದಂತೆ ಮಾಡಿವೆ.

ಈ ಹಿಂದೆ ಬಾಲಿವುಡ್ ಚಿತ್ರನಟರೊಬ್ಬರು ಮದ್ಯದ ಅಮಲಿನಲ್ಲಿ, ರಸ್ತೆಬದಿ ಮಲಗಿದ್ದವರ ಮೇಲೆ ಕಾರು ಹರಿಸಿದ ಆರೋಪ ಎದುರಿಸುತ್ತಿದ್ದ ಪ್ರಕರಣದ ಕತೆ ಏನಾಯಿತು, ಎಷ್ಟು ಸಾಕ್ಷಿಗಳು ನಿಗೂಢವಾಗಿ ಸಾವನ್ನಪ್ಪಿದರು, ಆ ವಿಚಾರಣೆ ಮುಗಿಯಲು ಎಷ್ಟು ಸುದೀರ್ಘ ಸಮಯ ತೆಗೆದುಕೊಂಡಿತು ಎನ್ನುವುದು ನಮಗೆಲ್ಲ ತಿಳಿದಿರುವ ಸಂಗತಿಯೇ ಆಗಿದೆ.

ಇಷ್ಟೆಲ್ಲ ಅವಾಂತರಗಳು ಘಟಿಸಿದಾಗ, ಕಿಂಚಿತ್ತಾದರೂ ಪಶ್ಚಾತ್ತಾಪವಾಗಲೀ ವಿಷಾದದ ಛಾಯೆಯಾಗಲೀ ಆ ಕುಟುಂಬದವರಲ್ಲಿ ಮೂಡಿಲ್ಲ ಎನ್ನುವುದು ಅಸಹ್ಯಕರ. ಆರೋಪಿಯ ತಂದೆಯು ವೈದ್ಯರನ್ನು ಆಮಿಷಕ್ಕೆ ಬಲಿ ಬೀಳಿಸಿ ಮಗನನ್ನು ಪ್ರಕರಣದಿಂದ ಪಾರು ಮಾಡಲು ಪ್ರಯತ್ನಿಸುತ್ತಾರೆ, ತಾತ ಬೆದರಿಕೆ ಒಡ್ಡಿಯೋ ಹಣದ ಆಸೆ ತೋರಿಸಿಯೋ ಚಾಲಕನನ್ನು ಬಲಿಪಶು ಮಾಡಲು ಮುಂದಾಗುತ್ತಾರೆ.

ಇನ್ನೊಂದು ವರದಿಯ ಪ್ರಕಾರ, ಅಪಘಾತ ನಡೆದ ಸ್ಥಳದಲ್ಲಿಯೇ ಬಾಲಕನ ಬದಲು ಬೇರೊಬ್ಬರು ವಾಹನ ಚಲಾಯಿಸುತ್ತಿದ್ದರು ಎಂಬಂತೆ ಸಾಕ್ಷಿಗಳನ್ನು ಸೃಷ್ಟಿಸುವ ಪ್ರಯತ್ನ ನಡೆದಿತ್ತು ಎನ್ನುವ ಅಂಶವೂ ಉಳ್ಳವರು ಏನಾದರೂ ಮಾಡಬಲ್ಲರು ಎಂಬುದಕ್ಕೆ ಪುಷ್ಟಿ ನೀಡುವಂತೆ ಇದೆ. ಹೊಟ್ಟೆಪಾಡಿಗಾಗಿ ತಮ್ಮ ಬಂಧು-ಬಳಗವನ್ನು ಬಿಟ್ಟು ಪರ ಊರಿಗೆ ಬಂದು ಹೆಣವಾದ ಎರಡು ಜೀವಗಳನ್ನು ಅವಲಂಬಿಸಿರುವ ಕುಟುಂಬಗಳಿಗೆ ಇವರು ಏನು ಹೇಳುತ್ತಾರೆ?



ಇಂತಹ ಪ್ರಕರಣಗಳಿಗೆ ತಂದೆ ತಾಯಿಯ ಜೀವನಶೈಲಿ ಕಾರಣವೋ ಕುಟುಂಬದ ಸದಸ್ಯರ ವರ್ತನೆ ಕಾರಣವೋ ಶಾಲಾ ಶಿಕ್ಷಣ ಕಾರಣವೋ ಸಮಾಜ ಕಾರಣವೋ ಜಾಲತಾಣಗಳ ಹಾವಳಿಯೋ ನಮ್ಮ ಸಂಸ್ಕೃತಿ-ಪರಂಪರೆಯನ್ನು ಲಘುವಾಗಿ ಕಾಣುತ್ತಿರುವುದು ಕಾರಣವೋ ಕಂಡುಹಿಡಿಯುವ ಅನಿವಾರ್ಯ ಉಂಟಾಗಿದೆ. 40-50 ವರ್ಷಗಳ ಕೆಳಗೆ ಸರ್ಕಾರಿ ಶಾಲೆಗಳಲ್ಲಿ ಓದಿ ವಿದ್ಯಾವಂತರಾದ, ಸಂಸ್ಕೃತಿ, ಪರಂಪರೆಯನ್ನು ಪಾಲಿಸಿದ ಜನಜೀವನದ ವ್ಯವಸ್ಥೆಯನ್ನು ನಮ್ಮ ದೇಶ ಕಂಡಿದೆ.

ಇಂದು ಹಳ್ಳಿಹಳ್ಳಿಗಳಲ್ಲೂ ಕಾನ್ವೆಂಟ್ ಶಾಲಾ ಶಿಕ್ಷಣ ಪದ್ಧತಿ ಬಂದಿದೆ. ಶಿಸ್ತು, ಸಭ್ಯತೆ, ಆತ್ಮ ವಿಶ್ವಾಸವನ್ನು ತುಲನಾತ್ಮಕವಾಗಿ ಹಿಂದಿಗಿಂತ ಹೆಚ್ಚು ಕಾಣಬೇಕಾಗಿದ್ದ ಸನ್ನಿವೇಶಗಳಲ್ಲಿ, ಅನುತ್ತೀರ್ಣರಾದರೆ ನೇಣಿಗೆ ಶರಣಾಗುವ, ಪ್ರೀತಿಯನ್ನು ನಿರಾಕರಿಸಿದರೆ ಹಾಡಹಗಲೇ ಹತ್ಯೆಗೈಯ್ಯುವ, ಮಾತೆತ್ತಿದರೆ ಜೀವ ತೆಗೆಯುವ, ಆ್ಯಸಿಡ್ ದಾಳಿ ನಡೆಸುವ, ಮಿತಿಮೀರಿದ ಮದ್ಯಸೇವನೆ, ಮಾದಕವಸ್ತುಗಳ ಬಳಕೆ ಹೆಚ್ಚುತ್ತಿರುವ ಪ್ರಕರಣಗಳು, ಇಂತಹ ಎಲ್ಲ ಅಪಸವ್ಯಗಳ ಕೊನೆಗಾಣಿಸುವಿಕೆಗೆ ತುರ್ತು ಪರಿಹಾರ ಮಾರ್ಗ ಕಂಡುಕೊಳ್ಳಬೇಕಿರುವ ಅಗತ್ಯವನ್ನು ಒತ್ತಿ ಹೇಳುತ್ತವೆ.

ವಾಚಕರ ವಾಣಿ

ಸೆರಗಿನ ಕೆಂಡವಾಗಿ ಕಾಡುವವರು

ಈ ಬಾರಿಯ ಲೋಕಸಭಾ ಚುನಾವಣೆಯ ಕಣದಲ್ಲಿ ಇರುವ ಅಭ್ಯರ್ಥಿಗಳ ಪೈಕಿ 180 ಮಂದಿಯ ವಿರುದ್ಧ ಲೈಂಗಿಕ ದೌರ್ಜನ್ಯ, ಮಹಿಳೆಯರ ಗೌರವಕ್ಕೆ ಧಕ್ಕೆ ತಂದ ಆರೋಪಗಳಿದ್ದು, 14 ಮಂದಿಯ ವಿರುದ್ಧ ಅತ್ಯಾಚಾರದ ಆರೋಪಗಳಿವೆ ಎಂಬ ಅಂಕಿ ಅಂಶ (ಆಳ- ಅಗಲ, ಮೇ 30) ಓದಿ ದಿಗ್ಭ್ರಮೆಯಾಯಿತು. ಇಂತಹ ಆರೋಪ ಎದುರಿಸುತ್ತಿರುವವರಲ್ಲಿ ಮಹಿಳಾ ಅಭ್ಯರ್ಥಿಗಳೂ ಇದ್ದಾರೆ ಎಂಬುದು ಇನ್ನಷ್ಟು ಆತಂಕಕಾರಿ. ಇಂತಹವರೆಲ್ಲಾ ಚುನಾವಣೆಯಲ್ಲಿ ಗೆದ್ದರೆ ಸಮಾಜದಲ್ಲಿನ ಸ್ವಾಸ್ಥ್ಯವನ್ನು ಇನ್ನಷ್ಟು ಹಾಳುಗೆಡಹುವುದಿಲ್ಲವೇ? ಹೀಗಾದರೆ ಶ್ರೀಸಾಮಾನ್ಯರು, ಮಹಿಳೆಯರು, ಮಕ್ಕಳಿಗೆ ರಕ್ಷಣೆ ಕೊಡುವವರು ಯಾರು? ಇಂತಹವರ ಸ್ಪರ್ಧೆಗೆ ಅವಕಾಶ ಇಲ್ಲದಂತೆ ಕಾನೂನನ್ನು ಇನ್ನಷ್ಟು ಬಿಗಿ ಮಾಡಬೇಕು. ಇಲ್ಲವಾದರೆ ಇಂತಹವರು ಯಾವಾಗಲೂ ಸೆರಗಿನ ಕೆಂಡವಾಗಿಯೇ ಉಳಿದಿರುತ್ತಾರೆ.

ಶಿವಮೊಗ್ಗ ರಮೇಶ್, ಮೈಸೂರು

ಕಲಿಸಬೇಕಿದೆ ಮಾನವೀಯ ಮೌಲ್ಯ

‘ಶಾಲೆ ಶುರು: ಸಿದ್ಧರಾಗಿದ್ದೇವೆಯೇ?’ ಎಂಬ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಮೇ 29) ಉತ್ತಮವಾಗಿದೆ. ಹೆಚ್ಚು ಓದು, ಹೆಚ್ಚು ಅಂಕ ಪಡೆ, ಉದ್ಯೋಗ ಹಿಡಿ ಎಂಬುದೇ ಶಿಕ್ಷಣವಲ್ಲ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆ ಎರಡೂ ಬೇಕು. ಅದರ ಜೊತೆಗೆ ಮಾನವೀಯ ಮೌಲ್ಯಗಳನ್ನೂ ಕಲಿಸಿದರೆ ಮನಸ್ಸಿಗೆ ನೆಮ್ಮದಿಯ ಜೊತೆಗೆ ಸಮಾಜದಲ್ಲಿ ಶಾಂತಿ, ನೆಮ್ಮದಿ ಮೂಡುತ್ತದೆ, ಸಾಮರಸ್ಯ ಬೆಳೆಯುತ್ತದೆ. ಆಗ ಸ್ವಸ್ಥ ಸಮಾಜವನ್ನು ಕಾಣಲು ಸಾಧ್ಯ.

ಕುಂದೂರು ಮಂಜಪ್ಪ, ಹೊಳೆ ಸಿರಿಗೆರೆ

ಹೀಗಿದ್ದರು ಆ ಅಧಿಕಾರಿ...

ನನಗೆ ಈಗ 82 ವರ್ಷ ವಯಸ್ಸು. ಅದು ಸುಮಾರು 1960– 70ರ ದಶಕ ಇರಬಹುದು. ಅಂದು ತಿಪ್ಪೋಜಿ ರಾವ್ ಎಂಬುವರು ಬೆಂಗಳೂರಿನ ಜಿಲ್ಲಾಧಿಕಾರಿಯಾಗಿದ್ದರು. ಅವರ ನಿಷ್ಠೆ ಹೇಗಿತ್ತೆಂದರೆ, ಯಾವ ಮಂತ್ರಿಯ ಮೌಖಿಕ ಆದೇಶವನ್ನೂ ಅವರು ಪಾಲಿಸುತ್ತಿರಲಿಲ್ಲ. ‘ಏನಿದ್ದರೂ ಆದೇಶವನ್ನು ಬರೆದು ಕಳುಹಿಸಿ. ಮೌಖಿಕ ಆದೇಶವನ್ನು ಪಾಲಿಸುವುದಿಲ್ಲ. ಲಿಖಿತ ಆದೇಶವನ್ನೂ ಕಾನೂನಿನ ಚೌಕಟ್ಟಿನ ಒಳಗಿದ್ದರಷ್ಟೇ ಪಾಲಿಸುತ್ತೇನೆ. ಒಂದು ವೇಳೆ ನಾನು ಮಾಡದಿದ್ದರೆ ನೀವು ಮಾಡುವುದು ನನ್ನ ವರ್ಗಾವಣೆ. ಅದಕ್ಕೆ ನಾನು ಸಿದ್ಧನಿದ್ದೇನೆ’ ಎಂಬಂತಹ ನಿರ್ಧಾರ ಅವರದಾಗಿರುತ್ತಿತ್ತು.

ಇಂದಿನ ಐಎಎಸ್ ಅಥವಾ ಉನ್ನತ ಮಟ್ಟದ ಇತರ ಅಧಿಕಾರಿಗಳೂ ಇಂತಹ ಮನೋಭಾವ ಬೆಳೆಸಿಕೊಂಡರೆ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆದಂತಹ ಅವ್ಯವಹಾರ ಸಂಭವಿಸುವುದಿಲ್ಲ. ಇತರ ಅಭಿವೃದ್ಧಿ ನಿಗಮಗಳಿಗೂ ಈ ಪ್ರಕರಣ ಪಾಠವಾಗಬೇಕು.

ಎ.ವಿ.ಶಾಮ ರಾವ್, ಬೆಂಗಳೂರು

ಪ್ರಧಾನಿ ಮೋದಿ ಮತ್ತು ಯಕ್ಷಿಣಿ ಕಥೆ!

‘ನನ್ನನ್ನು ದೇವರು ಕಳಿಸಿದ್ದಾನೆ...’ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಮಾತನ್ನು ಕೇಳಿದಾಗ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮರಾಠಿ ಸಾಹಿತಿಯಾದ ವಿ.ಸ.ಖಾಂಡೇಕರ್ ಅವರ ‘ಕುಬೇರ ನಗರ’ ಎಂಬ ಸೊಗಸಾದ ಕಥೆ ನೆನಪಾಗುತ್ತದೆ (ಚಂದ್ರಕಾಂತ ಪೋಕಳೆ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ). ಕಥೆಯ ಸಂಕ್ಷಿಪ್ತ ರೂಪ ಇಷ್ಟು:

ದೊಡ್ಡ ಗುಂಪೊಂದು ಅರಣ್ಯದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಅಶರೀರವಾಣಿಯೊಂದು ಕೇಳಿಸುತ್ತದೆ: ‘ಮಹಾಜನಗಳೇ, ಕಣ್ಣಿಗೆ ಬಿಗಿಯಾಗಿ ಬಟ್ಟೆ ಕಟ್ಟಿಕೊಂಡು ನಡೆದುಹೋಗಿ. ಕಾಡು ಮುಗಿಯುತ್ತಲೇ ನಿಮಗೆ ‘ಕುಬೇರ ಲೋಕ’ ಸಿಗುತ್ತದೆ. ಯಕ್ಷಿಣಿಯರು ಬಂದು ಅಮೃತ ನೀಡುತ್ತಾರೆ. ಯಾರು ನನ್ನ ಮೇಲೆ ಶ್ರದ್ಧೆ ಇಡುವುದಿಲ್ಲವೋ ಅವರನ್ನು ನೋಡಿಕೊಳ್ಳುವೆ’ ಎಂದು ಹೇಳುತ್ತದೆ. ಐದು ಜನ ಬಿಟ್ಟು ಉಳಿದವರೆಲ್ಲರೂ ತಮ್ಮ ಅಂಗಿಯನ್ನು ಹರಿದು ಕಣ್ಣು ಕಟ್ಟಿಕೊಳ್ಳುತ್ತಾರೆ. ಸಂಜೆ ಎಲ್ಲರೂ ಅರಣ್ಯ ದಾಟಿ ಹೊರಗೆ ಬರುತ್ತಾರೆ. ಇನ್ನೇನು ಕುಬೇರ ನಗರ ದೊರೆಯುತ್ತದೆ ಎಂಬ ಆಸೆಯಿಂದ ಕಾಯ ತೊಡಗುತ್ತಾರೆ. ಮತ್ತೆ ಅಶರೀರವಾಣಿ ಕೇಳುತ್ತದೆ: ‘ಯಾರು ಕಣ್ಣು ಕಟ್ಟಿಕೊಂಡಿಲ್ಲವೋ ಅವರು ಪ್ರತ್ಯೇಕವಾಗಿ ನಿಲ್ಲಿ’. ಯಾವ ಶಿಕ್ಷೆ ಕಾದಿದೆಯೋ ಎಂದು ಎಲ್ಲರೂ ಕಾತರದಿಂದ ನೋಡುತ್ತಾರೆ. ‘ನನ್ನ ಆಜ್ಞೆ ಮೀರಿದ್ದು ಯಾಕೆ?’ ಎಂದು ಪ್ರತ್ಯೇಕ ಸಾಲಿನಲ್ಲಿ ನಿಂತ ಆ ಐವರನ್ನು ಅಶರೀರವಾಣಿ ಪ್ರಶ್ನಿಸುತ್ತದೆ. ಅವರು ಒಂದೇ ಧ್ವನಿಯಲ್ಲಿ ಉತ್ತರಿಸುತ್ತಾರೆ: ‘ಓ ಮಹಾಶಕ್ತಿಯೇ, ಯಾವ ಶಕ್ತಿ ನಿನ್ನನ್ನು ನಿರ್ಮಿಸಿದೆಯೋ ಅದೇ ಶಕ್ತಿ ನಮ್ಮನ್ನೂ ನಿರ್ಮಿಸಿದೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಡೆಯುವುದು ಅಪಮಾನ. ನಾವು ಅರಣ್ಯ, ಗಿಡ ಮರ, ಹೂ, ಬಂಡೆಗಲ್ಲು, ಪ್ರಾಣಿ ಪಕ್ಷಿಗಳನ್ನು ನೋಡಿ ತುಂಬಾ ಸಂತೋಷಪಟ್ಟಿದ್ದೇವೆ. ನಮಗೆ ಕುಬೇರ ನಗರ ಬೇಡ’ ಎಂದು ಹೇಳುತ್ತಾರೆ. ‘ನಿಮ್ಮ ಈ ಉತ್ತರವನ್ನು ಮೆಚ್ಚಿಕೊಂಡಿದ್ದೇನೆ. ಆದರೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡವರೆಲ್ಲ ಇನ್ನೂ ನಡೆಯುತ್ತಲೇ ಇರಬೇಕಾಗುತ್ತದೆ’ ಎಂದು ಹೇಳಿ ಅಶರೀರವಾಣಿ ಮರೆಯಾಗುತ್ತದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಭಕ್ತನೊಬ್ಬನ ಕಳಕಳಿ!

ಕನ್ಯಾಕುಮಾರಿಯಲ್ಲಿ ಮೋದಿ ಧ್ಯಾನವಂತೆ
ವಿವೇಕಾನಂದರ ತತ್ವವನ್ನು ದೇಶಕ್ಕೆ
ಸಾರಬೇಕು ಎಂಬ ಉದ್ದೇಶದಿಂದ.
ಗಾಂಧಿ ಭಕ್ತನ ಒಂದು ಕಳಕಳಿ:
ಅಲ್ಲೇ ಇದೆ (ಕನ್ಯಾಕುಮಾರಿಯಲ್ಲಿ)
‘ಗಾಂಧಿ ಸ್ಮಾರಕ ಭವನ’
ಅಲ್ಲೂ ಕೆಲ ಹೊತ್ತು ಪ್ರಧಾನಿ
ಧ್ಯಾನ ಮಾಡಲಿ, ಅದರಿಂದ
ತಲುಪುವರು ಗಾಂಧಿ ಇನ್ನಷ್ಟು ಮಂದಿಗೆ!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಟಿ20 ವಿಶ್ವಕಪ್ ಕ್ರಿಕೆಟ್ ಕಣದಲ್ಲಿ 'ಡಾಲರ್' ಕನಸು





ಟಿ20 ವಿಶ್ವಕಪ್: ಹಲವು ಮೈಲಿಗಲ್ಲುಗಳು

1141
ಭಾರತದ ವಿರಾಟ್ ಕೊಹ್ಲಿ ಗಳಿಸಿರುವ ಒಟ್ಟು ರನ್. ಒಟ್ಟು ಟೂರ್ನಿಗಳಲ್ಲಿ ಆಟಗಾರನೊಬ್ಬನ ಗರಿಷ್ಠ ಮೊತ್ತ ಇದಾಗಿದೆ

14
ವಿರಾಟ್ ಕೊಹ್ಲಿ ಗಳಿಸಿರುವ ಅರ್ಧಶತಕಗಳು. ನಂತರದ ಸ್ಥಾನದಲ್ಲಿ ರೋಹಿತ್ ಶರ್ಮಾ ಮತ್ತು ಕ್ರಿಸ್ ಗೇಲ್ ಇದ್ದಾರೆ (ತಲಾ 9)

ವಿರಾಟ್ ಕೊಹ್ಲಿ

319
ಟೂರ್ನಿಯೊಂದರಲ್ಲಿ (2014) ವಿರಾಟ್ ಕೊಹ್ಲಿ 6 ಪಂದ್ಯಗಳಿಂದ ಗಳಿಸಿದ ಒಟ್ಟು ರನ್



181.29
ಭಾರತದ ಸೂರ್ಯಕುಮಾರ್ ಯಾದವ್ ಹೊಂದಿರುವ ದಾಖಲೆಯ ಸ್ಟ್ರೈಕ್ ರೇಟ್ (10 ಇನಿಂಗ್ಸ್‌ಗಳಲ್ಲಿ 281 ರನ್ ಗಳಿಸಿದ್ದಾರೆ)



2
ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಗಳಿಸಿರುವ ಶತಕಗಳು. ಎರಡು ಶತಕ ದಾಖಲಿಸಿರುವ ಏಕೈಕ ಬ್ಯಾಟರ್

ಅಜೇಯ 170
ಇಂಗ್ಲೆಂಡ್‌ನ ಜೋಸ್ ಬಟ್ಲರ್ ಮತ್ತು ಅಲೆಕ್ಸ್ ಹೇಲ್ಸ್ ಅವರ ದಾಖಲೆಯ ಜೊತೆಯಾಟ (2022ರ ಟೂರ್ನಿಯಲ್ಲಿ ಭಾರತದ ವಿರುದ್ಧ)



47
ಬಾಂಗ್ಲಾದೇಶದ ಶಕೀಬ್ ಅಲ್ ಹಸನ್ ಗಳಿಸಿದ ಒಟ್ಟು ಗರಿಷ್ಠ ವಿಕೆಟ್‌ಗಳು

8ಕ್ಕೆ 6
ಶ್ರೀಲಂಕಾದ ಅಜಂತಾ ಮೆಂಡಿಸ್ ಪಂದ್ಯವೊಂದರಲ್ಲಿ ಗಳಿಸಿದ ವಿಕೆಟ್‌ಗಳು (2012ರ ಟೂರ್ನಿಯಲ್ಲಿ ಬಾಂಗ್ಲಾದೇಶದ ವಿರುದ್ಧ)



16
ಟೂರ್ನಿಯೊಂದರಲ್ಲಿ (2021) ಶ್ರೀಲಂಕಾದ ವನಿಂದು ಹಸರಂಗ ಗಳಿಸಿದ ಒಟ್ಟು ಗರಿಷ್ಠ ವಿಕೆಟ್‌ಗಳು

6ಕ್ಕೆ 260
ಶ್ರೀಲಂಕಾ ತಂಡವು ಗಳಿಸಿದ ಗರಿಷ್ಠ ಮೊತ್ತ (2007ರಲ್ಲಿ ಕೆನ್ಯಾ ವಿರುದ್ಧ)



23
ದಕ್ಷಿಣ ಆಫ್ರಿಕಾದ ಎ.ಬಿ. ಡಿವಿಲಿಯರ್ಸ್ ಪಡೆದಿರುವ ಕ್ಯಾಚ್‌ಗಳು. ಇದು ಫೀಲ್ಡರ್‌ರೊಬ್ಬರು ಪಡೆದ ಗರಿಷ್ಠ ಕ್ಯಾಚ್ ಇದಾಗಿದೆ

79
ನೆದರ್ಲೆಂಡ್ಸ್ ತಂಡವು ಗಳಿಸಿದ ಕನಿಷ್ಠ ಮೊತ್ತ (2014ರಲ್ಲಿ ಶ್ರೀಲಂಕಾ ವಿರುದ್ಧ)



32
ಭಾರತದ ಮಹೇಂದ್ರ ಸಿಂಗ್ ಧೋನಿ ಪಡೆದ ಒಟ್ಟು ಕ್ಯಾಚ್ ಮತ್ತು ಸ್ಟಂಪಿಂಗ್. ಇದು ವಿಕೆಟ್ ಕೀಪರ್‌ರೊಬ್ಬರ ಗರಿಷ್ಠ ಸಾಧನೆಯಾಗಿದೆ

459
ಪಂದ್ಯವೊಂದರಲ್ಲಿ ದಾಖಲಾದ ಒಟ್ಟು ಗರಿಷ್ಠ ರನ್ (2016ರಲ್ಲಿ ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಪಂದ್ಯ) ಎರಡು ಇನ್ನಿಂಗ್ಸ್ ಸೇರಿ

ಆಧಾರ: ಕ್ರೀಡಾ ವೆಬ್‌ಸೈಟ್‌ಗಳು

2022ರ ಆವೃತ್ತಿಯ ಬಹುಮಾನ ಮೊತ್ತ

₹13 ಕೋಟಿ (16 ಲಕ್ಷ ಡಾಲರ್) ಚಾಂಪಿಯನ್ ತಂಡ

₹6.50 ಕೋಟಿ (8 ಲಕ್ಷ ಡಾಲರ್) ರನ್ನರ್ಸ್ ಅಪ್ ತಂಡ



ಅಮೆರಿಕ ತಂಡದ ಅಲಿಖಾನ್ ಮತ್ತು ಮೊನಾಂಕ್ ಪಟೇಲ್

ಜೂನ್ 12ರಂದು ನ್ಯೂಯಾರ್ಕ್‌ನ ನಾಸೌ ಕೌಂಟಿ ಮೈದಾನದಲ್ಲಿ ನಡೆಯಲಿರುವ ಭಾರತ ಮತ್ತು ಅಮೆರಿಕ ನಡುವಣ ಪಂದ್ಯವನ್ನು ವೀಕ್ಷಿಸಲು ಕ್ರಿಕೆಟ್ ಪ್ರಿಯರು ತುದಿಗಾಲಿನಲ್ಲಿ ನಿಂತಿದ್ದಾರೆ. ಅದರಲ್ಲೂ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಕ್ರಿಕೆಟ್‌ಪ್ರೇಮಿಗಳ ಕುತೂಹಲ ಮುಗಿಲುಮುಟ್ಟಿದೆ. ಏಕೆಂದರೆ; ಈ ಊರಿನ ನಾಸ್ತುಷ್ ಪ್ರದೀಪ್ ಕೆಂಜಿಗೆ ಅಮೆರಿಕ ತಂಡದಲ್ಲಿ ಆಡಲಿದ್ದಾರೆ.

ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡದ ಎದುರು ತನ್ನ ಪ್ರತಿಭೆ ತೋರಲು ಸಿದ್ಧವಾಗಿದ್ದಾರೆ ಕನ್ನಡಿಗ ನಾಸ್ತುಷ್. ಎಡಗೈ ಸ್ಪಿನ್ನರ್ ನಾಸ್ತುಷ್ ಅವರು ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ರಿಷಭ್ ಪಂತ್ ಹಾಗೂ ಸೂರ್ಯಕುಮಾರ್ ಯಾದವ್ ಅವರಂತಹ ನುರಿತ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಕಾತರದಿಂದ ಕಾದಿದ್ದಾರೆ. ಇವರಷ್ಟೇ ಅಲ್ಲ ಈ ಬಾರಿಯ ಟಿ20 ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಿರುವ ಅಮೆರಿಕದ ತಂಡದಲ್ಲಿ ಅರ್ಧಕ್ಕರ್ಧ ಭಾರತೀಯ ಹುಡುಗರೇ ಇದ್ದಾರೆ. ಅವರೆಲ್ಲರೂ ತಮ್ಮ ನೆಚ್ಚಿನ ತಾರೆಗಳ ಎದುರು ತೊಡೆ ತಟ್ಟಲು ಸಿದ್ಧವಾಗಿದ್ದಾರೆ.

ನಿತೀಶ್ ಕುಮಾರ್, ಮಿಲಿಂದ್ ಕುಮಾರ್ (2019ರಲ್ಲಿ ಆರ್‌ಸಿಬಿ ತಂಡದಲ್ಲಿದ್ದರು), ನಿಸರ್ಗ್ ಪಟೇಲ್, ಸೌರಭ್ ನಟವಾಳ್ಕರ್, ಜಸ್‌ದೀಪ್ ಸಿಂಗ್, ಹರ್ಮೀತ್ ಸಿಂಗ್ ಅವರಿದ್ದ ತಂಡವು ಈಚೆಗೆ ಬಾಂಗ್ಲಾದೇಶದ ವಿರುದ್ಧ ಸರಣಿ ಜಯಿಸಿದೆ. ಬೇರೆ ಬೇರೆ ಉದ್ಯೋಗಗಳಲ್ಲಿರುವ ಇವರೆಲ್ಲರಿಗೂ ಕ್ರಿಕೆಟಿಗರಾಗುವ ಕನಸು ಸಾಕಾರಗೊಳಿಸಿಕೊಳ್ಳಲು ಅಮೆರಿಕದಲ್ಲಿ ಅವಕಾಶಸಿಕ್ಕಿದೆ.



ಮೂಡಿಗೆರೆ ನಾಸ್ತುಷ್ ಕೆಂಜಿಗೆ

ದಶಕಗಳ ಹಿಂದೆ ಉದ್ಯೋಗ ಅರಸಿ ಭಾರತೀಯರು ಅಮೆರಿಕಕ್ಕೆ ಹೋಗುತ್ತಿದ್ದರು. ಅದರಲ್ಲೂ ಭಾರತದ ಮಧ್ಯಮ ವರ್ಗದ ವಿದ್ಯಾವಂತರ 'ಡಾಲರ್ ಡ್ರೀಮ್ಸ್' ಹಲವು ಕಥೆ, ಕಾದಂಬರಿ ಹಾಗೂ ಸಿನಿಮಾಗಳಿಗೆ ಗ್ರಾಸವಾಗಿದೆ. ಈಗ ಕ್ರಿಕೆಟ್ ಆಡಲೂ ಭಾರತೀಯರು ಅಮೆರಿಕ, ಕೆನಡಾ ಹಾಗೂ ಮತ್ತಿತರ ದೇಶಗಳತ್ತ ಮುಖ ಮಾಡಿದ್ದಾರೆ. ಜೂನ್ 2ರಿಂದ ಆರಂಭವಾಗಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಯುರೋಪ್, ಆಫ್ರಿಕಾ ಹಾಗೂ ಅಮೆರಿಕ ತಂಡಗಳಲ್ಲಿ ಭಾರತದವರು ಇದ್ದಾರೆ. ಅಷ್ಟೇ ಅಲ್ಲ. ಪಾಕಿಸ್ತಾನ, ಬಾಂಗ್ಲಾ ಮತ್ತು ಅಫ್ಗಾನಿಸ್ತಾನ ಮೂಲದವರೂ ಇದ್ದಾರೆ. ಅಮೆರಿಕ ತಂಡದಲ್ಲಿಯೇ ಪಾಕಿಸ್ತಾನದ ಅಲಿಖಾನ್ ಮತ್ತು ಭಾರತೀಯ ಆಟಗಾರರು ಜೊತೆಗೆ ಆಡುತ್ತಿರುವುದು ವಿಶೇಷ.

ಕೆನಡಾ ತಂಡದಲ್ಲಿ ದಾವಣಗೆರೆ ಮೂಲದ ಶ್ರೇಯಸ್ ಮೊವ್ವ ಆಡುತ್ತಿದ್ದಾರೆ. ಅವರು ದಾವಣಗೆರೆಯಲ್ಲಿ ಹುಟ್ಟಿ ಬೆಳೆದಿರುವ ಶ್ರೇಯಸ್, ಎಂ.ಜಿ.ವಾಸುದೇವ ರೆಡ್ಡಿ ಹಾಗೂ ನಿವೃತ್ತ ಶಿಕ್ಷಕಿ ಎನ್.ಯಶೋದಾ ಅವರ ಮಗ.

ಡಾಲರ್ ಮಾರುಕಟ್ಟೆ..

ಭಾರತದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆರಂಭವಾದ ನಂತರ ಹಣದ ಹೊಳೆಯೇ ಈ ಆಟದತ್ತ ಹರಿದು ಬರುತ್ತಿದೆ. ಪ್ರಾಯೋಜಕರೆಲ್ಲರಿಗೂ ಐಪಿಎಲ್ ಮತ್ತು ಟಿ20 ಕ್ರಿಕೆಟ್ ಎಂದರೆ ಪಂಚಪ್ರಾಣವಾಗಿದೆ. ಈ ಮಾದರಿಯು ಯುವಸಮುದಾಯವನ್ನು ಬಹುವಾಗಿ ಆಕರ್ಷಿಸಿದೆ. ಮನರಂಜನೆಯ ಆಗರವಾಗಿರುವ ಈ ಮಾದರಿಯನ್ನು ಅಮೆರಿಕ ಮತ್ತು ಯುರೋಪ್ ದೇಶಗಳಲ್ಲಿ ಜನಪ್ರಿಯಗೊಳಿಸಿದರೆ ಬಹುದೊಡ್ಡ ಮಾರುಕಟ್ಟೆಯೊಂದು ಉದ್ಯಮಿಗಳಿಗೆ ದೊರೆಯಲಿದೆ.

ಆ ಮೂಲಕ ಕ್ರಿಕೆಟ್‌ಗೆ ಮತ್ತಷ್ಟು ಹಣ ಹರಿದುಬರಲಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ಗೆ (ಐಸಿಸಿ) ಹೆಚ್ಚಿನ ಆದಾಯ ಹರಿದುಬರಲಿದೆ. ಭಾರತದಲ್ಲಿ ಕ್ರಿಕೆಟ್ ಅಪಾರ ಜನಪ್ರಿಯ ಆಟವಾಗಿದೆ. ಆದ್ದರಿಂದ ಕ್ರಿಕೆಟ್ ಮೂಲಕ ಪ್ರಚಾರ ಗಿಟ್ಟಿಸಿ ಭಾರತದ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಬೇರೆ ದೇಶಗಳ ಪ್ರಾಯೋಜಕರು ಆಕರ್ಷಿತರಾಗಲಿದ್ದಾರೆಂಬ ಲೆಕ್ಕಾಚಾರದಲ್ಲಿ ಐಸಿಸಿ ಇದೆ. ಈ ಟೂರ್ನಿಯಿಂದ ಅಧಿಕೃತ ಪ್ರಸಾರ ಹಕ್ಕು ಹೊಂದಿರುವ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯು ₹1000 ಕೋಟಿಗೂ ಹೆಚ್ಚಿನ ಆದಾಯದ ನಿರೀಕ್ಷೆಯಲ್ಲಿದೆ.

ಈ ಎಲ್ಲ ಲೆಕ್ಕಾಚಾರಗಳಾಚೆ; ಅಮೆರಿಕದ ಹೊಸ ತಾಣಗಳಲ್ಲಿ ನಡೆಯುವ ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸಲು ಜನರೂ ಸಿದ್ಧರಾಗಿದ್ದಾರೆ. ಈ ಟೂರ್ನಿಯಲ್ಲಿ ನಡೆಯಲಿರುವ ಒಟ್ಟು 55 ಪಂದ್ಯಗಳಲ್ಲಿ 16 ಮಾತ್ರ ಅಮೆರಿಕದ ಮೂರು ತಾಣಗಳಲ್ಲಿ ನಡೆಯಲಿವೆ. ಅದರೂ ಈ ಪಂದ್ಯಗಳ ಆಕರ್ಷಣೆಯೇ ಹೆಚ್ಚಿದೆ.

ಒಲಿಂಪಿಕ್ಸ್ ಕನಸು..

ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿಯಾಗಿ ಆಯೋಜಿಸುತ್ತಿರುವ ಈ ಬಾರಿಯ ಟಿ20 ವಿಶ್ವಕಪ್ ಟೂರ್ನಿಯು ಒಲಿಂಪಿಕ್ ಕೂಟಕ್ಕೆ ಕ್ರಿಕೆಟ್ ಸೇರ್ಪಡೆಯ ಮೊದಲ ಮೆಟ್ಟಿಲಾಗುವ ನಿರೀಕ್ಷೆ ಇದೆ.

ದಶಕಗಳಿಂದ ಏಷ್ಯಾ ದೇಶಗಳು, ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಲ್ಲಿ ಕ್ರಿಕೆಟ್ ಜನಪ್ರಿಯತೆ ಗಳಿಸಿದೆ. ಆದರೆ ಕ್ರಿಕೆಟ್ ಪಂದ್ಯಗಳ ಸುದೀರ್ಘ ಅವಧಿಯಿಂದಾಗಿ (ಏಕದಿನ ಮತ್ತು ಟೆಸ್ಟ್ ಮಾದರಿಗಳು) ಒಲಿಂಪಿಕ್ಸ್ ಅರ್ಹತೆ ಪಡೆಯಲಿಲ್ಲ. ಅಲ್ಲದೇ ಈ ಕ್ರೀಡೆಯನ್ನು ಆಡುವ ದೇಶಗಳ ಸಂಖ್ಯೆಯೂ ಕಡಿಮೆ ಎನ್ನಲಾಗಿತ್ತು. ಆದರೆ 20 ವರ್ಷದ ಹಿಂದೆ ಟಿ20 ಮಾದರಿ ಆರಂಭವಾದಾಗ ಮತ್ತೆ ಒಲಿಂಪಿಕ್ಸ್ ಅರ್ಹತೆ ಗಿಟ್ಟಿಸುವ ಕನಸು ಚಿಗುರೊಡೆಯಿತು.

ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಈಗಾಗಲೇ ಟಿ20 ಕ್ರಿಕೆಟ್ ಹೆಜ್ಜೆಗುರುತು ಮೂಡಿಸಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ❖

ವರದಿ: ಗಿರೀಶ ದೊಡ್ಡಮನಿ, ಕೆ.ಎಸ್. ಸುನಿಲ್, ಪ್ರದೀಶ್ ಎಚ್. ಮರೋಡಿ

ಅಮೆರಿಕದಲ್ಲಿ ಕ್ರಿಕೆಟ್...

18ನೇ ಶತಮಾನದಲ್ಲಿಯೇ ಅಮೆರಿಕದಲ್ಲಿ ಕ್ರಿಕೆಟ್ ಪಂದ್ಯ ನಡೆದ ದಾಖಲೆಗಳು ಇವೆ.

ನ್ಯೂಯಾರ್ಕ್‌ನಲ್ಲಿ 1844ರಲ್ಲಿ ಮೊದಲ ಅಂತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯವು ಅಮೆರಿಕ ಮತ್ತು ಕೆನಡಾದ ನಡುವೆ ನಡೆದಿತ್ತು. ಅದೇ ತಾಣದಲ್ಲಿ ಈ ವಿಶ್ವಕಪ್ ಟೂರ್ನಿಯ ನಾಲ್ಕನೇ ಪಂದ್ಯವು ನಡೆಯಲಿದ್ದು, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ಮುಖಾಮುಖಿಯಾಗಲಿವೆ. ಆ ಕಾಲದಲ್ಲಿ ಕ್ರಿಕೆಟ್ ಮಾದರಿಯು ಸುದೀರ್ಘವಾಗಿತ್ತು.

1860ರ ನಂತರ ಬೇಸ್‌ಬಾಲ್ ಹೆಚ್ಚು ಜನಪ್ರಿಯವಾಗುತ್ತಿದ್ದಂತೆ ಕ್ರಿಕೆಟ್ ಖ್ಯಾತಿ ಕಡಿಮೆಯಾಗತೊಡಗಿತು. 1914ರ ನಂತರ ಕ್ರಿಕೆಟ್ ಚಟುವಟಿಕೆಗಳು ಬಹುತೇಕ ಸ್ಥಗಿತವಾದವು.

ಟಿ20 ವಿಶ್ವಕಪ್ ಕ್ರಿಕೆಟ್: ಈವರೆಗೆ ಪ್ರಶಸ್ತಿ ಗೆದ್ದವರು

ವರ್ಷ	ಆತಿಥ್ಯ	ಗೆದ್ದ ತಂಡ	ರನ್ನರ್ಸ್ ಅಪ್	ಒಟ್ಟು ತಂಡಗಳು
2007	ದಕ್ಷಿಣ ಆಫ್ರಿಕಾ	ಭಾರತ	ಪಾಕಿಸ್ತಾನ	12
2009	ಇಂಗ್ಲೆಂಡ್	ಪಾಕಿಸ್ತಾನ	ಶ್ರೀಲಂಕಾ	12
2010	ವೆಸ್ಟ್ ಇಂಡೀಸ್	ಇಂಗ್ಲೆಂಡ್	ಆಸ್ಟ್ರೇಲಿಯಾ	12
2012	ಶ್ರೀಲಂಕಾ	ವೆಸ್ಟ್ ಇಂಡೀಸ್	ಶ್ರೀಲಂಕಾ	12
2014	ಬಾಂಗ್ಲಾದೇಶ	ಶ್ರೀಲಂಕಾ	ಭಾರತ	16
2016	ಭಾರತ	ವೆಸ್ಟ್ ಇಂಡೀಸ್	ಇಂಗ್ಲೆಂಡ್	16
2021	ಯುಎಇ/ಒಮನ್	ಆಸ್ಟ್ರೇಲಿಯಾ	ನ್ಯೂಜಿಲೆಂಡ್	16
2022	ಆಸ್ಟ್ರೇಲಿಯಾ	ಇಂಗ್ಲೆಂಡ್	ಪಾಕಿಸ್ತಾನ	16

1999ರಲ್ಲಿ ಅಮೆರಿಕದಲ್ಲಿ ಆಡಿದ್ದ ಕನ್ನಡಿಗರು

ಭಾರತದ ಎ ಕ್ರಿಕೆಟ್ ತಂಡವು 1999ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ಮೂವ್ ಅಮೆರಿಕ ಚಾಲೆಂಜ್ ಕ್ರಿಕೆಟ್ ಸರಣಿ ಆಡಿತ್ತು. ಆ ತಂಡದಲ್ಲಿ ಕರ್ನಾಟಕದ ದೊಡ್ಡ ಗಣೇಶ್ ಮತ್ತು ವಿಜಯ್ ಭಾರದ್ವಾಜ್ ಆಡಿದ್ದರು.

ಆಸ್ಟ್ರೇಲಿಯಾ ಎ ವಿರುದ್ಧ ನಡೆದಿದ್ದ ಸರಣಿಯಲ್ಲಿ ವಿವಿಎಸ್ ಲಕ್ಷ್ಮಣ್ ಭಾರತ ಎ ತಂಡವನ್ನು ಮುನ್ನಡೆಸಿದ್ದರು.

ವೀರೇಂದ್ರ ಸೆಹ್ವಾಗ್, ಹರಭಜನ್ ಸಿಂಗ್, ಮೊಹಮ್ಮದ್ ಕೈಫ್, ಆಶಿಶ್ ನೆಹ್ರಾ ಕೂಡ ಆ ತಂಡದಲ್ಲಿ ಆಡಿದ್ದರು.

'ಅಮೆರಿಕದಲ್ಲಿ ಕ್ರಿಕೆಟ್ ಜನಪ್ರಿಯಗೊಳಿಸುವ ಪ್ರಯತ್ನ ಮೊದಲಿನಿಂದಲೂ ನಡೆದಿದೆ. ಅದರ ಅಂಗವಾಗಿಯೇ ನಮ್ಮ ತಂಡವನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಅದೊಂದು ಅವಿಸ್ಮರಣೀಯ ಟೂರ್ನಿಯಾಗಿತ್ತು. ಅಂದು ಎ ತಂಡದಲ್ಲಿ ಆಡಿದ್ದ ಬಹುತೇಕರು ನಂತರ ರಾಷ್ಟ್ರೀಯ ತಂಡದಲ್ಲಿಯೂ ಆಡಿದ್ದೆವು. ಇದೀಗ ಟಿ20 ಮಾದರಿ ಇರುವುದರಿಂದ ಅಲ್ಲಿಯ ಜನರು ಕ್ರಿಕೆಟ್‌ನತ್ತ ಹೆಚ್ಚು ಆಕರ್ಷಿತರಾಗುವ ಭರವಸೆ ಇದೆ' ಎಂದು ಮಾಜಿ ಕ್ರಿಕೆಟಿಗ ದೊಡ್ಡ ಗಣೇಶ್ ಹೇಳುತ್ತಾರೆ.

ಸ್ಪರ್ಧಿಸುವ ತಂಡಗಳು

ಎ ಗುಂಪು: ಭಾರತ, ಪಾಕಿಸ್ತಾನ, ಅಮೆರಿಕ, ಕೆನಡಾ, ಐರ್ಲೆಂಡ್
ಬಿ ಗುಂಪು: ಆಸ್ಟ್ರೇಲಿಯಾ, ನಮೀಬಿಯಾ, ಸ್ಕಾಟ್ಲೆಂಡ್, ಒಮಾನ್, ಇಂಗ್ಲೆಂಡ್
ಸಿ ಗುಂಪು: ವೆಸ್ಟ್ ಇಂಡೀಸ್, ಅಫ್ಗಾನಿಸ್ತಾನ, ಉಗಾಂಡ, ಪಾಪುವಾ ನ್ಯೂಗಿನಿ, ನ್ಯೂಜಿಲೆಂಡ್
ಡಿ ಗುಂಪು: ನೆದರ್ಲೆಂಡ್ಸ್, ನೇಪಾಳ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬಾಂಗ್ಲಾದೇಶ

ಐಸಿಸಿ ಟಿ20 ವಿಶ್ವಕಪ್ ವೇಳಾಪಟ್ಟಿ –2024

ಜೂನ್ 2024

ದಿನ	ಪಂದ್ಯ	ಸಮಯ	ಸ್ಥಳ
2	ಅಮೆರಿಕ–ಕೆನಡಾ	ಬೆಳಿಗ್ಗೆ 6	ಡಲ್ಲಾಸ್
2	ವೆಸ್ಟ್ ಇಂಡೀಸ್–ಪಾಪುವಾ ನ್ಯೂಗಿನಿ	ರಾತ್ರಿ 8	ಗಯಾನಾ
3	ನಮಿಬಿಯಾ–ಒಮನ್	ಬೆಳಿಗ್ಗೆ 6	ಬಾರ್ಬೊಡಸ್
3	ಶ್ರೀಲಂಕಾ–ದಕ್ಷಿಣ ಆಫ್ರಿಕಾ	ರಾತ್ರಿ 8	ನ್ಯೂಯಾರ್ಕ್
4	ಅಫ್ಗಾನಿಸ್ತಾನ–ಉಗಾಂಡ	ಬೆಳಿಗ್ಗೆ 6	ಗಯಾನಾ
4	ಇಂಗ್ಲೆಂಡ್–ಸ್ಕಾಟ್ಲೆಂಡ್	ರಾತ್ರಿ 8	ಬಾರ್ಬೊಡಸ್
4	ನೆದರ್ಲೆಂಡ್ಸ್–ನೇಪಾಳ	ರಾತ್ರಿ 9	ಡಲ್ಲಾಸ್
5	ಭಾರತ–ಐರ್ಲೆಂಡ್	ರಾತ್ರಿ 8	ನ್ಯೂಯಾರ್ಕ್
6	ಪಾಪುವಾ ನ್ಯೂಗಿನಿ–ಉಗಾಂಡ	ಬೆಳಿಗ್ಗೆ 5	ಗಯಾನಾ
6	ಆಸ್ಟ್ರೇಲಿಯಾ–ಒಮನ್	ಬೆಳಿಗ್ಗೆ 6	ಬಾರ್ಬೊಡಸ್
6	ಅಮೆರಿಕ–ಪಾಕಿಸ್ತಾನ	ರಾತ್ರಿ 9	ಡಲ್ಲಾಸ್
7	ನಮಿಬಿಯಾ–ಸ್ಕಾಟ್ಲೆಂಡ್	ರಾತ್ರಿ 12.30	ಬಾರ್ಬೊಡಸ್
7	ಕೆನಡಾ–ಐರ್ಲೆಂಡ್	ರಾತ್ರಿ 8	ನ್ಯೂಯಾರ್ಕ್
8	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಬೆಳಿಗ್ಗೆ 5	ಗಯಾನಾ
8	ಶ್ರೀಲಂಕಾ–ಬಾಂಗ್ಲಾದೇಶ	ಬೆಳಿಗ್ಗೆ 6	ಡಲ್ಲಾಸ್
8	ನೆದರ್ಲೆಂಡ್ಸ್–ದಕ್ಷಿಣ ಆಫ್ರಿಕಾ	ರಾತ್ರಿ 8	ನ್ಯೂಯಾರ್ಕ್
8	ಆಸ್ಟ್ರೇಲಿಯಾ–ಇಂಗ್ಲೆಂಡ್	ರಾತ್ರಿ 10.30	ಬಾರ್ಬೊಡಸ್
9	ವೆಸ್ಟ್ ಇಂಡೀಸ್ -ಉಗಾಂಡಾ	ಗಯಾನಾ	ಬೆಳಿಗ್ಗೆ 6
9	ಭಾರತ–ಪಾಕಿಸ್ತಾನ	ರಾತ್ರಿ 8	ನ್ಯೂಯಾರ್ಕ್
9	ಒಮನ್–ಸ್ಕಾಟ್ಲೆಂಡ್	ರಾತ್ರಿ 10.30	ಆ್ಯಂಟಿಗಾ
10	ದಕ್ಷಿಣ ಆಫ್ರಿಕಾ–ಬಾಂಗ್ಲಾದೇಶ	ರಾತ್ರಿ 8	ನ್ಯೂಯಾರ್ಕ್
11	ಪಾಕಿಸ್ತಾನ–ಕೆನಡಾ	ರಾತ್ರಿ 8	ನ್ಯೂಯಾರ್ಕ್
12	ಶ್ರೀಲಂಕಾ–ನೇಪಾಳ	ಬೆಳಿಗ್ಗೆ 5	ಫ್ಲೋರಿಡಾ
12	ಆಸ್ಟ್ರೇಲಿಯಾ–ನಮಿಬಿಯಾ	ಬೆಳಿಗ್ಗೆ 6	ಆ್ಯಂಟಿಗಾ
12	ಅಮೆರಿಕ–ಭಾರತ	ರಾತ್ರಿ 8	ನ್ಯೂಯಾರ್ಕ್
13	ವೆಸ್ಟ್ ಇಂಡೀಸ್–ನ್ಯೂಜಿಲೆಂಡ್	ಬೆಳಿಗ್ಗೆ 6	ಟ್ರಿನಿಡಾಡ್
13	ಬಾಂಗ್ಲಾದೇಶ–ನೆದರ್ಲೆಂಡ್ಸ್	ರಾತ್ರಿ 8	ಸೇಂಟ್ ವಿನ್ಸೆಂಟ್
14	ಇಂಗ್ಲೆಂಡ್–ಒಮನ್	ರಾತ್ರಿ 12.30	ಆ್ಯಂಟಿಗಾ
14	ಅಫ್ಗಾನಿಸ್ತಾನ–ಪಾಪುವಾ ನ್ಯೂಗಿನಿ	ಬೆಳಿಗ್ಗೆ 6	ಟ್ರಿನಿಡಾಡ್
14	ಅಮೆರಿಕ–ಐರ್ಲೆಂಡ್	ರಾತ್ರಿ 8	ಫ್ಲೋರಿಡಾ
15	ದಕ್ಷಿಣ ಆಫ್ರಿಕಾ–ನೇಪಾಳ	ಬೆಳಿಗ್ಗೆ 5	ಸೇಂಟ್ ವಿನ್ಸೆಂಟ್
15	ನ್ಯೂಜಿಲೆಂಡ್–ಉಗಾಂಡ	ಬೆಳಿಗ್ಗೆ 6	ಟ್ರಿನಿಡಾಡ್
15	ಭಾರತ–ಕೆನಡಾ	ರಾತ್ರಿ 8	ಫ್ಲೋರಿಡಾ
15	ನಮಿಬಿಯಾ–ಇಂಗ್ಲೆಂಡ್	ರಾತ್ರಿ 10.30	ಆ್ಯಂಟಿಗಾ
16	ಆಸ್ಟ್ರೇಲಿಯಾ–ಸ್ಕಾಟ್ಲೆಂಡ್	ಬೆಳಿಗ್ಗೆ 6	ಸೇಂಟ್ ಲೂಸಿಯಾ
16	ಪಾಕಿಸ್ತಾನ–ಐರ್ಲೆಂಡ್	ರಾತ್ರಿ 8	ಫ್ಲೋರಿಡಾ
17	ಬಾಂಗ್ಲಾದೇಶ–ನೇಪಾಳ	ಬೆಳಿಗ್ಗೆ 5	ಸೇಂಟ್ ವಿನ್ಸೆಂಟ್
17	ಶ್ರೀಲಂಕಾ–ನೆದರ್ಲೆಂಡ್ಸ್	ಬೆಳಿಗ್ಗೆ 6	ಸೇಂಟ್ ಲೂಸಿಯಾ
17	ನ್ಯೂಜಿಲೆಂಡ್–ಪಾಪುವಾ ನ್ಯೂಗಿನಿ	ರಾತ್ರಿ 8	ಟ್ರಿನಿಡಾಡ್
18	ವೆಸ್ಟ್ ಇಂಡೀಸ್–ಅಫ್ಗಾನಿಸ್ತಾನ	ಬೆಳಿಗ್ಗೆ 6	ಸೇಂಟ್ ಲೂಸಿಯಾ
19	ಎ2–ಡಿ1	ರಾತ್ರಿ 8	ಆ್ಯಂಟಿಗಾ
20	ಬಿ1–ಸಿ2	ಬೆಳಿಗ್ಗೆ 6	ಸೇಂಟ್ ಲೂಸಿಯಾ
20	ಸಿ1–ಎ1	ರಾತ್ರಿ 8	ಬಾರ್ಬೊಡಸ್
21	ಬಿ2–ಡಿ2	ಬೆಳಿಗ್ಗೆ 6	ಆ್ಯಂಟಿಗಾ
21	ಬಿ1–ಡಿ1	ರಾತ್ರಿ 8	ಸೇಂಟ್ ಲೂಸಿಯಾ
22	ಎ2–ಸಿ2	ಬೆಳಿಗ್ಗೆ 6	ಬಾರ್ಬೊಡಸ್
22	ಎ1–ಡಿ2	ರಾತ್ರಿ 8	ಆ್ಯಂಟಿಗಾ
23	ಸಿ1–ಬಿ2	ಬೆಳಿಗ್ಗೆ 6	ಸೇಂಟ್ ವಿನ್ಸೆಂಟ್
23	ಎ2–ಬಿ1	ರಾತ್ರಿ 8	ಬಾರ್ಬೊಡಸ್
24	ಸಿ2–ಡಿ1	ಬೆಳಿಗ್ಗೆ 6	ಆ್ಯಂಟಿಗಾ
24	ಬಿ2–ಎ1	ರಾತ್ರಿ 8	ಸೇಂಟ್ ಲೂಸಿಯಾ
25	ಸಿ1–ಡಿ2	ಬೆಳಿಗ್ಗೆ 6	ಸೇಂಟ್ ವಿನ್ಸೆಂಟ್
27	ಸೆಮಿಫೈನಲ್ 1	ಬೆಳಿಗ್ಗೆ 6	ಟ್ರಿನಿಡಾಡ್
27	ಸೆಮಿಫೈನಲ್ 2	ರಾತ್ರಿ 8	ಗಯಾನಾ
29	ಫೈನಲ್	ರಾತ್ರಿ 8	ಬಾರ್ಬೊಡಸ್



ಟಿ20 ವಿಶ್ವಕಪ್: ಗರಿಷ್ಠ ರನ್ ದಾಖಲೆ

ಬ್ಯಾಟರ್	ದೇಶ	ಪಂದ್ಯ	ರನ್	ಸ್ಟ್ರೈಕ್‌ರೇಟ್
ವಿರಾಟ್ ಕೊಹ್ಲಿ	ಭಾರತ	27	1141	131.30
ಮಹೇಲಾ ಜಯವರ್ಧನೆ	ಶ್ರೀಲಂಕಾ	31	1016	134.74
ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	33	965	142.75
ರೋಹಿತ್ ಶರ್ಮಾ	ಭಾರತ	39	963	127.88
ತಿಲಕರತ್ನೆ ದಿಲ್ಷನ್	ಶ್ರೀಲಂಕಾ	35	897	124.06

ಟಿ20 ವಿಶ್ವಕಪ್: ಗರಿಷ್ಠ ವಿಕೆಟ್ ದಾಖಲೆ

ಬೌಲರ್	ದೇಶ	ಪಂದ್ಯ	ವಿಕೆಟ್
ಶಕೀಬ್ ಅಲ್ ಹಸನ್	ಬಾಂಗ್ಲಾದೇಶ	36	47
ಶಾಹೀದ್ ಅಫ್ರಿದಿ	ಪಾಕಿಸ್ತಾನ	34	39
ಲಸಿತ್ ಮಾಲಿಂಗ	ಶ್ರೀಲಂಕಾ	31	38
ಸಯೀದ್ ಅಜ್ಮಲ್	ಪಾಕಿಸ್ತಾನ	23	36
ಅಜಂತಾ ಮೆಂಡಿಸ್	ಶ್ರೀಲಂಕಾ	21	35

ಹೀಗಿವೆ ಕ್ರೀಡಾಂಗಣಗಳು



ಗ್ರ್ಯಾಂಡ್ ಪ್ರೈರಿ ಸ್ಟೇಡಿಯಂ –ಎಎಫ್‌ಪಿ ಚಿತ್ರ


ಕ್ರೀಡಾಂಗಣ ಹೆಸರು	ಹಿಂದೆ ಪಂದ್ಯ ನಡೆದ ಸಂಖ್ಯೆ	ಪ್ರೇಕ್ಷಕರ ಸಾಮರ್ಥ್ಯ	ನಿರ್ಮಾಣ ವರ್ಷ
ಗ್ರ್ಯಾಂಡ್ ಪ್ರೈರಿ ಸ್ಟೇಡಿಯಂ (ಡಲ್ಲಾಸ್ ಅಮೆರಿಕ)	ಯಾವುದೇ ಪಂದ್ಯ ನಡೆದಿಲ್ಲ	7 ಸಾವಿರ	2022
ನಾಸೌ ಕೌಂಟಿ ಕ್ರಿಕೆಟ್ ಸ್ಟೇಡಿಯಂ (ಅಮೆರಿಕ)	ಯಾವುದೇ ಪಂದ್ಯ ನಡೆದಿಲ್ಲ	34 ಸಾವಿರ	2024
ಸೆಂಟ್ರಲ್ ಬ್ರೋವರ್ಡ್ ರೀಜನಲ್ ಪಾರ್ಕ್ ಸ್ಟೇಡಿಯಂ (ಅಮೆರಿಕ)	18	20 ಸಾವಿರ	2007
ಪ್ರಾವಿಡೆನ್ಸ್ ಕ್ರೀಡಾಂಗಣ (ವೆಸ್ಟ್ ಇಂಡೀಸ್)	29	15 ಸಾವಿರ	2006
ಕೆನ್ಸಿಂಗ್ಟನ್ ಓವಲ್ (ವೆಸ್ಟ್ ಇಂಡೀಸ್)	42	28 ಸಾವಿರ	1871
ಸರ್ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣ (ವೆಸ್ಟ್ ಇಂಡೀಸ್)	29	20 ಸಾವಿರ	2006
ಬ್ರಯನ್ ಲಾರಾ ಕ್ರೀಡಾಂಗಣ (ವೆಸ್ಟ್ ಇಂಡೀಸ್)	7	15 ಸಾವಿರ	2007
ಅರ್ನೋಸ್ ವೇಲ್ ಗ್ರೌಂಡ್ (ವೆಸ್ಟ್ ಇಂಡೀಸ್)	5	18 ಸಾವಿರ	1981
ಡರೆನ್ ಸ್ಯಾಮಿ ನ್ಯಾಷನಲ್ ಸ್ಟೇಡಿಯಂ (ವೆಸ್ಟ್ ಇಂಡೀಸ್)	35	20 ಸಾವಿರ	2002

ಆಧಾರ: ಕ್ರೀಡಾ ವೆಬ್‌ಸೈಟ್

ಪದಬಂಧ 5698 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಸಂಸಾರದ ಸೆರೆಯಿದು (5)
4.ಬೇಡಿಕೆಯನ್ನು ಹೀಗೆ ಹೇಳಿ (3)
6.ಏರುತಗ್ಗಿಲ್ಲದಿರುವುದು (3)
8.ಮಣ ಭಾರ ಹೊತ್ತಿರುವ ನಲ್ಲ (3)
9.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
10.ಶ್ರೀಗಂಧ ಇಲ್ಲಿದೆ (3)
11.ಮರದೊಳಗೆ ಸವಿಯಾದುದು ಬಂದಿದೆ (3)
13.ಆನೆಯ ದಾಡೆ (3)
14.ಬೆಳ್ಳಿ ಹಬ್ಬವಿದು (5)

ಮೇಲಿಂದ ಕೆಳಕ್ಕೆ
1.ಅದೇತಾನೆ ಬಿರಿದ ಹೂವು (4)
2.ಈ ಪರಿ ಬಂದಿರುವ ಅಳತೆ (4)
5.ಈ ತರ ತಮ್ಮನಿಗೆ ತೋರಿದ ಭೇದಭಾವ (4)
7.ಮಾನ ನಡುವಿಟ್ಟುಕೊಂಡು ಸರಿಸಮನಾಗಿರುವಿಕೆ (4)
10.ಚಂದ್ರ ಹುಟ್ಟುವಿಕೆ (4)
12.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)



5697ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಕಾಯಕ
4.ಕಡಿವಾಣ 6.ರುದ್ರಭೂಮಿ
8.ರಾಜ 9. ಜ್ಞಾನಿ
10.ಸಮಂಜಸ 12.ಮಧುಕರ
14.ತಿಕ್ಕಲು 15.ಗಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ಕಾರಣ
3.ಕರಾರು 5.ಡಿರಜ
7.ಮಿಸುನಿ 8.ರಾಯಸ
9.ಜ್ಞಾಪಕ 11.ಸವತಿ
12.ಮಹಲು 13.ರಮಣಿ

ಸುಡೊಕು 6083

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6082 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 1, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ನವಮಿ ಗಂ. 7-25 ನಂತರ ದಶಮಿ ಗಂ. 29-05 **ನಕ್ಷತ್ರ:** ಉತ್ತರಾಭಾದ್ರ ಗಂ. 27-16 **ಯೋಗ:** ಪ್ರೀತಿ ಗಂ. 15-10 **ಕರಣ:** ಗರ ಗಂ. 07-25, ವೃಷಭ ಮಾಸದ ನೇ 18 ದಿನ, ಮಳೆನಕ್ಷತ್ರ: ರೋಹಿಣಿ 3.
ರಾಹುಕಾಲ: ಬೆಳಿಗ್ಗೆ 09-00 – 10-30 **ಸೂರ್ಯೋದಯ:** 06-06 **ಸೂರ್ಯಾಸ್ತ:** 06-51
ಮುಸ್ಲಿಂ ದಿನಾಂಕ: 23 ಜುಲ್ಕಾಯದ್
ಅದೃಷ್ಟ ಸಂಖ್ಯೆ: 6, 5

ಮೇಷ: ಕಾರ್ಯಕ್ಷೇತ್ರದಲ್ಲಿ ನಾನಾ ಅಭಿವೃದ್ಧಿಯಿಂದ ಮನಸ್ಸು ಸಂತೃಪ್ತಗೊಳ್ಳಲಿದೆ. ಮಕ್ಕಳಿಗೆ ನೌಕರಿಯಲ್ಲಿನ ಬಡ್ತಿಯಿಂದಾಗಿ ಹೆಮ್ಮೆಪಡುವಿರಿ. ಆಂಜನೇಯನ ದರ್ಶನದಿಂದ ಎಲ್ಲಾ ಕಾರ್ಯಗಳು ನೆರವೇರುವುದು.

ವೃಷಭ: ಯಾತ್ರಿಕರಿಗೆ ದೇವರ ಕೃಪೆಯಿಂದಾಗಿ ಹೋದ ಕಡೆ ಎಲ್ಲಾ ಒಳ್ಳೆಯ ವ್ಯವಸ್ಥೆ ಸಿಗಲಿದೆ. ಕಾರ್ಯಕ್ಷೇತ್ರ ಬದಲಾವಣೆಗೆ ಯತ್ನಿಸುತ್ತಿರುವವರಿಗೆ ಸುಸಮಯ. ಜೀವನದಲ್ಲಿದ್ದ ದುಃಖಗಳೆಲ್ಲಾ ದೂರಾಗುವುವು.

ಮಿಥುನ: ಮಕ್ಕಳ ಏಳ್ಗೆಯನ್ನು ನೀವು ಕಾಣಬೇಕೆಂದು ಬಯಸುವುದು ಅವರ ಅರಿವಿಗೆ ಬಾರದೆ ಉಳಿಯುತ್ತದೆ. ಹಲವು ದಿನಗಳಿಂದ ಒಂದೇ ಯೋಜನೆ ಮೇಲೆ ಗಮನಹರಿಸಿ ಆದ ಆಯಾಸವು ಕಡಿಮೆಯಾಗುವುದು.

ಕರ್ಕಾಟಕ: ವ್ಯವಹಾರದಲ್ಲಿ ಎದುರಾಗುವ ಲಾಭನಷ್ಟಗಳನ್ನು ಸುಧಾರಿಸುವ ಮನಸ್ಸಾಗಲಿದೆ. ಕಲಾವಿದರಾದ ನೀವು ಕತೆ ಕವನಗಳ ಬರವಣಿಗೆ, ಪುಸ್ತಕಗಳ ಅಧ್ಯಯನದಲ್ಲಿ ಸಮಯ ಕಳೆಯುವಿರಿ.

ಸಿಂಹ: ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಗಮನ ಹರಿಸುವಿರಿ. ಯಾವುದೇ ಒತ್ತಡಗಳಿಗೆ ಸಿಲುಕಬೇಡಿ. ರಾಜಕೀಯ ಧುರೀಣರಿಗೆ ಈ ದಿನವು ಮೋಡ ಮುಸುಕಿದಂತಿರುವುದು.

ಕನ್ಯಾ: ರಕ್ತದಾನ ಮಾಡಲು ಬಯಸುವವರು ಅನಗತ್ಯ ಸಲಹೆಗಳಿಗೆ ಕಿವಿಗೊಡದಿರಿ. ನಿಮ್ಮ ಕೆಲಸಗಳಿಗೆ ಬೇರೆಯವರ ಮೇಲೆ ಅತಿಯಾದ ಅವಲಂಬನೆ ಬೇಡ. ನಿಮ್ಮ ಆತ್ಮಸ್ಥೈರ್ಯ ಹೆಚ್ಚಲಿದೆ.

ತುಲಾ: ಕೊನೆವರೆಗೆ ನಿಮ್ಮ ಜೊತೆಯಾಗಿ ನಿಲ್ಲುವಂತಹ ಸ್ನೇಹಿತರ ಸಂಪಾದನೆ ಮಾಡುವಿರಿ. ಈ ದಿನ ಮಕ್ಕಳಲ್ಲಿ ಉಂಟಾಗುವ ವಾಗ್ವಾದಗಳನ್ನು ನೀವೇ ಮಧ್ಯಪ್ರವೇಶ ಮಾಡಿ ನಿಲ್ಲಿಸುವುದು ಸೂಕ್ತ.

ವೃಶ್ಚಿಕ: ಚಿನ್ನಾಭರಣದ ಖರೀದಿಸಬೇಕಾದ ಪ್ರಸಂಗ ಎದುರಾಗಲಿದೆ. ಅಸೂಯೆ ಪಡುವ ಸಹೋದ್ಯೋಗಿ ಯಾರೆಂಬುದು ತಿಳಿಯುವುದು. ಯಾವುದೇ ಸಮಸ್ಯೆಗಳಿಗೆ ಈ ದಿನ ಸುಲಭವಾಗಿ ಉತ್ತರ ಸಿಗುವುದು.


ಧನು: ಅಬಕಾರಿ ಮತ್ತು ಪೊಲೀಸ್ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಲಿದೆ. ಅರ್ಧಕ್ಕೆ ನಿಂತ ನಿಮ್ಮ ಸ್ವಂತ ಕೆಲಸಗಳಿಗೆ ಈ ದಿನ ಮತ್ತೆ ಚಾಲನೆ ದೊರೆಯಲಿದೆ. ವ್ಯವಹಾರದ ವಿಷಯಗಳಿಂದಾಗಿ ಬಿಡುವಿಲ್ಲದ ಕೆಲಸಗಳು ಎದುರಾಗಲಿವೆ.

ಮಕರ: ಹಲವು ವಿಷಯಗಳ ಮೇಲೆ ಒಟ್ಟಿಗೆ ಗಮನ ಇಡುವುದರ ಬದಲು ಒಂದಾದ ಮೇಲೆ ಒಂದು ಮುಗಿಸುವುದು ಸೂಕ್ತ. ತಾಮಸ ಪ್ರವೃತ್ತಿಯ ಗುಣಗಳನ್ನು ಸಾತ್ವಿಕರ ಎದುರು ಪ್ರದರ್ಶಿಸಬೇಡಿ.

ಕುಂಭ: ಹವಾನಿಯಂತ್ರಣದ ವಾತಾವರಣವು ನಿಮಗೆ ಸರಿಹೋಗದೆ ಇರಬಹುದು. ನಿಮ್ಮ ಒಳ್ಳೆತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಉದ್ಯೋಗಸ್ಥ ಮಹಿಳೆಯರಿಗೆ ಬಡ್ತಿ ದೊರಕುವ ಸಂಭವವಿದೆ.

ಮೀನ: ನೀವು ಕೊಡುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ನಿಮ್ಮ ಮಕ್ಕಳು ಬಯಸುವುದು ಕೋಪ ತರಿಸಬಹುದು. ಮನೋರೋಗದಿಂದ ಬಳಲುತ್ತಿರು ವವರು ಆದಷ್ಟು ಬೇಗ ಚಿಕಿತ್ಸೆ ಪಡೆದುಕೊಳ್ಳಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,488
ಇಂದಿನ ಅಂತ್ಯ	22,530
▲	42
ದಿನದ ಗರಿಷ್ಠ	22,653

ವಿನಿಮಯ ದರ

$ ಡಾಲರ್	83.47
£ ಪೌಂಡ್	106.20
€ ಯುರೊ	90.52
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹960 (950)
ಸೂರ್ಯಕಾಂತಿ (ರಿಫೈನ್ಡ್)	₹970 (955)
ಪಾಮೋಲಿನ್	₹910 (900)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹8000-8970
ತಿಪಟೂರು	₹8500-8750

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹188
ಆರ್‌ಎಸ್‌ಎಸ್-5	₹181
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹171

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹332-499
ದ್ವಿತಳಿ (ಬಿ.ವಿ)	₹322-780

ಮುಂಬೈ ಧಾರಣೆ

ಶೇಂಗಾ

31-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (150)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	925 (915)
ಪಾಮ್ ವಾರದ ಡೆಲಿವರಿ	908 (898)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹**72,000** (72,000)
ಬೆಳ್ಳಿ ಕೆ.ಜಿ ₹**92,400** (92,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅಮೆರಿಕ ಸಂಸತ್ತಿಗೆ ಭಾರತ ಮೂಲದ ವೈದ್ಯ ಸ್ಪರ್ಧೆ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ವೈದ್ಯ ಡಾ.ಪ್ರಶಾಂತ್ ರೆಡ್ಡಿ ಕೆನ್ಸಸ್‌ನಿಂದ ರಿಪಬ್ಲಿಕನ್ ಪಾರ್ಟಿಯ ಅಭ್ಯರ್ಥಿಯಾಗಿ ಅಮೆರಿಕದ ಸಂಸತ್ತಿಗೆ ಸ್ಪರ್ಧಿಸುತ್ತಿದ್ದಾರೆ.

ಪ್ರಸ್ತುತ ಈ ಕ್ಷೇತ್ರವನ್ನು ಡೆಮಾಕ್ರಟ್ ಪಕ್ಷದ ಶರೈಸ್ ಡೇವಿಡ್ಸ್ ಪ್ರತಿನಿಧಿಸುತ್ತಿದ್ದಾರೆ. ಚೆನ್ನೈ ಮೂಲದ ವೈದ್ಯ ಪ್ರಶಾಂತ್ ರೆಡ್ಡಿ ಅವರಿಗೆ ಸ್ಪೀಕರ್ ಮೈಕ್ ಜಾನ್ಸನ್ ಸೇರಿದಂತೆ ರಿಪಬ್ಲಿಕನ್ ಪಾರ್ಟಿಯ ನೇತಾರರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಮುತ್ತೂಟ್ ಫೈನಾನ್ಸ್‌ಗೆ ₹1,182 ಕೋಟಿ ಲಾಭ

ನವದೆಹಲಿ (ಪಿಟಿಐ): ಚಿನ್ನದ ಮೇಲೆ ಸಾಲ ನೀಡುವ ಮುತ್ತೂಟ್ ಫೈನಾನ್ಸ್ ಲಿಮಿಟೆಡ್ 2023-24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹1,182 ಕೋಟಿ ನಿವ್ವಳ ಲಾಭ ಗಳಿಸಿದೆ.

2022-23ರ ಇದೇ ಅವಧಿಯಲ್ಲಿ ಕಂಪನಿ ₹1,009 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 17ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ವರಮಾನವು ₹3,298 ಕೋಟಿಯಿಂದ ₹4,179 ಕೋಟಿಗೆ ಏರಿಕೆಯಾಗಿದೆ. ವೆಚ್ಚವು ₹1,943 ಕೋಟಿಯಿಂದ ₹2,594 ಕೋಟಿಗೆ ಹೆಚ್ಚಳವಾಗಿದೆ. ಸಂಪತ್ತಿನ ನಿರ್ವಹಣಾ ಮೌಲ್ಯವು ಶೇ 25ರಷ್ಟು ಏರಿಕೆಯಾಗಿದ್ದು, ₹89,079 ಕೋಟಿಗೆ ಮುಟ್ಟಿದೆ. ಹಿಂದಿನ ಇದೇ ಅವಧಿಯಲ್ಲಿ ₹71,497 ಕೋಟಿಯಷ್ಟಿತ್ತು. ₹10 ಮುಖಬೆಲೆಯ ಪ್ರತಿ ಷೇರಿಗೆ ₹24 ಡಿವಿಡೆಂಟ್ ನೀಡಲು ಮಂಡಳಿ ನಿರ್ಧರಿಸಿದೆ.


ದೇಶದ ಆರ್ಥಿಕತೆಯು 3.5 ಲಕ್ಷ ಕೋಟಿ ಡಾಲರ್‌ಗೆ ಏರಿಕೆ: ಎನ್‌ಎಸ್‌ಒ

ಜಿಡಿಪಿ ಪ್ರಗತಿ: ಶೇ 8.2 ದಾಖಲು

ನವದೆಹಲಿ (ಪಿಟಿಐ): ‘ದೇಶದ ಜಿಡಿಪಿ ಬೆಳವಣಿಗೆ ದರವು 2023–24ರ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಶೇ 7.8ರಷ್ಟಾಗಿದೆ. ಇದೇ ಆರ್ಥಿಕ ವರ್ಷದ ಇನ್ನುಳಿದ ಮೂರು ತ್ರೈಮಾಸಿಕಗಳಿಗೆ ಹೋಲಿಸಿದರೆ ಕೊನೇ ತ್ರೈಮಾಸಿಕದ ಬೆಳವಣಿಗೆ ದರವು ಕನಿಷ್ಠ ಪ್ರಮಾಣದ್ದಾಗಿದೆ’ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಶುಕ್ರವಾರ ಹೇಳಿದೆ.

‘ಕೊನೇ ತ್ರೈಮಾಸಿಕದಲ್ಲಿ ಕಡಿಮೆ ಬೆಳವಣಿಗೆ ದರ ದಾಖಲಾಗಿದ್ದರೂ, ದೇಶದ ವಾರ್ಷಿಕ ಬೆಳವಣಿಗೆಯು ಶೇ 8.2ರಷ್ಟು ದಾಖಲಾಗಿದೆ. ತಯಾರಿಕಾ ವಲಯವು ಹೆಚ್ಚಿನ ಬೆಳವಣಿಗೆ ತೋರಿದ್ದರಿಂದ ಈ ಅನುಕೂಲವಾಗಿದೆ. 2022–23ರ ಆರ್ಥಿಕ ವರ್ಷದಲ್ಲಿ ದೇಶದ ಬೆಳವಣಿಗೆಯ ದರವು ಶೇ 7ರಷ್ಟಿತ್ತು’ ಎಂದು ಎನ್‌ಎಸ್‌ಒ ತನ್ನ ವರದಿಯಲ್ಲಿ ಹೇಳಿದೆ.

‘ಶೇ 8.2ರಷ್ಟಾಗಿರುವ ಬೆಳವಣಿಗೆ ದರದ ಕಾರಣದಿಂದಾಗಿ ದೇಶದ ಆರ್ಥಿಕತೆಯ 3.5 ಲಕ್ಷ ಕೋಟಿ ಡಾಲರ್‌ಗೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಆರ್ಥಿಕತೆಯು 5 ಲಕ್ಷ ಕೋಟಿ ಡಾಲರ್‌ನಷ್ಟಾಗಲು ಇದು ಸಹಕಾರಿಯಾಗಲಿದೆ’ ಎಂದು ಎನ್‌ಎಸ್‌ಒ ಅಭಿಪ್ರಾಯಪಟ್ಟಿದೆ. 2024ರ ಮೊದಲ ಮೂರು ತಿಂಗಳಲ್ಲಿ ಚೀನಾವು ಶೇ 5.3ರಷ್ಟು ಆರ್ಥಿಕ ಬೆಳವಣಿಗೆಯನ್ನು ದಾಖಲಿಸಿದೆ.



‘ವಿತ್ತೀಯ ಕೊರತೆ ಪ್ರಮಾಣ ಶೇ 5.63ರಷ್ಟು’

‘ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯ ಪ್ರಮಾಣವು 2023–24ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯ ಶೇ 5.63ರಷ್ಟಾಗಿದೆ’ ಎಂದು ಮಹಾಲೇಖಪಾಲರು (ಸಿಜಿಎ) ಶುಕ್ರವಾರ ವರದಿ ನೀಡಿದ್ದಾರೆ. ವಿತ್ತೀಯ ಕೊರತೆ ಪ್ರಮಾಣವು ಜಿಡಿಪಿಯ ಶೇ 5.8ರಷ್ಟಾಗಬಹುದು ಎಂದು ಅಂದಾಜಿಸಲಾಗಿತ್ತು.



‘ಆದಾಯ ಹಾಗೂ ಖರ್ಚಿನ ಮಧ್ಯೆ ₹16.53 ಲಕ್ಷ ಕೋಟಿಯಷ್ಟು ಕೊರತೆಯಿದೆ. 2023–24ರ ಪರಿಷ್ಕೃತ ಅಂದಾಜಿನಲ್ಲಿ ₹17.34 ಲಕ್ಷ ಕೋಟಿ (ಶೇ 5.8ರಷ್ಟು) ಕೊರತೆ ಆಗಬಹುದು ಎಂದು ಅಂದಾಜಿಸಲಾಗಿತ್ತು’ ಎಂದು ಸಿಜಿಎ ಹೇಳಿದೆ.

ಕೇಂದ್ರ ಸರ್ಕಾರವು ತನ್ನ ಆದಾಯ ಸಂಗ್ರಹ ಗುರಿಯನ್ನು ತಲುಪಿದೆ. ತೆರಿಗೆ ಸಂಗ್ರಹದಿಂದ ₹23.26 ಲಕ್ಷ ಕೋಟಿ ಆದಾಯ ಬಂದಿದೆ. ₹44.42 ಲಕ್ಷ ಕೋಟಿಯಷ್ಟು ವೆಚ್ಚವಾಗಿದೆ ಎಂದು ಸಿಜಿಎ ಹೇಳಿದೆ.



ಮಾರುತಿ ಸುಜುಕಿಯ ಎಪಿಕ್ ನ್ಯೂ ಸ್ವಿಫ್ಟ್‌ನ 500 ಕಾರುಗಳನ್ನು ಏಕಕಾಲಕ್ಕೆ ಗ್ರಾಹಕರಿಗೆ ಕಂಪನಿ ವಿತರಿಸಿತು

ಮಾರುತಿ ಸುಜುಕಿ ಎಪಿಕ್ ನ್ಯೂ ಸ್ವಿಫ್ಟ್‌ನ 500 ಕಾರು ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಬಿಡುಗಡೆಯಾದ ಮಾರುತಿ ಸುಜುಕಿಯ ಎಪಿಕ್ ನ್ಯೂ ಸ್ವಿಫ್ಟ್‌ನ 500 ಕಾರುಗಳು ಬೆಂಗಳೂರಿನಲ್ಲಿರುವ ಮಾರುತಿ ಸುಜುಕಿ ಅರೆನಾ ವಿತರಕರಿಂದ ಮಾರಾಟವಾಗಿವೆ.

ಈ ಕಾರುಗಳನ್ನು ಗ್ರಾಹಕರಿಗೆ ಕಂಪನಿ ಏಕಕಾಲಕ್ಕೆ ವಿತರಿಸಿತು. ಈ ಮಾರಾಟದಲ್ಲಿ ಜೆಡ್ ಮಾದರಿ ವಾಹನಗಳ ಮಾರಾಟವು ಶೇ 36ರಷ್ಟಿದೆ. ಇದು ಭಾರತೀಯ ಗ್ರಾಹಕರಲ್ಲಿ ಎಪಿಕ್ ನ್ಯೂ ಸ್ವಿಫ್ಟ್‌ನ ಬೇಡಿಕೆ ಮತ್ತು ಜನಪ್ರಿಯತೆಯನ್ನು ತೋರಿಸುತ್ತದೆ ಎಂದು ಕಂಪನಿ ಹೇಳಿದೆ.

ಹೊಸ ಅವತಾರದಲ್ಲಿನ ಸ್ವಿಫ್ಟ್‌ನ ವಿನ್ಯಾಸವು ಗ್ರಾಹಕರನ್ನು ಆಕರ್ಷಿಸಲಿದ್ದು, ಉತ್ತಮ ಚಾಲನಾ ಅನುಭವ ನೀಡಲಿದೆ. ಇದರಲ್ಲಿನ ಹೊಸ ಮತ್ತು ಸುಧಾರಿತ ಜೆಡ್ ಸರಣಿಯ ಎಂಜಿನ್ ಪ್ರತಿ ಲೀಟರಿಗೆ 25.75 ಕಿ.ಮೀ ಮೈಲೇಜ್ ನೀಡಲಿದೆ. 6 ಏರ್‌ಬ್ಯಾಗ್ ಗಳನ್ನು ಹೊಂದಿದ್ದು, ಹೆಚ್ಚು ಸುರಕ್ಷತೆ ನೀಡಲಿದೆ. ಇದರ ಎಕ್ಸ್ ಷೋರೂಂ ಬೆಲೆ ₹6.49 ಲಕ್ಷದಿಂದ ಪ್ರಾರಂಭವಾಗಲಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಬಂಟ್ವಾಳ		ಸರಕು	55000-82179	**ಯಲ್ಲಾಪುರ**	
ಕೋಕ	18000-28500	**ಶಿರಸಿ**		ಅಪಿ	56379-56379
ಹೊಸತು	28500-38000	ಬೆಟ್ಟೆ	33580-47099	ಬಿಳಿಗೋಟು	24109-32839
ಹಳತು	38000-46500	ಬಿಳಿಗೋಟು	23699-30899	ಚಾಲಿ	33009-37311
ಶಿವಮೊಗ್ಗ		ಚಾಲಿ	33018-38001	ಕೋಕ	11212-29299
ಬೆಟ್ಟೆ	49069-52989	ಕೆಂಪುಗೋಟು	27699-28899	ಕೆಂಪುಗೋಟು	26016-34690
ಗೊರಬಲು	16009-37130	ರಾಶಿ	44208-51489	ರಾಶಿ	44510-52999
ರಾಶಿ	30000-53921			ತಟ್ಟಿಬೆಟ್ಟೆ	34899-43795

ಬ್ರಿಟನ್‌ನಿಂದ ಭಾರತಕ್ಕೆ 100 ಟನ್ ಚಿನ್ನ ಸ್ಥಳಾಂತರ

ಮುಂಬೈ, ನಾಗ್ಪುರದ ಆರ್‌ಬಿಐ ತಿಜೋರಿಗಳಲ್ಲಿ ಭದ್ರ

ಮುಂಬೈ (ಪಿಟಿಐ): ಭಾರತ ಸರ್ಕಾರವು ಬ್ರಿಟನ್‌ನ ವಿವಿಧ ಬ್ಯಾಂಕ್‌ಗಳ ತಿಜೋರಿಗಳಲ್ಲಿ ಇರಿಸಿದ್ದ 100 ಟನ್‌ಗಳಷ್ಟು ಚಿನ್ನವನ್ನು 2023–24ನೇ ಸಾಲಿನಲ್ಲಿ ಭಾರತಕ್ಕೆ ಸ್ಥಳಾಂತರಿಸಲಾಗಿದೆ. ಮುಂಬೈ ಮತ್ತು ನಾಗ್ಪುರದಲ್ಲಿ ಇರುವ ಆರ್‌ಬಿಐನ ಅತಿಭದ್ರತೆಯ ತಿಜೋರಿಗಳಲ್ಲಿ ಈ ಚಿನ್ನವನ್ನು ಇರಿಸಲಾಗಿದೆ ಎಂದು ಮೂಲಗಳು ಹೇಳಿವೆ.

1991ರಲ್ಲಿ ಚಂದ್ರಶೇಖರ್ ಅವರು ಪ್ರಧಾನಿಯಾಗಿದ್ದಾಗ ವಿದೇಶಿ ಮೀಸಲು ಬಿಕ್ಕಟ್ಟು ಪರಿಹರಿಸಲು ವಿದೇಶಿ ತಿಜೋರಿಗಳಲ್ಲಿ ಇದ್ದ ಭಾರತದ ಚಿನ್ನದ ಮೀಸಲಿನಲ್ಲಿ ಸ್ವಲ್ಪ ಪ್ರಮಾಣವನ್ನು ಅಡವಿಡಲಾಗಿತ್ತು. 1991ರ ನಂತರ ಇಷ್ಟು ದೊಡ್ಡ ಪ್ರಮಾಣದಲ್ಲಿ ಚಿನ್ನದ ಸಾಗಣೆ ನಡೆದಿರಲಿಲ್ಲ.

ಹಿಂದಿನ ಆರ್ಥಿಕ ವರ್ಷದಲ್ಲಿ ಭಾರಿ ಎಚ್ಚರಿಕೆ ವಹಿಸಿ ಇಷ್ಟು ದೊಡ್ಡ ಪ್ರಮಾಣದಲ್ಲಿ ವಿದೇಶಗಳಿಂದ ಭಾರತಕ್ಕೆ ಚಿನ್ನವನ್ನು ಸಾಗಣೆ ಮಾಡಲಾಗಿದೆ. ಹಣಕಾಸು ಸಚಿವಾಲಯ, ಆರ್‌ಬಿಐ ಮತ್ತು ಕೇಂದ್ರ ಸರ್ಕಾರದ ಇತರ ಕೆಲವು ಸಂಸ್ಥೆಗಳ ಸಹಯೋಗದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ. ಅತಿಹೆಚ್ಚಿನ ಮೌಲ್ಯದ ಸರಕಿನ ಸಾಗಣೆ ಇದಾಗಿದ್ದರಿಂದ, ರಹಸ್ಯವಾಗಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.



ಅಂಕಿ ಅಂಶಗಳು

822 ಟನ್
ಭಾರತ ಸರ್ಕಾರದ ಚಿನ್ನದ ಒಟ್ಟು ಮೀಸಲು

413.79 ಟನ್
ಭಾರತವು ವಿದೇಶಿ ಬ್ಯಾಂಕ್‌ಗಳಲ್ಲಿ, ವಿದೇಶಿ ತಿಜೋರಿಗಳಲ್ಲಿ ಇರಿಸಿರುವ ಚಿನ್ನದ ಮೀಸಲು

408.21 ಟನ್
ದೇಶದೊಳಗಿನ ಅತಿಭದ್ರತೆಯ ತಿಜೋರಿಗಳಲ್ಲಿಇರುವ ಚಿನ್ನದ ಮೀಸಲು

2009ರಲ್ಲಿ ಯುಪಿಎ ಸರ್ಕಾರವು 200 ಟನ್‌ಗಳಷ್ಟು ಚಿನ್ನವನ್ನು ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ ಖರೀದಿಸಿತ್ತು. ಈಚಿನ ದಶಕಗಳಲ್ಲಿ ಅದೇ ಅತ್ಯಂತ ದೊಡ್ಡ ಖರೀದಿ. ಈಚಿನ ಕೆಲವು ವರ್ಷಗಳಲ್ಲಿ ಸರ್ಕಾರವು ತನ್ನ ಚಿನ್ನದ ಮೀಸಲನ್ನು ಹೆಚ್ಚಿಸಿಕೊಳ್ಳುತ್ತಿದೆ.

ಅದೇ ವೇಳೆ ವಿದೇಶಗಳಲ್ಲಿ ಇರುವ ದೇಶದ ಚಿನ್ನದ ಮೀಸಲನ್ನೂ ಕಡಿಮೆ ಮಾಡಿಕೊಳ್ಳುವುದು ಮತ್ತು ಆ ಚಿನ್ನವನ್ನು ದೇಶದೊಳಗೇ ಸಂಗ್ರಹಿಸಿ ಇಡುವುದಕ್ಕೆ ಒತ್ತು ನೀಡುತ್ತಿದೆ. ಅದರ ಪರಿಣಾಮವಾಗಿಯೇ ಹಿಂದಿನ ಆರ್ಥಿಕ ವರ್ಷದಲ್ಲಿ 100 ಟನ್‌ಗಳಷ್ಟು ಚಿನ್ನವನ್ನು ವಿದೇಶಿ ತಿಜೋರಿಗಳಿಂದ ದೇಶದಲ್ಲಿನ ತಿಜೋರಿಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಮೂಲಗಳು ವಿವರಿಸಿವೆ.

ಭಾರತವು ಒಟ್ಟು 822 ಟನ್‌ಗಳಷ್ಟು ಚಿನ್ನದ ಮೀಸಲನ್ನು ಹೊಂದಿದೆ. ಇದರಲ್ಲಿ ಅರ್ಧಕ್ಕೂ ಹೆಚ್ಚು ಚಿನ್ನವನ್ನು ವಿದೇಶಗಳ ತಿಜೋರಿಗಳಲ್ಲಿ ವಿದೇಶಿ ಬ್ಯಾಂಕ್‌ಗಳ ‘ಸೇಫ್’ಗಳಲ್ಲಿ ಇರಿಸಿದೆ. 2022–23ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಹೀಗೆ ವಿದೇಶಗಳಲ್ಲಿ ಇರಿಸಲಾಗಿದ್ದ ಚಿನ್ನದ ಪ್ರಮಾಣ 500 ಟನ್‌ಗಳಿಗಿಂತಲೂ ಹೆಚ್ಚು ಇತ್ತು. 2023–24ರಲ್ಲಿ 100 ಟನ್‌ಗಳಷ್ಟು ಚಿನ್ನವನ್ನು ಭಾರತಕ್ಕೆ ತಂದಿರುವ ಕಾರಣ, ವಿದೇಶಗಳಲ್ಲಿ ಇದ್ದ ಭಾರತದ ಚಿನ್ನದ ಮೀಸಲು ಸ್ವಲ್ಪ ಕಡಿಮೆಯಾಗಿದೆ.

ದೇಶದಲ್ಲಿ ಈಗ ಚಲಾವಣೆಯಲ್ಲಿರುವ ನೋಟು ಮತ್ತು ನಾಣ್ಯಗಳ ಭದ್ರತೆ ರೂಪದಲ್ಲಿ 308 ಟನ್‌ಗಳಷ್ಟು ಚಿನ್ನವನ್ನು ಇರಿಸಲಾಗಿದೆ. ಬ್ಯಾಂಕಿಂಗ್ ವಲಯದಲ್ಲಿ ಸ್ವತ್ತಿನ ರೂಪದಲ್ಲಿ 100.21 ಟನ್‌ಗಳಷ್ಟು ಚಿನ್ನವನ್ನು ಇರಿಸಲಾಗಿದೆ.

ಸುದ್ದಿ 2 ನಿಮಿಷ

50 ಲಕ್ಷ ದಾಟಲಿದೆ ಪ್ರಯಾಣಿಕ ವಾಹನ ಮಾರಾಟ: ಟಾಟಾ

ನವದೆಹಲಿ (ಪಿಟಿಐ): ದೇಶೀಯ ಪ್ರಯಾಣಿಕ ವಾಹನ ವಾರ್ಷಿಕ ಮಾರಾಟವು ಮುಂದಿನ ಕೆಲವೇ ವರ್ಷಗಳಲ್ಲಿ 50 ಲಕ್ಷದ ಗಡಿ ದಾಟುವ ನಿರೀಕ್ಷೆಯಿದೆ. ಟಾಟಾ ಮೋಟರ್ಸ್ ಈ ಬೆಳವಣಿಗೆಯ ಅವಕಾಶವನ್ನು ಬಳಸಿಕೊಳ್ಳಲು ಸಜ್ಜಾಗಿದೆ ಎಂದು ಟಾಟಾ ಸಮೂಹದ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ಕಳೆದ ವರ್ಷ 41 ಲಕ್ಷ ವಾಹನಗಳು ಮಾರಾಟವಾಗಿದ್ದವು. ಪ್ರತಿ 1,000 ಜನಸಂಖ್ಯೆಗೆ ಭಾರತದಲ್ಲಿ ಸುಮಾರು 30 ವಾಹನಗಳಿವೆ. ಆದರೆ ಇದು ಜಾಗತಿಕ ಸರಾಸರಿಗೆ ಹೋಲಿಸಿದರೆ ಕಡಿಮೆ. ಮುಂದಿನ ದಿನಗಳಲ್ಲಿ ಇದು ಹೆಚ್ಚಲಿದೆ ಎಂದು 2023-24ರ ವಾರ್ಷಿಕ ವರದಿಯಲ್ಲಿ ಕಂಪನಿಯ ಷೇರುದಾರರಿಗೆ ನೀಡಿದ ಸಂದೇಶದಲ್ಲಿ ಅವರು ತಿಳಿಸಿದ್ದಾರೆ.

ಮುಂದಿನ ಹಂತಗಳಲ್ಲಿ ವರಮಾನ ಹೆಚ್ಚಳ, ನಗದು ಹರಿವು ಹೆಚ್ಚಳ, ತಂತ್ರಜ್ಞಾನ ಸುಧಾರಣೆ ಮತ್ತು ಬ್ರ್ಯಾಂಡ್ ನಾಯಕತ್ವ ವಿಸ್ತರಣೆಯ ಕಡೆಗೆ ಗಮನ ಹರಿಸಲಾಗುವುದು ಎಂದು ಅವರು ಹೇಳಿದ್ದಾರೆ. ವಾಹನ ಮಾರಾಟದ ಹೊರತಾಗಿ, ವ್ಯಾಪಾರವು ವಾಹನದ ಬಿಡಿಭಾಗಗಳು, ಡಿಜಿಟಲ್ ಮತ್ತು ಸ್ಮಾರ್ಟ್ ಮೊಬಿಲಿಟಿ ಪರಿಹಾರಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ ಎಂದರು.



ಕಂಪನಿಯ ಪ್ರಯಾಣಿಕ ವಾಹನ ಮಾರಾಟವು 2023–2024ರ ಹಣಕಾಸು ವರ್ಷದಲ್ಲಿ ₹52,353 ಕೋಟಿ ವರಮಾನ ಗಳಿಸಿದೆ. ಇದು 2022–23ರ ಇದೇ ಅವಧಿಗಿಂತ ಶೇ 9.4ರಷ್ಟು ಹೆಚ್ಚಳವಾಗಿದೆ ಎಂದು ಚಂದ್ರಶೇಖರನ್ ಹೇಳಿದ್ದಾರೆ.

ಷೇರು ಸೂಚ್ಯಂಕಗಳು ಏರಿಕೆ

ಮುಂಬೈ (ಪಿಟಿಐ): ಸತತ ಐದು ದಿನಗಳ ಇಳಿಕೆಯ ನಂತರ ಶುಕ್ರವಾರ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 75 ಅಂಶ ಏರಿಕೆಯಾಗಿ 73,961ಕ್ಕೆ ಕೊನೆಗೊಂಡಿತು. ದಿನದ ವಹಿವಾಟಿನ ವೇಳೆ 74,478 ಅಂಶವನ್ನು ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 42 ಅಂಶ ಹೆಚ್ಚಳವಾಗಿ 22,530ಕ್ಕೆ ಅಂತ್ಯಗೊಂಡಿತು.

ಟಾಟಾ ಸ್ಟೀಲ್, ಬಜಾಜ್ ಫೈನಾನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಪವರ್‌ಗ್ರಿಡ್, ಲಾರ್ಸನ್ ಆ್ಯಂಡ್ ಟೂಬ್ರೊ, ಐಸಿಐಸಿಐ ಬ್ಯಾಂಕ್ ಷೇರಿನ ಮೌಲ್ಯ ಗಳಿಕೆ ಕಂಡಿವೆ. ನೆಸ್ಲೆ ಇಂಡಿಯಾ, ಟಿಸಿಎಸ್, ಮಾರುತಿ ಸುಜುಕಿ ಇಂಡಿಯಾ, ಇನ್ಫೊಸಿಸ್, ಎಕ್ಸಿಸ್ ಬ್ಯಾಂಕ್, ಹಿಂದೂಸ್ತಾನ್ ಯೂನಿಲಿವರ್ ಇಳಿಕೆ ಕಂಡಿವೆ.

ಚುನಾವಣೆಯ ಪೂರ್ವದ ವ್ಯವಹಾರ ತಂತ್ರವು ಅಂತ್ಯಗೊಂಡಿದೆ. ಹೂಡಿಕೆದಾರರು ಕೊನೆಯ ಹಂತದ ಮತದಾನದ ಮುಕ್ತಾಯದ ನಂತರ ಬಿಡುಗಡೆ ಮಾಡಲಿರುವ ಮತಗಟ್ಟೆ ಸಮೀಕ್ಷೆ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಇದರಿಂದ ಷೇರು ಸೂಚ್ಯಂಕಗಳು ಏರಿಕೆಯಾಗಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಶಸ್ತ್ರಾಸ್ತ್ರ ಬಳಕೆ: ಉಕ್ರೇನ್‌ಗೆ ವಿಧಿಸಿದ್ದ ನಿರ್ಬಂಧ ಭಾಗಶಃ ತೆರವು

ವಾಷಿಂಗ್ಟನ್ (ಎ.ಪಿ): ಅಮೆರಿಕದ ಶಸ್ತ್ರಾಸ್ತ್ರಗಳನ್ನು ರಷ್ಯಾದ ಭೌಗೋಳಿಕ ಪ್ರದೇಶವನ್ನು ಗುರಿಯಾಗಿಸಿ ಬಳಸುವುದಕ್ಕೆ ಸಂಬಂಧಿಸಿದಂತೆ ಉಕ್ರೇನ್‌ನ ಮೇಲೆ ವಿಧಿಸಲಾಗಿದ್ದ ನಿರ್ಬಂಧವನ್ನು ಜೋ ಬೈಡನ್ ಆಡಳಿತವು ಶುಕ್ರವಾರ ಭಾಗಶಃ ತೆರವುಗೊಳಿಸಿದೆ.

ಉಕ್ರೇನ್ ತನ್ನ ಹಾರ್ಕಿವ್ ನಗರವನ್ನು ರಕ್ಷಿಸಿಕೊಳ್ಳುವುದಕ್ಕೆ ಪೂರಕವಾಗಿ ಮಾತ್ರ ಈ ನಿರ್ಬಂಧವನ್ನು ಸಡಿಲಿಸಲಾಗಿದೆ ಎಂದು ಈ ಬೆಳವಣಿಗೆಗಳನ್ನು ಹತ್ತಿರದಿಂದ ಬಲ್ಲ ಅಧಿಕಾರಿಗಳು ದೃಢಪಡಿಸಿದ್ದಾರೆ.

ದೂರಗಾಮಿ ಕ್ಷಿಪಣಿಗಳು ಹಾಗೂ ಇತರೆ ಪ್ರಮುಖ ಶಸ್ತ್ರಾಸ್ತ್ರಗಳನ್ನು ರಷ್ಯಾದ ಒಳಭಾಗವನ್ನು ಗುರಿಯಾಗಿ ಬಳಸುವುದಕ್ಕೆ ವಿಧಿಸಲಾಗಿದ್ದ ನಿರ್ಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಸಿಕ್ಕಿಂ ಸಮೀಪದ ಗಡಿಯಲ್ಲಿ 6 ಜೆ–20 ಯುದ್ಧವಿಮಾನ ನಿಯೋಜಿಸಿದ ಚೀನಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೂರ್ವ ಲಡಾಖ್ ಗಡಿಗೆ ಸಂಬಂಧಿಸಿ ಭಾರತ-ಚೀನಾ ನಡುವಿನ ಸಂಘರ್ಷ ಮುಂದುವರಿದಿರುವ ನಡುವೆಯೇ, ಸಿಕ್ಕಿಂಗೆ ಹತ್ತಿರದ ತನ್ನ ಗಡಿಯಲ್ಲಿ ಚೀನಾ ಅತ್ಯಾಧುನಿಕ 6 ಜೆ–20 ಯುದ್ಧವಿಮಾನಗಳನ್ನು ನಿಯೋಜನೆ ಮಾಡಿದೆ.


ಸಿಕ್ಕಿಂಗೆ ಹೊಂದಿಕೊಂಡ ಗಡಿಗೆ ಸಮೀಪವಿರುವ ಶಿಗಟ್ಸೆ ವಾಯುನೆಲೆಯಲ್ಲಿ ಚೀನಾ ಈ ಯುದ್ಧ ವಿಮಾನಗಳನ್ನು ನಿಯೋಜನೆ ಮಾಡಿದ್ದು, ಭಾರತೀಯ ರಕ್ಷಣಾ ಪಡೆಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ.

ಇವುಗಳ ಜೊತೆಗೆ, 8 ಜೆ–10 ಯುದ್ಧವಿಮಾನಗಳು, ವೈಮಾನಿಕ ದಾಳಿ ಕುರಿತು ಸಾಕಷ್ಟು ಮುಂಚಿತವಾಗಿ ಎಚ್ಚರಿಕೆ ನೀಡಬಲ್ಲ ಕೆಜೆ–500 ವಿಮಾನವನ್ನು ಗಡಿಯಲ್ಲಿ ನಿಯೋಜನೆ ಮಾಡಿರುವುದು ಉಪಗ್ರಹ ಸೆರೆಹಿಡಿದ ಚಿತ್ರದಲ್ಲಿ ಕಾಣಿಸುತ್ತದೆ ಎಂದು ‘ಆಲ್ ಸೋರ್ಸ್ ಅನಲಿಸಿಸ್’ ಎಂಬ ಗುಪ್ತಚರ ಸಂಸ್ಥೆ ತಿಳಿಸಿದೆ. ಈ ಚಿತ್ರವನ್ನು ಸಂಸ್ಥೆಯೇ ಬಿಡುಗಡೆ ಮಾಡಿದೆ.

ರೇಡಾರ್ ಸೇರಿದಂತೆ ಇತರ ವ್ಯವಸ್ಥೆಗಳು ಪತ್ತೆ ಮಾಡುವುದನ್ನು ತಡೆಯಲು ಅಗತ್ಯವಿರುವ ತಂತ್ರಜ್ಞಾನದಿಂದ ಈ ಜೆ–20 ಯುದ್ಧವಿಮಾನಗಳನ್ನು ವಿನ್ಯಾಸಗೊಳಿಸಲಾಗಿದೆ.

12 ಸಾವಿರ ಅಡಿಗಳಷ್ಟು ಎತ್ತರದಲ್ಲಿರುವ ಶಿಗಟ್ಸೆ, ಟಿಬೆಟ್‌ನ ಎರಡನೇ ದೊಡ್ಡ ನಗರವಾಗಿದೆ. ಇಲ್ಲಿರುವ ವಿಮಾನ ನಿಲ್ದಾಣವನ್ನು ನಾಗರಿಕ ವಿಮಾನಯಾನ ಹಾಗೂ ಸೇನೆಯ ಕಾರ್ಯಾಚರಣೆಗೂ ಬಳಸಬಹುದಾಗಿದೆ.

ನಿಧನ



ಶ್ರೀ ಪ್ರೊ.ಡಾ.ಎಂ.ವೆಂಕಟೇಶ್ ರವರು

ಜನನ: 17.11.1939 ನಿಧನ: 31.5.2024
(ದಿವಂಗತ ಶ್ರೀ ವೈ.ಮುನಿಸ್ವಾಮಪ್ಪನವರ ಎರಡನೇ ಪುತ್ರ) ಸದಾಶಿವನಗರ, ಬೆಂಗಳೂರು–80 ನಿವೃತ್ತ ಪ್ರಾಧ್ಯಾಪಕರು (ಎಂಬಿಎ) ವಿಭಾಗ, ಮಾನಸ ಗಂಗೋತ್ರಿ ವಿಶ್ವವಿದ್ಯಾಲಯ, ಮೈಸೂರು. ಇವರು ದಿನಾಂಕ 31.5.2024ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. **ದಿನಾಂಕ: 1.6.2024ರಂದು ಶನಿವಾರ ಬೆಳಗ್ಗೆ 11.30ಕ್ಕೆ ಜಕ್ಕೂರಿನ ಏರೀಸ್ ಲೇಕ್‌ವ್ಯೂ ಅಪಾರ್ಟ್‌ಮೆಂಟ್ ಸಮೀಪದ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.** ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಪ್ರೊಪ್ರೈಟರ್: ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ ಮತ್ತು ಗೋಪಾಲ್ ಚಿತ್ರಮಂದಿರ, ಯಶವಂತಪುರ, ಬೆಂಗಳೂರು
ಮೊ.9986500079

ಗಾಜಾ: ವಾಯುದಾಳಿಗೆ 12 ಬಲಿ

ದಾಳಿ ತೀವ್ರಗೊಳಿಸಿದ ಇಸ್ರೇಲ್ ಸೇನೆ: ಸುರಕ್ಷಿತ ಸ್ಥಳದತ್ತ ಜನರ ಗುಂಪು

ಜೆರುಸಲೇಂ (ಎ.ಪಿ): ಗಾಜಾದ ಕೇಂದ್ರದಲ್ಲಿ ಇಸ್ರೇಲ್ ನಡೆಸಿದ ಎರಡು ವಾಯುದಾಳಿಯಲ್ಲಿ ಶುಕ್ರವಾರ ಇಬ್ಬರು ಮಕ್ಕಳು, ನಾಲ್ವರು ಮಹಿಳೆಯರು ಸೇರಿ 12 ಮಂದಿ ಮೃತಪಟ್ಟಿದ್ದಾರೆ.

ರಫಾ ನಗರಕ್ಕೆ ಗಡಿಯಾದ ಇಲ್ಲಿ ಬಹುತೇಕ ಪ್ಯಾಲೆಸ್ಟೀನಿಯರು ನೆಲೆಸಿದ್ದಾರೆ. ಈಜಿಪ್ಟ್‌ಗೆ ಹೊಂದಿಕೊಂಡಂತೆ ಈ ಗಡಿಯುದ್ದಕ್ಕೂ ಇಸ್ರೇಲ್ ಸೇನೆಯು ಸುತ್ತುವರಿದಿದೆ.

ಇಸ್ರೇಲ್‌ನ ಸೇನೆ ತನ್ನ ದಾಳಿಯನ್ನು ತೀವ್ರಗೊಳಿಸುತ್ತಿದ್ದಂತೆ ಇಲ್ಲಿ ಆಶ್ರಯ ಪಡೆದಿದ್ದ 10 ಲಕ್ಷಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರು ಸುರಕ್ಷತೆ ಅರಸಿ ಗುಳೆಹೋಗುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಈ ಹಿಂದೆ ಬೇರೆಡೆಯಿಂದ ಇಲ್ಲಿಗೆ ವಲಸೆ ಬಂದಿದ್ದವರೇ ಆಗಿದ್ದಾರೆ.

ಯುದ್ಧಪೀಡಿತ ಪ್ರದೇಶದಲ್ಲಿ ಹೆಚ್ಚಿನವರು ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ.

ಪರಿಹಾರ ಕಾರ್ಯಗಳಲ್ಲಿ ನಿರತರಾಗಿರುವ ವಿಶ್ವಸಂಸ್ಥೆಯ ಪ್ರಕಾರ, ಈ ಪ್ರದೇಶದಲ್ಲಿ ಅಗತ್ಯ ವಸ್ತುಗಳಾದ ಆಹಾರ, ನೀರು, ಇತರೆ ಮೂಲಸೌಲಭ್ಯಗಳ ಕೊರತೆಯಾಗಿದೆ.

ಯಮೆನ್‌ನಲ್ಲಿ ಹೂಥಿ ಬಂಡುಕೋರರನ್ನು ಗುರಿಯಾಗಿಸಿ ಬ್ರಿಟನ್, ಅಮೆರಿಕ ನಡೆಸಿದ ವಾಯುದಾಳಿಯಲ್ಲಿ 16 ಮಂದಿ ಸತ್ತಿದ್ದು, 35 ಮಂದಿ ಗಾಯಗೊಂಡರು ಎಂದು ವರದಿಯು ತಿಳಿಸಿದೆ.



ಗಾಜಾ ಪಟ್ಟಿಯ ಕೇಂದ್ರ ಭಾಗದಲ್ಲಿ ಶುಕ್ರವಾರ ಇಸ್ರೇಲ್‌ನ ವಾಯುದಾಳಿಯಿಂದ ಹಾನಿಗೊಂಡ ಕಾರಿನ ಅವಶೇಷಗಳನ್ನು ಪ್ಯಾಲೆಸ್ಟೀನಿಯರು ಪರಿಶೀಲಿಸಿದರು —ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಅಮೆರಿಕದ ವಶದಲ್ಲಿ ಹಿಮಾಂಶು ಭಾವು ಸಹಚರ

ನವದೆಹಲಿ (ಪಿಟಿಐ): ತಲೆಮರೆಸಿಕೊಂಡಿರುವ ಭೂಗತಪಾತಕಿ ಹಿಮಾಂಶು ಭಾವು ಸಹಚರ ಎಂದು ಕರೆಯಲಾದ ವ್ಯಕ್ತಿಯೊಬ್ಬನನ್ನು ಅಮೆರಿಕದ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಇಲ್ಲಿನ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಆತನ ಗುರುತು ಪತ್ತೆ ಮಾಡಲು ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಆತನನ್ನು ಭಾವು ಜೊತೆ ಸುಲಿಗೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಸಾಹಿಲ್ ಕುಮಾರ್ ಎಂದು ಶಂಕಿಸಲಾಗಿದೆ. ಹಲವಾರು ಪ್ರಕರಣಗಳಲ್ಲಿ ಸಾಹಿಲ್ ಆರೋಪಿಯಾಗಿದ್ದು, ಹರಿಯಾಣ ಪೊಲೀಸರು ಶೋಧ ನಡೆಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಶದಲ್ಲಿರುವ ವ್ಯಕ್ತಿಯ ಗುರುತು ಬಹಿರಂಗವಾಗುತ್ತಿದ್ದಂತೆ ಆತನನ್ನು ದೇಶಕ್ಕೆ ಕರೆತರುವ ಪ್ರಕ್ರಿಯೆಗಳನ್ನು ಸಿಬಿಐ ಆರಂಭಿಸುತ್ತದೆ. ಆದರೆ, ಅದಕ್ಕೂ ಮೊದಲು ಅಮೆರಿಕದ ನ್ಯಾಯಾಲಯ ಆತನನ್ನು ಭಾರತಕ್ಕೆ ಕಳಿಸಲು ಅನುಮತಿಸಬೇಕು ಎಂದರು.

ಸಾಹಿಲ್ ನಕಲಿ ಗುರುತಿನ ಪಾಸ್‌ಪೋರ್ಟ್ ಬಳಸಿ ಭಾರತದಿಂದ ಪರಾರಿಯಾಗಿದ್ದ, ಆತನ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಹೊರಡಿಸಲಾಗಿದೆ.

ರಕ್ಷಣಾ ಕ್ಷೇತ್ರ: ಭಾರತದ ಜೊತೆಗಿನ ಬಾಂಧವ್ಯ ಮತ್ತಷ್ಟು ದೃಢ –ಅಮೆರಿಕ

ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಅಮೆರಿಕ ನಡುವೆ ರಕ್ಷಣಾ ಕ್ಷೇತ್ರ ಹಾಗೂ ಸೇನಾ ಪಾಲುದಾರಿಕೆ ಕುರಿತ ಬಾಂಧವ್ಯವು ಮತ್ತಷ್ಟು ಬಲಗೊಳ್ಳುತ್ತಿದೆ ಎಂದು ಅಮೆರಿಕ ಹೇಳಿದೆ.

ಉಭಯ ದೇಶಗಳ ನಡುವೆ ರಕ್ಷಣಾ ಕ್ಷೇತ್ರಕ್ಕೆ ಅನ್ವಯಿಸಿ ಒಪ್ಪಂದಗಳು ಏರ್ಪಡುತ್ತಿವೆ. ನಿಯೋಗಗಳು ಭೇಟಿ ನೀಡುತ್ತಿವೆ. ಚರ್ಚೆ ನಡೆದಿದೆ ಎಂದು ಪೆಂಟಗನ್‌ನ ಉಪ ಪತ್ರಿಕಾ ಕಾರ್ಯದರ್ಶಿ ಸಬ್ರಿನಾ ಸಿಂಗ್ ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಇತ್ತೀಚೆಗೆ ನಡೆದ ಕಾರ್ಯದರ್ಶಿ ಹಂತದ ನಿಯೋಗದ ಭೇಟಿ ವೇಳೆ ಅನೇಕ ಒಪ್ಪಂದಗಳಾಗಿವೆ. ಇವುಗಳಲ್ಲಿ ಭಾರತದಲ್ಲಿ ಉತ್ಪಾದನಾ ಘಟಕದ ಸ್ಥಾಪನೆ ಮಾಡುವುದೂ ಸೇರಿದೆ ಎಂದು ಹೇಳಿದರು.

2023ರಲ್ಲಿ ಭಾರತ ಮತ್ತು ಅಮೆರಿಕ ಜಂಟಿಯಾಗಿ ಇಂಡಸ್–ಎಕ್ಸ್ ಆರಂಭಿಸಿದ್ದು, ಭಾರತ–ಅಮೆರಿಕ ರಕ್ಷಣಾ ಸಹಕಾರ ಕುರಿತಂತೆ ಕಾರ್ಯಕ್ರಮಪಟ್ಟಿ ಹಾಗೂ ದ್ವಿಪಕ್ಷೀಯ ಸಹಕಾರ ಕುರಿತಂತೆ ಮಾತುಕತೆಗೆ ಅನುಮೋದನೆ ನೀಡಿದ್ದವು.

ಬಿಸಿ ಗಾಳಿಗೆ ತತ್ತರಿಸಿದ ಉತ್ತರ ಭಾರತ ● ಶಾಖಾಘಾತದಿಂದ ಹಲವರ ಸಾವು ಶಂಕೆ

ಪ್ರತಿಕೂಲ ಹವಾಮಾನ: 36 ಸಾವು

ರೂರ್ಕೆಲಾ/ಕೌಶಾಂಬಿ/ಶಹಜಹಾನ್‌ಪುರ(ಪಿಟಿಐ): ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಹಾಗೂ ಒಡಿಶಾ ಸೇರಿದಂತೆ ಉತ್ತರದ ಹಲವು ರಾಜ್ಯಗಳಲ್ಲಿ ತಾಪಮಾನ ಹೆಚ್ಚಾಗಿದ್ದು, ಇಬ್ಬರು ಮಕ್ಕಳು ಸೇರಿದಂತೆ 36 ಮಂದಿ ಮೃತಪಟ್ಟಿದ್ದಾರೆ. ಪ್ರತಿಕೂಲ ಹವಾಮಾನ ಪರಿಸ್ಥಿತಿ, ಶಾಖಾಘಾತವೇ ಸಾವುಗಳಿಗೆ ಕಾರಣ ಎಂದು ಶಂಕಿಸಲಾಗಿದೆ.

ಒಡಿಶಾದಲ್ಲಿ ಐವರು, ಬಿಹಾರ ಹಾಗೂ ಜಾರ್ಖಂಡ್‌ನಲ್ಲಿ ತಲಾ ನಾಲ್ವರು ಮೃತಪಟ್ಟಿದ್ದು, ಈ ಸಾವುಗಳಿಗೆ ಶಾಖಾಘಾತವೇ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ.

ಒಡಿಶಾದಲ್ಲಿ ವರದಿಯಾಗಿರುವ 18 ಸಾವುಗಳಿಗೆ ಕೂಡ ಶಾಖಾಘಾತವೇ ಕಾರಣ ಎಂದು ಶಂಕಿಸಲಾಗಿದ್ದು, ಈ ಕುರಿತು ತನಿಖೆ ನಡೆಯುತ್ತಿದೆ ಎಂದು ಅಲ್ಲಿನ ರಾಜ್ಯ ಸರ್ಕಾರ ಹೇಳಿದೆ.

ಜೋರಾಗಿ ಬೀಸಿದ ಗಾಳಿ ಪರಿಣಾಮ ಶೆಡ್ ಕುಸಿದು ಉತ್ತರ ಪ್ರದೇಶದಲ್ಲಿ ಶುಕ್ರವಾರ ಐವರು ಮೃತಪಟ್ಟಿದ್ದಾರೆ.

ತಾತ್ಕಾಲಿಕ ಶೆಡ್ ಕುಸಿದ ಪರಿಣಾಮ ಶಹಜಹಾನ್‌ಪುರದಲ್ಲಿ ಮೂವರು ಮೃತಪಟ್ಟಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕಕುಮಾರ್ ಮೀನಾ ತಿಳಿಸಿದ್ದಾರೆ.

ಕೌಶಾಂಬಿಯಲ್ಲಿ ವೃದ್ಧೆ ಸೇರಿದಂತೆ ಇಬ್ಬರು ಶಾಖಾಘಾತದಿಂದ ಮೃತಪಟ್ಟಿದ್ದಾರೆ.

'ಈ ಇಬ್ಬರು ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ, ಬಿಸಿಲ ಆಘಾತದಿಂದ ಅಸ್ವಸ್ಥಗೊಂಡಿದ್ದರು. ಅವರನ್ನು ಗುರುವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಗೆ ದಾಖಲಿಸಿದ ಅರ್ಧ ಗಂಟೆಯಲ್ಲಿಯೇ ಅವರು ಮೃತಪಟ್ಟರು. ಬಿಸಿಲ ಆಘಾತದಿಂದ ಕಂಡುಬಂದ ತೊಂದರೆಗಳೇ ಅವರ ಸಾವಿಗೆ ಕಾರಣವಾಗಿರಬಹುದು' ಎಂದು ಕೌಶಾಂಬಿಯ ಮುಖ್ಯ ವೈದ್ಯಾಧಿಕಾರಿ ಸುಷ್ಪೇಂದ್ರ ಕುಮಾರ್ ಶುಕ್ರವಾರ ತಿಳಿಸಿದ್ದಾರೆ.

'ಬಾಲೇಶ್ವರ, ಧೇಂಕನಾಲ್, ಮಯೂರ್‌ಭಂಜ್, ಸೋನೆಪುರ ಹಾಗೂ ಬೋಲಾಂಗಿರ್ ಜಿಲ್ಲೆಯ ತಲಾ ಒಬ್ಬರು ಶಾಖಾಘಾತದಿಂದ ಮೃತಪಟ್ಟಿರುವುದು ದೃಢಪಟ್ಟಿದೆ' ಎಂದು ಒಡಿಶಾದ ವಿಶೇಷ ಆಯುಕ್ತ (ಪರಿಹಾರ) ಸತ್ಯವ್ರತ ಸಾಹು ಹೇಳಿದ್ದಾರೆ.

'ಸುಂದರಗಢ ಜಿಲ್ಲೆಯಲ್ಲಿ 12 ಜನರು, ಝರ್ಸುಗುಡ ಜಿಲ್ಲೆಯಲ್ಲಿ 6 ಸೇರಿದಂತೆ ಒಟ್ಟು 18 ಜನರು ಮೃತಪಟ್ಟಿದ್ದು, ಇವರು ಶಾಖಾಘಾತದಿಂದಲೇ ಮೃತಪಟ್ಟಿರುವ ಶಂಕೆ ಇದೆ. ಮರಣೋತ್ತರ ಪರೀಕ್ಷೆ ಬಳಿಕವಷ್ಟೆ ಈ 18 ಜನರ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ' ಎಂದು ಸಾಹು ಹೇಳಿದ್ದಾರೆ.

'ಶಾಖಾಘಾತದಿಂದ ಬಾಧಿತ 10 ಜನರನ್ನು ರೂರ್ಕೆಲಾದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇತರ 23 ಜನರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಸುಂದರಗಢ ಹೆಚ್ಚುವರಿ ಜಿಲ್ಲಾಧಿಕಾರಿ ಅಭಿಷೇಕ್ ಕುಲಕರ್ಣಿ ತಿಳಿಸಿದ್ದಾರೆ.

ಬಿಸಿಗಾಳಿ ಪರಿಣಾಮ ಬಿಹಾರದಲ್ಲಿ ಜೂನ್ 8ರವರೆಗೆ ಎಲ್ಲ ಶಾಲೆಗಳು, ಅಂಗನವಾಡಿ ಕೇಂದ್ರಗಳಿಗೆ ರಜೆ ಘೋಷಿಸಲಾಗಿದೆ



ವಿವಿಧ ನಗರಗಳ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)

ಬಕ್ಸರ್(ಬಿಹಾರ)	47.1
ಝರ್ಸುಗುಡ(ಒಡಿಶಾ)	47
ತಿತ್ಲಾಗಢ(ಒಡಿಶಾ)	46.5
ಬಾರಗಢ(ಒಡಿಶಾ)	46.3
ಸಂಬಲ್‌ಪುರ(ಒಡಿಶಾ)	46.2

ಲೋಕಸಭಾ ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿಯೊಬ್ಬರು ಬಿಸಿಲ ಝಳದಿಂದಾಗಿ ವಾರಾಣಸಿಯಲ್ಲಿನ ಚುನಾವಣಾ ಸಾಮಗ್ರಿ ವಿತರಣಾ ಕೇಂದ್ರದಲ್ಲಿ ಶುಕ್ರವಾರ ಕುಸಿದು ಬಿದ್ದರು —ಪಿಟಿಐ ಚಿತ್ರ

ರಾಮಮಂದಿರದಲ್ಲಿ ಸಹಾಯ ಕೇಂದ್ರ

ಅಯೋಧ್ಯೆ (ಉತ್ತರ ಪ್ರದೇಶ) (ಪಿಟಿಐ): ಶಾಖದ ಅಲೆಯಿಂದ ಭಕ್ತರಿಗೆ ತೊಂದರೆಯಾಗದಂತೆ ಇಲ್ಲಿನ ರಾಮಮಂದಿರದ ಆಡಳಿತವು ಸಹಾಯ ಕೇಂದ್ರ, ವಾಟರ್ ಕೂಲರ್ ಮತ್ತು ಸರತಿಯಲ್ಲಿ ನಿಂತವರಿಗೆ ಒಆರ್‌ಎಸ್ ಸೇರಿದಂತೆ ಹಲವು ವ್ಯವಸ್ಥೆಗಳನ್ನು ಕಲ್ಪಿಸಿದೆ.

'ಬೇಸಿಗೆಯ ಬಿಸಿಲು ಇದೀಗ ಗರಿಷ್ಠ ಮಟ್ಟದಲ್ಲಿದೆ. ತಾಪಮಾನವು 50 ಡಿಗ್ರಿ ಸೆಲ್ಸಿಯಸ್ ಮುಟ್ಟುತ್ತಿದೆ. ಇದನ್ನು ಪರಿಗಣಿಸಿ, 500ಕ್ಕೂ ಹೆಚ್ಚು ಕುರ್ಚಿಗಳನ್ನು ಹೊಂದಿರುವ ಸಹಾಯ ಕೇಂದ್ರವನ್ನು ಭಕ್ತರಿಗಾಗಿ ಸ್ಥಾಪಿಸಿದ್ದೇವೆ. ಇಲ್ಲಿ ಕೂಲರ್‌ಗಳು, ವಾಟರ್ ಕೂಲರ್‌ಗಳು ಸೇರಿದಂತೆ ಇನ್ನಿತರ ಸೌಲಭ್ಯ ಒದಗಿಸಿದ್ದೇವೆ' ಎಂದು ರಾಮಮಂದಿರ ಟ್ರಸ್ಟ್ ಕ್ಯಾಂಪ್ ಕಚೇರಿಯ ಉಸ್ತುವಾರಿ ಪ್ರಕಾಶ್ ಗುಪ್ತಾ ಶುಕ್ರವಾರ ಸುದ್ದಿಸಂಸ್ಥೆಗೆ ತಿಳಿಸಿದರು.

25 ಚುನಾವಣಾ ಸಿಬ್ಬಂದಿ ಸಾವು

ಪಟ್ನಾ(ಬಿಹಾರ)/ಮಿರ್ಜಾಪುರ(ಉತ್ತರ ಪ್ರದೇಶ)(ಪಿಟಿಐ): ಬಿಸಿಲ ಆಘಾತ ಮತ್ತು ಆರೋಗ್ಯ ಏರುಪೇರಿನಿಂದಾಗಿ ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ 25 ಮಂದಿ ಚುನಾವಣಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಬಿಹಾರದಲ್ಲಿ ಬಿಸಿಲಿನ ಆಘಾತದಿಂದಾಗಿ ಕಳೆದ 24 ಗಂಟೆಗಳಲ್ಲಿ 10 ಜನ ಚುನಾವಣಾ ಸಿಬ್ಬಂದಿ ಮೃತಪಟ್ಟಿದ್ದಾರೆ, ಆರೋಗ್ಯ ಸಮಸ್ಯೆಗಳಿಂದಾಗಿ ಉತ್ತರ ಪ್ರದೇಶದ ಮಿರ್ಜಾಪುರದ ಆಸ್ಪತ್ರೆಯೊಂದರಲ್ಲಿ 15 ಮಂದಿ ಮೃತಪಟ್ಟಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಬಿಹಾರದ ವಿಪತ್ತು ನಿರ್ವಹಣಾ ಇಲಾಖೆ, ಭೋಜಪುರ ಜಿಲ್ಲೆಯಲ್ಲಿ ಐವರು, ರೋಹ್ತಾಸ್‌ನಲ್ಲಿ ಮೂವರು, ಕೈಮೂರ್ ಮತ್ತು ಔರಂಗಾಬಾದ್‌ನಲ್ಲಿ ತಲಾ ಒಬ್ಬ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ತಿಳಿಸಿದೆ. ಬಿಹಾರದ 8 ಲೋಕಸಭಾ ಕ್ಷೇತ್ರಗಳಿಗೆ ಶನಿವಾರ ಮತದಾನ ನಡೆಯಲಿದೆ.

'ಸುಪ್ರೀಂ' ಆವರಣದಲ್ಲಿ ನೀರಿನ ವ್ಯವಸ್ಥೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತಾಪಮಾನ ಹೆಚ್ಚುತ್ತಿರುವ ಕಾರಣ, ಸುಪ್ರೀಂ ಕೋರ್ಟ್ ಆವರಣದಲ್ಲಿ ಪಕ್ಷಿಗಳು ಹಾಗೂ ಚಿಕ್ಕ ಪ್ರಾಣಿಗಳಿಗೆ ನೀರು ಮತ್ತು ಧಾನ್ಯಗಳನ್ನು ಇಡಲಾಗಿದೆ.

'ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ಸೂಚನೆಯಂತೆ, ನ್ಯಾಯಾಲಯದ ಆವರಣದಲ್ಲಿ ನೀರು ಮತ್ತು ಆಹಾರ ಧಾನ್ಯಗಳ ವ್ಯವಸ್ಥೆ ಮಾಡಲಾಗಿದೆ' ಎಂದು ಸುಪ್ರೀಂ ಕೋರ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೆಹಲಿಯಲ್ಲಿ ಈ ವರ್ಷ ಮೇ ತಿಂಗಳಲ್ಲಿ ಕೇವಲ ಎರಡು ದಿನಗಳಷ್ಟೆ ಮಳೆಯಾಗಿದೆ. ಈ ರೀತಿ ಆಗಿರುವುದು ಹತ್ತು ವರ್ಷಗಳ ನಂತರ ಇದೇ ಮೊದಲು ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ತಂದೆ– ತಾತನ ಬಂಧನ ಅವಧಿ ವಿಸ್ತರಣೆ

ಅಪ್ರಾಪ್ತ ವಯಸ್ಕನಿಂದ ಪೋಶೆ ಕಾರು ಅಪಘಾತ ಪ್ರಕರಣ

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಸಿಲುಕಿರುವ 17 ವರ್ಷ ವಯಸ್ಸಿನ ಬಾಲಕನ ತಂದೆ ಮತ್ತು ತಾತ ಇಬ್ಬರ ನ್ಯಾಯಾಂಗ ಬಂಧನವನ್ನು ಇನ್ನೂ 14 ದಿನಗಳಿಗೆ ವಿಸ್ತರಿಸಿ ಪುಣೆಯ ನ್ಯಾಯಾಲಯವೊಂದು ಶುಕ್ರವಾರ ಆದೇಶ ಹೊರಡಿಸಿದೆ.

ತಮ್ಮ ಕಾರಿನ ಚಾಲಕನನ್ನು ಅಪಹರಿಸಿ, ಆತನೇ ಈ ಪ್ರಕರಣದ ಆರೋಪಿ ಎಂದು ಬಿಂಬಿಸಲು ಪ್ರಯತ್ನಿಸಿದ್ದ ಆರೋಪ ಇವರಿಬ್ಬರ ಮೇಲಿದೆ.

ಪೊಲೀಸರ ಪ್ರಕಾರ, ಅಪಘಾತ ಸಂಭವಿಸಿದ ವೇಳೆ ಬಾಲಕನ ಚಾಲಕನ ಜೊತೆಯೇ ಇದ್ದ. ಆದರೆ, ಅಪಘಾತದ ಹೊಣೆಯನ್ನು ಚಾಲಕನೇ ಹೊತ್ತುಕೊಳ್ಳುವಂತೆ ಆತನ ಮೇಲೆ ತಂದೆ–ಮಗ ಬೆದರಿಕೆಯೊಡ್ಡಿದ್ದರು. ಅಲ್ಲದೇ, ಆತನನ್ನು ಅಪಹರಿಸಿ ತಮ್ಮ ಮನೆಯಲ್ಲಿ ಬಚ್ಚಿಟ್ಟಿದ್ದರು. ಚಾಲಕನ ಪತ್ನಿ ಆತನನ್ನು ಮುಕ್ತಗೊಳಿಸಿದ್ದರು.

ಪ್ರಕರಣದ ತನಿಖೆಯಲ್ಲಿ ಪ್ರಗತಿ ಕಂಡುಬಂದಿದೆ. ಆದರೆ ಆರೋಪಿಗಳು ತನಿಖೆಗೆ ಸ್ಪಂದಿಸುತ್ತಿಲ್ಲ. ಹೀಗಾಗಿ ಅವರ ಬಂಧನದ ಅವಧಿ ವಿಸ್ತರಿಸಬೇಕು ಎಂದು ಸರ್ಕಾರಿ ವಕೀಲರು ನ್ಯಾಯಾಲಯವನ್ನು ಕೇಳಿಕೊಂಡರು. ಆದರೆ, ಆರೋಪಿ ಪರ ವಕೀಲರು ಅದನ್ನು ವಿರೋಧಿಸಿದರು ಎಂದು ಪೊಲೀಸರು ಹೇಳಿದರು.

'ಸರ್ಕಾರಿ ವಕೀಲರು ಈಗಾಗಲೇ ಸಾಕಷ್ಟು ಸಮಯಾವಕಾಶ ತೆಗೆದುಕೊಂಡಿದ್ದಾರೆ. ಅದೂ ಅಲ್ಲದೇ ಕಾರು, ಮೊಬೈಲ್ ಫೋನ್ ಮತ್ತು ಸಿ.ಸಿ.ಟಿ.ವಿ. ದೃಶ್ಯಾವಳಿಗಳನ್ನು ಪರಿಶೀಲಿಸಿದ್ದಾರೆ. ಹೀಗಾಗಿ ಬಂಧನದ ಅವಧಿ ವಿಸ್ತರಿಸುವ ಅಗತ್ಯವಿಲ್ಲ ಎಂದು ಆರೋಪಿ ಪರ ವಕೀಲರು ವಾದ ಮಂಡಿಸಿದರು. ಎರಡೂ ಕಡೆಯವರ ವಾದ ಆಲಿಸಿದ ಬಳಿಕ ನ್ಯಾಯಾಧೀಶರು ಬಂಧನದ ಅವಧಿಯನ್ನು 14 ದಿನಗಳಿಗೆ ವಿಸ್ತರಿಸಿದರು' ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕನನ್ನು ಜೂನ್ 5ರವರೆಗೆ ವೀಕ್ಷಣಾ ಕೇಂದ್ರದಲ್ಲಿ ಇರಿಸಲಾಗುವುದು ಎಂದು ಈಗಾಗಲೇ ಪೊಲೀಸರು ತಿಳಿಸಿದ್ದಾರೆ.

ಅತಿವೇಗದಲ್ಲಿ ಬಂದ ಪೋಶೆ ಕಾರು ಬೈಕ್‌ಗೆ ಗುದ್ದಿ, ಇಬ್ಬರು ಟೆಕಿಗಳು ಸಾವಿಗೀಡಾಗಿದ್ದ ಘಟನೆ ಪುಣೆಯ ಕಲ್ಯಾಣಿ ನಗರದಲ್ಲಿ ಮೇ 19ರಂದು ನಡೆದಿತ್ತು.

ಆಯುಕ್ತರ ವಿರುದ್ಧ ಕ್ರಮಕ್ಕೆ ಆಗ್ರಹ: ಪೋಶೆ ಪ್ರಕರಣಕ್ಕೆ ಸಂಬಂಧಿಸಿ ಪುಣೆ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಅವರನ್ನು ವಜಾಗೊಳಿಸಬೇಕೆಂದು ಕೋರಿ ಮಾಜಿ ಅಧಿಕಾರಿಯೊಬ್ಬರು ಮಹಾರಾಷ್ಟ್ರ ಮಾನವ ಹಕ್ಕುಗಳ ಆಯೋಗಕ್ಕೆ ಪತ್ರ ಬರೆದಿದ್ದಾರೆ.

ವಿಚಾರಣೆಗೆ ಅನುಮತಿ ಕೋರಿದ ಪೊಲೀಸರು

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕೆಲ ಅಸಹಜ ಬೆಳವಣಿಗೆಗಳು ನಡೆದ ಹಿನ್ನೆಲೆಯಲ್ಲಿ ಕಾನೂನು ಸಂಘರ್ಷಕ್ಕೊಳಗಾಗಿರುವ ಬಾಲಕನ ವಿಚಾರಣೆ ನಡೆಸಲು ಅನುಮತಿ ನೀಡಬೇಕು ಎಂದು ಕೋರಿ ಪುಣೆ ಪೊಲೀಸರು ಬಾಲ ನ್ಯಾಯ ಮಂಡಳಿಗೆ (ಜೆಜೆಬಿ) ಮನವಿ ಮಾಡಿದ್ದಾರೆ.

ಅಪಘಾತ ಸಂಭವಿಸಿದ ವೇಳೆ ಬಾಲಕನು ಮದ್ಯ ಸೇವಿಸಿದ್ದನೇ ಎಂಬುದನ್ನು ತಿಳಿಯುವ ನಿಟ್ಟಿನಲ್ಲಿ ಆತನ ರಕ್ತದ ಮಾದರಿ ಸಂಗ್ರಹಿಸಲಾಗಿತ್ತು. ಆದರೆ ಸಂಗ್ರಹಿಸಲಾಗಿದ್ದ ರಕ್ತವು ಬಾಲಕನದ್ದಾಗಿರದೆ ಬೇರೆಯವರದ್ದು ಎಂಬುದು ಪತ್ತೆಯಾಗಿತ್ತು. ಈ ಬೆಳವಣಿಗೆಯ ಕಾರಣ ಆತನನ್ನು ವಿಚಾರಣೆಗೆ ಒಳಪಡಿಸಲು ಪೊಲೀಸರು ನಿರ್ಧರಿಸಿದ್ದಾರೆ.

ಬಾಲ ನ್ಯಾಯ ಕಾಯ್ದೆ ಪ್ರಕಾರ ಅಪ್ರಾಪ್ತ ವಯಸ್ಕರ ವಿಚಾರಣೆಯನ್ನು ಅವರ ಪೋಷಕರ ಸಮ್ಮುಖದಲ್ಲೇ ನಡೆಸಬೇಕು.

ಎದೆಹಾಲು ಮಾರಾಟ: ಮಳಿಗೆಗೆ ಬೀಗ

ಚೆನ್ನೈ (ಪಿಟಿಐ): ಇಲ್ಲಿನ ಮಾಧವರಂನಲ್ಲಿ ಎದೆಹಾಲು ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಪ್ರೋಟೀನ್ ಪೌಡರ್ ಮಾರಾಟ ಮಳಿಗೆಯೊಂದರ ಮೇಲೆ ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ಶುಕ್ರವಾರ ದಾಳಿ ನಡೆಸಿ, ಮಳಿಗೆಗೆ ಬೀಗಮುದ್ರೆ ಹಾಕಿದ್ದಾರೆ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಮಳಿಗೆ ಮಾಲೀಕ, ಪ್ರೋಟೀನ್ ಪೌಡರ್ ಮಾರಾಟ ಮಾಡಲು ಪರವಾನಗಿ ಹೊಂದಿದ್ದಾರೆ. ಆದರೆ, ಎದೆ ಹಾಲನ್ನು 50 ಎಂಎಲ್‌ನ ಪ್ರತಿ ಬಾಟಲ್ ಅನ್ನು ₹500ರಂತೆ ಅವರು ಮಾರಾಟ ಮಾಡುತ್ತಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಾಧವರಂನಲ್ಲಿ ಮಾರಾಟ ಮಾಡಲು ಎದೆಹಾಲು ಸಂಗ್ರಹಿಸುತ್ತಿರುವ ಬಗ್ಗೆ ಕೇಂದ್ರ ಪರವಾನಗಿ ಅಧಿಕಾರಿಗಳಿಂದ ಕಳೆದ ವಾರ ದೂರು ಬಂದಿತ್ತು. ಈ ಹಿನ್ನೆಲೆಯಲ್ಲಿ ಶುಕ್ರವಾರ ದಾಳಿ ನಡೆಸಲಾಯಿತು. ಬಾಟಲ್‌ಗಳಲ್ಲಿ ಎದೆಹಾಲು ಸಂಗ್ರಹಿಸಿಟ್ಟಿರುವುದು ಪತ್ತೆಯಾಗಿದೆ. ದಾಳಿಯ ವೇಳೆ ಮಳಿಗೆಯಿಂದ 50 ಬಾಟಲ್ ಎದೆಹಾಲು ವಶಪಡಿಸಿಕೊಳ್ಳಲಾಗಿದೆ. ಇದರ ಮಾದರಿಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ದಾಳಿ ವೇಳೆ, ಅಧಿಕಾರಿಗಳು ಎದೆಹಾಲು ದಾನಿಗಳ ಮೊಬೈಲ್ ಫೋನ್ ಸಂಖ್ಯೆಗಳನ್ನು ಪತ್ತೆ ಹಚ್ಚಿದ್ದಾರೆ. 'ಮಳಿಗೆಗೆ ಬೀಗಮುದ್ರೆ ಹಾಕಿದ್ದೇವೆ. ನಿಯಮ ಉಲ್ಲಂಘನೆಯ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಜಿಲ್ಲಾ ಆಹಾರ ಸುರಕ್ಷತಾ ಅಧಿಕಾರಿ ತಿಳಿಸಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಳಿಗೆ ಮಾಲೀಕರು, ಸೇವಾ ಉದ್ದೇಶದಿಂದ ತಾಯಂದಿರು ಎದೆ ಹಾಲು ನೀಡುತ್ತಿದ್ದಾರೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಕರ್ನಾಟಕದಲ್ಲಿ ಎದೆ ಹಾಲು ಮಾರಾಟ ನಿಷೇಧಿಸುವ ಬೆನ್ನಲ್ಲೇ, ಚೆನ್ನೈನಲ್ಲಿ ಇದೇ ಮೊದಲ ಬಾರಿಗೆ ಎದೆಹಾಲು ಮಾರಾಟ ಮಾಡುತ್ತಿರುವ ಪ್ರಕರಣ ಬೆಳಕಿಗೆ ಬಂದಿದೆ. ದೇಶದ ಆಹಾರ ನಿಯಂತ್ರಕ ಮೇ 24ರಂದು ಎದೆಹಾಲಿನ ಅನಧಿಕೃತ ವಾಣಿಜ್ಯೀಕರಣದ ವಿರುದ್ಧ ಎಚ್ಚರಿಕೆಯನ್ನು ಸಹ ನೀಡಿತ್ತು.

'ಎಫ್‌ಎಸ್‌ಎಸ್ ಕಾಯ್ದೆ 2006 ಮತ್ತು ನಿಯಮಗಳ ಅಡಿಯಲ್ಲಿ ಎದೆ ಹಾಲನ್ನು ಸಂಸ್ಕರಿಸಲು ಮತ್ತು ಮಾರಾಟ ಮಾಡಲು ಅನುಮತಿ ಇಲ್ಲ. ಆದ್ದರಿಂದ, ಎದೆಹಾಲಿನ ವಾಣಿಜ್ಯೀಕರಣಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಮತ್ತು ಎದೆಹಾಲು ಹಾಗೂ ಅದರ ಉತ್ಪನ್ನಗಳ ಮಾರಾಟವನ್ನು ತಕ್ಷಣವೇ ನಿಲ್ಲಿಸಬೇಕು' ಎಂದು ಎಫ್‌ಎಸ್‌ಎಸ್‌ಎಐ (ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ) ಸಲಹೆ ನೀಡಿತ್ತು.

ರೀಮಲ್ ಚಂಡಮಾರುತದ ಪರಿಣಾಮ ● 1.88 ಲಕ್ಷ ಮಂದಿ ಬಾಧಿತರು

ಮಣಿಪುರ: 24 ಸಾವಿರ ಮನೆಗಳಿಗೆ ಹಾನಿ

ಇಂಫಾಲ್(ಪಿಟಿಐ): ರೀಮಲ್ ಚಂಡಮಾರುತದಿಂದಾಗಿ ಮಣಿಪುರದಲ್ಲಿ ಸುರಿದ ಭಾರಿ ಮಳೆ ಪರಿಣಾಮ ಉಂಟಾದ ಪ್ರವಾಹದಿಂದ 1,88,143 ಜನರು ಬಾಧಿತರಾಗಿದ್ದಾರೆ.

ಕಳೆದ ಕೆಲವು ದಿನಗಳಲ್ಲಿ ರಾಜ್ಯದಲ್ಲಿ ಕನಿಷ್ಠ 24,265 ಮನೆಗಳಿಗೆ ಹಾನಿಯಾಗಿದೆ ಎಂದು ಜಲ ಸಂಪನ್ಮೂಲ, ಪರಿಹಾರ ಮತ್ತು ವಿಪತ್ತು ನಿರ್ವಹಣಾ ಸಚಿವ ಅವಾಂಗ್‌ಬೊ ನ್ಯೂಮೈ ತಿಳಿಸಿದ್ದಾರೆ.

56 ಪರಿಹಾರ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 18,103 ಜನರನ್ನು ಸ್ಥಳಾಂತರಿಸಲಾಗಿದೆ. 401 ಹೆಕ್ಟೇರ್ ಪ್ರದೇಶದಲ್ಲಿನ ಬೆಳೆ ಹಾನಿಯಾಗಿದೆ ಎಂದು ಅವರು ಫೇಸ್‌ಬುಕ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಫಾಲ್ ಪಶ್ಚಿಮ ಮತ್ತು ಪೂರ್ವ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪರಿಹಾರ ಮತ್ತು ವಿಪತ್ತು ನಿರ್ವಹಣಾ ನಿರ್ದೇಶನಾಲಯದ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು. ರಾಜ್ಯದಲ್ಲಿನ ಪ್ರವಾಹ ಪರಿಸ್ಥಿತಿ, ರಕ್ಷಣೆ ಮತ್ತು ಪರಿಹಾರ ಕಾರ್ಯಗಳ ಕುರಿತು ಪರಿಶೀಲಿಸಲಾಯಿತು' ಎಂದು ಅವರು ಹೇಳಿದ್ದಾರೆ.

'ಮಳೆಯಿಂದಾಗಿ ಮೇ 29ರಂದು ರಾಜ್ಯದಲ್ಲಿ ಕಂಡುಬಂದ ಪ್ರವಾಹದಿಂದಾಗಿ ಮೂವರು ಮೃತಪಟ್ಟಿದ್ದಾರೆ. 9 ಜನರು ಗಾಯಗೊಂಡಿದ್ದರೆ, ಒಬ್ಬರು ನಾಪತ್ತೆಯಾಗಿದ್ದಾರೆ' ಎಂದೂ ಅವರು ತಿಳಿಸಿದ್ದಾರೆ.

'ರಾಜ್ಯದಲ್ಲಿ 18 ಸ್ಥಳಗಳಲ್ಲಿ ನದಿಗಳ ಒಡ್ಡುಗಳು ಒಡೆದಿದ್ದು, ಈ ಪೈಕಿ 17 ಸ್ಥಳಗಳಲ್ಲಿ ಮುಚ್ಚಲಾಗಿದೆ' ಎಂದು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಖ್ಯಾಂಶಗಳು

- ಪ್ರವಾಹದಿಂದ ರಸ್ತೆ ಕೊಚ್ಚಿಹೋದ ಪರಿಣಾಮ ಅಸ್ಸಾಂನ ಹಫ್ಲಾಂಗ್–ಸಿಲ್ಚಾರ್ ನಡುವಿನ ಸಂಪರ್ಕ ಕಡಿತ
- ಭೂಕುಸಿತದ ಪರಿಣಾಮ ಹಫ್ಲಾಂಗ್–ಹರಾಂಗ್‌ಜಾವೊ ರಸ್ತೆಯಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ
- ಹಫ್ಲಾಂಗ್–ಬದರ್‌ಪುರ ರೈಲು ಮಾರ್ಗದ ಹಲವೆಡೆ ಭೂಕುಸಿತ

ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಯಂತ್ರಣಕ್ಕೆ ತರಲಾಗಿದ್ದು, ಪರಿಹಾರ ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತಿದೆ

ಎನ್.ಬಿರೇನ್ ಸಿಂಗ್, ಮಣಿಪುರ ಮುಖ್ಯಮಂತ್ರಿ



ಪ್ರವಾಹ ಪೀಡಿತ ಅಸ್ಸಾಂನ ನಾಗಾವ್ ಜಿಲ್ಲೆಯ ಕಂಪುರ ಗ್ರಾಮದ ಮಹಿಳೆ ತನ್ನ ಸಾಮಗ್ರಿಗಳೊಂದಿಗೆ ಎತ್ತರದ ಪ್ರದೇಶವೊಂದರಲ್ಲಿ ಶುಕ್ರವಾರ ಆಶ್ರಯ ಪಡೆದಿದ್ದಾರೆ —ಪಿಟಿಐ ಚಿತ್ರ

ಮಾಹಿತಿ ಪಡೆದ ಸಚಿವ ಅಮಿತ್ ಶಾ

ನವದೆಹಲಿ(ಪಿಟಿಐ): ಈಶಾನ್ಯ ರಾಜ್ಯಗಳಲ್ಲಿ ಸುರಿದ ಮಳೆ ಹಾಗೂ ಉಂಟಾಗಿರುವ ಪ್ರವಾಹ ಪರಿಸ್ಥಿತಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಮಾಹಿತಿ ಪಡೆದ್ದಾರೆ.

ಐದು ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿರುವ ಅವರು, ರಕ್ಷಣೆ ಮತ್ತು ಪರಿಹಾರ ಕಾರ್ಯಕ್ಕೆ ಸಾಧ್ಯವಿರುವ ಎಲ್ಲ ಸಹಕಾರ ನೀಡುವುದಾಗಿಯೂ ಭರವಸೆ ನೀಡಿದ್ದಾರೆ.

'ಅಸ್ಸಾಂ, ತ್ರಿಪುರಾ, ಮಣಿಪುರ, ಮೇಘಾಲಯ ಹಾಗೂ ಮಿಜೋರಾಂನಲ್ಲಿನ ಪ್ರವಾಹ ಪರಿಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಹಿತಿ ನೀಡಲಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

6 ನದಿಗಳಲ್ಲಿ ಪ್ರವಾಹ ಪರಿಸ್ಥಿತಿ: ಕೇಂದ್ರ ಜಲ ಆಯೋಗ

ನವದೆಹಲಿ(ಪಿಟಿಐ): ಅಸ್ಸಾಂನ ಬ್ರಹ್ಮಪುತ್ರ, ಮಣಿಪುರದ ಬರಾಕ್ ಸೇರಿದಂತೆ ಈಶಾನ್ಯ ರಾಜ್ಯಗಳ 6 ನದಿಗಳು ಉಕ್ಕಿ ಹರಿಯುತ್ತಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಇದರಿಂದ ಹಲವಾರು ಜಿಲ್ಲೆಗಳು ಅಪಾಯ ಎದುರಿಸುತ್ತಿವೆ ಎಂದು ಕೇಂದ್ರ ಜಲ ಆಯೋಗ ಹೇಳಿದೆ.

ಪ್ರವಾಹದಿಂದಾಗಿ ಅಸ್ಸಾಂನ 9 ಜಿಲ್ಲೆಗಳ ಎರಡು ಲಕ್ಷಕ್ಕೂ ಅಧಿಕ ಜನರು ತೊಂದರೆ ಅನುಭವಿಸುತ್ತಿದ್ದಾರೆ. ರೀಮಲ್ ಚಂಡಮಾರುತ ಹಾಗೂ ಇದರಿಂದಾಗಿ ಸುರಿದ ಮಳೆ ಪರಿಣಾಮ ಉಂಟಾದ ಪ್ರವಾಹದಿಂದ ಒಟ್ಟು 6 ಜನರು ಮೃತಪಟ್ಟಿದ್ದಾರೆ ಎಂದು ಆಯೋಗದ ಅಧಿಕಾರಿಗಳು ಹೇಳಿದ್ದಾರೆ.

ಜೊರ್ಹಾಟ್ ಜಿಲ್ಲೆಯ ನಿಯಾಮತಿಘಾಟ್‌ನಲ್ಲಿ ಬ್ರಹ್ಮಪುತ್ರ ನದಿಯು 85.25 ಮೀಟರ್ ಎತ್ತರದಷ್ಟು ಹರಿಯುತ್ತಿದೆ. ಅಪಾಯ ಮಟ್ಟ 85.54 ಮೀ.ಗಿಂತ 0.28 ಮೀಟರ್‌ನಷ್ಟು ಅಧಿಕ. ಬರಾಕ್ ನದಿಯು ಸಹ ಅಪಾಯ ಮಟ್ಟದಲ್ಲಿ ಹರಿಯುತ್ತಿದೆ ಎಂದು ತಿಳಿಸಿದ್ದಾರೆ.

ಅಸ್ಸಾಂನ ನಾಗಾವ್ ಜಿಲ್ಲೆಯಲ್ಲಿ ಕೊಪಿಲಿ ನದಿ, ಕರೀಂಗಂಜ್ ಜಿಲ್ಲೆಯಲ್ಲಿ ಕುಶಿಯಾರಾ ನದಿ, ಮತಿಜುರಿ ಜಿಲ್ಲೆಯಲ್ಲಿ ಕತಹಾಲ್ ನದಿ, ಧಳೇಶ್ವರಿ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

63 ತಾಸು ರೈಲು ಸಂಚಾರಕ್ಕೆ ನಿರ್ಬಂಧ

ಮುಂಬೈ (ಪಿಟಿಐ): ಠಾಣೆ ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್‌ಗಳ ವಿಸ್ತರಣೆಗಾಗಿ ಕೇಂದ್ರ ರೈಲ್ವೆಯು 63 ತಾಸು ರೈಲು ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದು, ಶುಕ್ರವಾರ ಬೆಳಿಗ್ಗೆ ಜನದಟ್ಟಣೆ ಗೋಚರಿಸಿತು. ಮುಂಬೈನ ಉಪನಗರಗಳ ನಡುವೆ ಸಂಚರಿಸುವ ಪ್ರಯಾಣಿಕರು ಪರದಾಡಿದರು.

ಗುರುವಾರ ಮಧ್ಯರಾತ್ರಿಯಿಂದಲೇ ನಿರ್ಬಂಧ ಜಾರಿಗೊಂಡಿದೆ. ಇದು ಕೇಂದ್ರ ರೈಲ್ವೆಯ ಮುಖ್ಯ ಕಾರಿಡಾರ್‌ನಲ್ಲಿನ ಉಪನಗರಗಳ ಸೇವೆಗಳ ಮೇಲೆ ಪರಿಣಾಮ ಬೀರಿದ್ದು, ಕಚೇರಿಗಳಿಗೆ ತೆರಳುವವರು ಸೇರಿದಂತೆ ವಿವಿಧ ಕೆಲಸದ ಮೇಲೆ ಸಂಚರಿಸುವ ಲಕ್ಷಾಂತರ ಜನರು ಸಮಸ್ಯೆ ಅನುಭವಿಸಿದರು.

ಠಾಣೆ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್ 5 ಮತ್ತು 6ರ ವಿಸ್ತರಣೆಗಾಗಿ ರೈಲು ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದರಿಂದ, ಉಳಿದ ರೈಲುಗಳ ಸಂಚಾರದಲ್ಲಿ 30 ನಿಮಿಷ ವಿಳಂಬವಾಯಿತು. ಪ್ಲಾಟ್‌ಫಾರ್ಮ್‌ಗಳಲ್ಲಿ ಜನದಟ್ಟಣೆ ಹೆಚ್ಚಿತ್ತು ಎಂದು ಪ್ರಯಾಣಿಕರು ದೂರಿದರು.

ವಿಸ್ತರಣೆ ಕಾಮಗಾರಿಗಾಗಿ ಶುಕ್ರವಾರ ಕನಿಷ್ಠ 6 ದೂರದ ರೈಲುಗಳು ಮತ್ತು 161 ಸ್ಥಳೀಯ ರೈಲುಗಳ ಸೇವೆಯನ್ನು ರದ್ದುಗೊಳಿಸಲಾಗುವುದು ಎಂದು ಕೇಂದ್ರ ರೈಲ್ವೆಯು ಘೋಷಿಸಿತ್ತು.

ರೈಲು ಸಂಚಾರದ ವಿಳಂಬ ಮತ್ತು ಜನದಟ್ಟಣೆಯನ್ನು ಅಂದಾಜಿಸಿದ್ದ ರೈಲ್ವೆ ಅಧಿಕಾರಿಗಳು ಅನಗತ್ಯ ಪ್ರಯಾಣವನ್ನು ಕೈಬಿಡುವಂತೆ ಉಪನಗರ ರೈಲು ಬಳಕೆದಾರರಿಗೆ ಸೂಚಿಸಿದ್ದರು. ಈ ಅವಧಿಯಲ್ಲಿ ಹೆಚ್ಚುವರಿ ಬಸ್‌ಗಳನ್ನು ಓಡಿಸುವಂತೆ ಸಾರಿಗೆ ಸಂಸ್ಥೆಗಳಿಗೆ ಮನವಿ ಮಾಡಿಕೊಂಡಿದ್ದರು. ಮನೆಯಿಂದಲೇ ಕೆಲಸ ಮಾಡುವ ಅವಕಾಶ ಹೊಂದಿರುವಂತಹವರು ತಮ್ಮ ಮನೆಗಳಲ್ಲೇ ಕೆಲಸ ಮಾಡುವಂತೆಯೂ, ತಮ್ಮ ನೌಕರರಿಗೆ ಪರ್ಯಾಯ ವಾಹನದ ವ್ಯವಸ್ಥೆ ಮಾಡುವಂತೆಯೂ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಕೋರಿದ್ದರು.

ಶುಕ್ರವಾರದಿಂದ ಭಾನುವಾರದ ವರೆಗಿನ ಅವಧಿಯಲ್ಲಿ 930 ಉಪನಗರ ರೈಲುಗಳ ಸೇವೆಗಳನ್ನು ರದ್ದುಗೊಳಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ವಿಮಾನ ವಿಳಂಬ: ಪ್ರಯಾಣಿಕರ ಪರದಾಟ

ನವದೆಹಲಿ (ಪಿಟಿಐ): ದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ಕೊಗೆ ಏರ್ ಇಂಡಿಯಾ ವಿಮಾನದ ಮೂಲಕ ಪ್ರಯಾಣಿಸಬೇಕಿದ್ದ ಪ್ರಯಾಣಿಕರು ವಿಮಾನದ ಅತಿಯಾದ ವಿಳಂಬದಿಂದ ತೊಂದರೆ ಅನುಭವಿಸಿದರು. ವಿಮಾನ ಬದಲಾವಣೆ, ಸಮಯ ಮರು ಹೊಂದಾಣಿಕೆಯಿಂದ ಬಸವಳಿದರು.

ಬದಲಿಸಿದ ವಿಮಾನದಲ್ಲಿ ಹವಾನಿಯಂತ್ರಣ ವ್ಯವಸ್ಥೆ ಕಾರ್ಯ ನಿರ್ವಹಿಸದ ಕಾರಣ ಕೆಲ ಪ್ರಯಾಣಿಕರು ಮೂರ್ಛೆ ಹೋದ ಘಟನೆಯೂ ನಡೆಯಿತು. ಇದೆಲ್ಲದರ ಪರಿಣಾಮ 'ಎಐ 183' ವಿಮಾನದ ಪ್ರಯಾಣಿಕರು 'ಏರೋಬ್ರಿಡ್ಜ್'ನಲ್ಲಿಯೇ ಸುಮಾರು ಒಂದು ಗಂಟೆ ಕಾಯಬೇಕಾದ ದುಃಸ್ಥಿತಿ ಎದುರಾಯಿತು ಎಂದು ಪ್ರಯಾಣಿಕರೊಬ್ಬರು ಅಳಲು ತೋಡಿಕೊಂಡಿದ್ದಾರೆ.

200 ಪ್ರಯಾಣಿಕರಿದ್ದ ವಿಮಾನ ಗುರುವಾರ ಮಧ್ಯಾಹ್ನ 3.30ಕ್ಕೆ ಟೇಕ್‌ಆಫ್ ಆಗಬೇಕಿತ್ತು. ತಾಂತ್ರಿಕ ಲೋಪದ ಕಾರಣ ಅದರ ಸಮಯವನ್ನು ಗುರುವಾರ ರಾತ್ರಿ 10 ಗಂಟೆಗೆ, ಪುನಃ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಮರು ಹೊಂದಿಸಲಾಯಿತು. ಮತ್ತೆ ಸಮಯವನ್ನು ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಮರು ನಿಗದಿ ಮಾಡಲಾಯಿತು ಎಂದು ಪ್ರಯಾಣಿಕರು ಹೇಳಿದ್ದಾರೆ.

ನಾಳೆ ಶರಣಾಗುತ್ತೇನೆ : ಕೇಜ್ರಿವಾಲ್

ನವದೆಹಲಿ (ಪಿಟಿಐ): 'ಜೂನ್ 2ರಂದು ಶರಣಾಗುತ್ತೇನೆ' ಎಂದು ಶುಕ್ರವಾರ ಹೇಳಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ಜೈಲಿಗೆ ಹೋದ ಬಳಿಕ, ನನ್ನ ವೃದ್ಧ ಮತ್ತು ಆರೋಗ್ಯ ಸಮಸ್ಯೆಯಿರುವ ಪೋಷಕರನ್ನು ನೋಡಿಕೊಳ್ಳುವಂತೆ' ದೆಹಲಿ ಜನರಲ್ಲಿ ಮನವಿ ಮಾಡಿದರು.

'ಭಾನುವಾರ ಮಧ್ಯಾಹ್ನ 3 ಗಂಟೆಗೆ ಶರಣಾಗಲು ಮನೆಯಿಂದ ಹೊರಡುತ್ತೇನೆ. ಈ ಬಾರಿ ಅವರು ನನಗೆ ಹೆಚ್ಚು ಹಿಂಸೆ ನೀಡುವ ಸಾಧ್ಯತೆ ಇದೆ. ಯಾವುದೇ ಕಾರಣಕ್ಕೂ ತಲೆಬಾಗುವುದಿಲ್ಲ' ಎಂದು ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ದೆಹಲಿ ಜನರಿಗೆ ದೊರೆಯುತ್ತಿರುವ ಎಲ್ಲ ಸೌಲಭ್ಯಗಳು ನನ್ನ ಅನುಪಸ್ಥಿತಿಯಲ್ಲೂ ಮುಂದುವರಿಯುತ್ತವೆ. ಜೈಲಿನಲ್ಲಿದ್ದರೂ ನಿಮ್ಮ ಬಗ್ಗೆ ನಾನು ಕಾಳಜಿ ಮಾಡುತ್ತೇನೆ. ನೀವು ಸಂತಸದಿಂದ ಇದ್ದರೆ, ನಾನೂ ಸಂತಸದಿಂದ ಇರುತ್ತೇನೆ' ಎಂದರು.

'ನಾನು ಜೈಲಿನಿಂದ ಹಿಂದಿರುಗಿದ ಬಳಿಕ ಪ್ರತಿ ತಾಯಿ ಮತ್ತು ಸಹೋದರಿಯರಿಗೆ ತಿಂಗಳಿಗೆ ತಲಾ ₹1,000 ನೀಡುತ್ತೇನೆ' ಎಂದು ಅವರು ಭರವಸೆ ನೀಡಿದರು.

'ನಿಮ್ಮ ಕುಟುಂಬದ ಮಗನಾಗಿ ನಾನು ಸದಾ ಕರ್ತವ್ಯ ನಿರ್ವಹಿಸಿದ್ದೇನೆ. ನನ್ನ ಹೆತ್ತವರಿಗೆ ವಯಸ್ಸಾಗಿದೆ. ತಾಯಿಗೆ ಆರೋಗ್ಯ ಸಮಸ್ಯೆ ಇದೆ. ಹೀಗಾಗಿ ಚಿಂತಿತನಾಗಿದ್ದೇನೆ. ಜೈಲಿಗೆ ಹೋದ ಬಳಿಕ ನನ್ನ ಪೋಷಕರನ್ನು ನೋಡಿಕೊಳ್ಳಿ. ಅವರಿಗಾಗಿ ಪ್ರಾರ್ಥಿಸಿ' ಎಂದು ಅವರು ಕೋರಿದರು.

24 ಗಂಟೆ ಉಚಿತ ವಿದ್ಯುತ್, ಮಹಿಳಾ ಬಸ್ ಪ್ರಯಾಣ ಸೇರಿದಂತೆ ಜನರಿಗೆ ಸಿಗುತ್ತಿರುವ ಎಲ್ಲ ಸೌಲಭ್ಯಗಳು ಮುಂದುವರಿಯಲಿವೆ ಎಂದು ಅವರು ಪುನರುಚ್ಚರಿಸಿದರು.

ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯಕ್ಕಾಗಿ ಎಎಪಿ ರಾಷ್ಟ್ರೀಯ ಸಂಚಾಲಕ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಜೂನ್ 1ರವರೆಗೆ ಮಧ್ಯಂತರ ಜಾಮೀನು ನೀಡಿದೆ.

'ಇಳಿದ ತೂಕ ಏರುತ್ತಿಲ್ಲ'

'50 ದಿನಗಳು ಜೈಲಿನಲ್ಲಿದ್ದಾಗ ನನ್ನ ದೇಹದ ತೂಕದಲ್ಲೂ ಇಳಿಕೆಯಾಗಿತ್ತು. ಜೈಲಿಗೆ ಹೋದಾಗ 70 ಕೆ.ಜಿ. ಇದ್ದ ನಾನು, ಇಂದು 64 ಕೆ.ಜಿ. ಇದ್ದೇನೆ. ಜೈಲಿನಿಂದ ಹೊರಬಂದ ಮೇಲೂ ತೂಕದಲ್ಲಿ ಏರಿಕೆಯಾಗಿಲ್ಲ. ಇದು ಪ್ರಮುಖ ಕಾಯಿಲೆಯ ಲಕ್ಷಣ ಇರಬಹುದು ಎಂದು ವೈದ್ಯರು ಅಂದಾಜಿಸಿದ್ದಾರೆ. ಇದನ್ನು ತಿಳಿದುಕೊಳ್ಳಲು ಕೆಲವು ಪರೀಕ್ಷೆಗಳನ್ನು ಮಾಡಿಸಬೇಕಿದೆ' ಎಂದು ಅವರು ಪುನರುಚ್ಚರಿಸಿದರು.

'ಸುಳ್ಳು ಹೇಳುವ ಕಾಯಿಲೆ'–ಬಿಜೆಪಿ ಟೀಕೆ: ಕೇಜ್ರಿವಾಲ್ ಅವರ ಆರೋಪಗಳ ಕುರಿತು ಪ್ರತಿಕ್ರಿಯಿಸಿರುವ ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ ಅವರು, 'ಕೇಜ್ರಿವಾಲ್ ಅವರಿಗೆ ಸುಳ್ಳು ಹೇಳುವ ಕಾಯಿಲೆ ಇದೆ' ಎಂದು ಹೇಳಿದ್ದಾರೆ.

ಬಿಭವ್ ಅರ್ಜಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): ಎಎಪಿಯ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಸಲ್ಲಿಸಿರುವ ಅರ್ಜಿಯ ತೀರ್ಪನ್ನು ದೆಹಲಿ ಹೈಕೋರ್ಟ್ ಶುಕ್ರವಾರ ಕಾಯ್ದಿರಿಸಿತು.



ಬಿಭವ್ ಕುಮಾರ್

ಎರಡೂ ಕಡೆಯ ಹಿರಿಯ ವಕೀಲರ ವಾದಗಳನ್ನು ಆಲಿಸಿದ ನ್ಯಾಯಮೂರ್ತಿ ಸ್ವರಣಾ ಶರ್ಮಾ ಅವರು ತೀರ್ಪನ್ನು ಕಾಯ್ದಿರಿಸಿದರು.

ಬಿಭವ್ ಅವರು ತಮ್ಮ ಬಂಧನ ಕಾನೂನು ಬಾಹಿರವಾಗಿದ್ದು, ಅಪರಾಧ ಪ್ರಕ್ರಿಯಾ ಸಂಹಿತೆ ಸೆಕ್ಷನ್ 41ಎ ಉಲ್ಲಂಘನೆಯಾಗಿದೆ ಎಂದು ಘೋಷಿಸಲು ಅರ್ಜಿಯಲ್ಲಿ ಕೋರಿದ್ದಾರೆ. ತಮ್ಮ ಅಕ್ರಮ ಬಂಧನಕ್ಕೆ ಸೂಕ್ತ ಪರಿಹಾರ ಒದಗಿಸಬೇಕು ಮತ್ತು ತನ್ನ ಬಂಧನದ ನಿರ್ಧಾರ ತೆಗೆದುಕೊಳ್ಳುವಲ್ಲಿ ಭಾಗಿಯಾಗಿರುವ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಇಲಾಖಾ ಕ್ರಮ ಜರುಗಿಸಬೇಕು ಎಂದೂ ಅವರು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಸೆಕ್ಷನ್ 41ಎ ಅನುಸರಣೆಗೆ ಸಂಬಂಧಿಸಿದ ಆಕ್ಷೇಪಣೆಯನ್ನು ಈಗಾಗಲೇ ವಿಚಾರಣಾ ನ್ಯಾಯಾಲಯ ತಿರಸ್ಕರಿಸಿದೆ. ಅರ್ಜಿದಾರರು ಈ ಸಂಬಂಧ ರಿಟ್ ಅರ್ಜಿ ಸಲ್ಲಿಸುವ ಬದಲಿಗೆ ಆ ಆದೇಶದ ಪರಿಷ್ಕರಣೆಗೆ ಕೋರಬಹುದು ಎಂದು ದೆಹಲಿ ಪೊಲೀಸರ ಪರ ವಕೀಲರು ವಾದಿಸಿದರು.

ನ್ಯಾಯಾಂಗ ವಶಕ್ಕೆ: ದೆಹಲಿಯ ನ್ಯಾಯಾಲಯವೊಂದು ಬಿಭವ್ ಅವರನ್ನು 14 ದಿನಗಳ ಅವಧಿಗೆ ನ್ಯಾಯಾಂಗ ವಶಕ್ಕೆ ನೀಡಬೇಕೆಂದು ಸೂಚನೆ ನೀಡಿದೆ.

ಕೃಷ್ಣ ಜನ್ಮಸ್ಥಾನ ತೀರ್ಪು ಕಾಯ್ದಿರಿಸಿದ ಕೋರ್ಟ್

ಪ್ರಯಾಗ್‌ರಾಜ್ (ಪಿಟಿಐ): ಮಥುರಾದಲ್ಲಿರುವ ಕೃಷ್ಣ ಜನ್ಮಸ್ಥಾನ–ಶಾಹಿ ಈದ್ಗಾ ಮಸೀದಿಗೆ ಸಂಬಂಧಿಸಿದ ಪ್ರಕರಣಗಳ ಕುರಿತ ತನ್ನ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಶುಕ್ರವಾರ ಕಾಯ್ದಿರಿಸಿದೆ.

ಶಾಹಿ ಈದ್ಗಾ ಮಸೀದಿಯು, ಔರಂಗಜೇಬನ ಆಡಳಿತಾವಧಿಯಲ್ಲಿ ದೇವಸ್ಥಾನವನ್ನು ಧ್ವಂಸಗೊಳಿಸಿದ ಜಾಗದಲ್ಲಿ ನಿರ್ಮಾಣವಾಗಿದೆ. ಹೀಗಾಗಿ, ಈ ಮಸೀದಿಯನ್ನು ತೆರವುಗೊಳಿಸಬೇಕು ಎಂದು ಕೋರಿ ಹಲವು ಪ್ರಕರಣಗಳು ದಾಖಲಾಗಿವೆ. ಆದರೆ, ಪೂಜಾ ಸ್ಥಳಗಳ ಕಾಯ್ದೆ–191 ಮತ್ತು ಇತರೆ ಕಾನೂನುಗಳು ಇಂಥ ಅರ್ಜಿಗಳನ್ನು ನಿರ್ಬಂಧಿಸುತ್ತವೆ ಎನ್ನುವುದು ಮುಸ್ಲಿಂ ಅರ್ಜಿದಾರರ ವಾದವಾಗಿದೆ.

ಹೆಚ್ಚುವರಿ ನೀರಿಗಾಗಿ 'ಸುಪ್ರೀಂ'ಗೆ ದೆಹಲಿ ಸರ್ಕಾರ ಮೊರೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನೀರಿನ ಬಿಕ್ಕಟ್ಟು ತೀವ್ರವಾಗಿದ್ದು, ಹೆಚ್ಚುವರಿ ನೀರು ಬಿಡುಗಡೆ ಮಾಡಲು ಪಕ್ಕದ ಹರಿಯಾಣ ರಾಜ್ಯಕ್ಕೆ ನಿರ್ದೇಶನ ನೀಡುವಂತೆ ಕೋರಿ ದೆಹಲಿಯ ಎಎಪಿ ಸರ್ಕಾರ ಶುಕ್ರವಾರ ಸುಪ್ರೀಂ ಕೋರ್ಟ್ ಮೊರೆಹೋಗಿದೆ.

ಬಿಸಿಗಾಳಿಯ ಪರಿಣಾಮ ದೆಹಲಿಯಲ್ಲಿ ನೀರಿನ ಬೇಡಿಕೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಹೀಗಾಗಿ ಒಂದು ತಿಂಗಳವರೆಗೆ ಹೆಚ್ಚುವರಿ ನೀರು ಬಿಡುಗಡೆ ಮಾಡುವಂತೆ ಹರಿಯಾಣ ಸರ್ಕಾರಕ್ಕೆ ಸೂಚಿಸುವಂತೆ ದೆಹಲಿ ಸರ್ಕಾರ ಕೋರಿದೆ. ದೆಹಲಿ ಜನರ ನೀರಿನ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಕೆಲಸ ಮಾಡುವುದು ಎಲ್ಲರ ಜವಾಬ್ದಾರಿ ಆಗಿದೆ ಎಂದು ಇದೇ ವೇಳೆ ದೆಹಲಿ ಸರ್ಕಾರ ಹೇಳಿದೆ.

ಹಕ್ಕಿಜ್ವರ: 4 ರಾಜ್ಯಗಳಲ್ಲಿ ಸೋಂಕು ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಹಕ್ಕಿಜ್ವರ (ಎಚ್5ಎನ್1) ಹರಡುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ರಾಜ್ಯಗಳಿಗೂ ಎಚ್ಚರಿಕೆ ಸಂದೇಶ ರವಾನಿಸಿರುವ ಕೇಂದ್ರ ಸರ್ಕಾರವು, ಸಾಕುಪಕ್ಷಿಗಳು ಮತ್ತು ಕೋಳಿಗಳು ಅನುಮಾನಾಸ್ಪದ ರೀತಿಯಲ್ಲಿ ಸಾವಿಗೀಡಾದರೆ ಪಶುಸಂಗೋಪನೆ ಇಲಾಖೆಗೆ ಕೂಡಲೇ ಮಾಹಿತಿ ನೀಡಬೇಕು ಎಂದು ಹೇಳಿದೆ.

ಮಾಹಿತಿ ನೀಡುವುದರಿಂದ ಹಕ್ಕಿಜ್ವರ ತಡೆಗಟ್ಟುವ ದಿಸೆಯಲ್ಲಿ ರೂಪಿಸಲಾಗಿರುವ ರಾಷ್ಟ್ರೀಯ ಕಾರ್ಯಯೋಜನೆಯನ್ನು ಜಾರಿಗೊಳಿಸಲು ಸಹಕಾರಿಯಾಗಲಿದೆ ಎಂದು ಅದು ಹೇಳಿದೆ.

ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ) ಮತ್ತು ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯು ಈ ಕುರಿತು ಮೇ 25ರಂದು ಜಂಟಿ ಸೂಚನೆ ಹೊರಡಿಸಿವೆ. ಆಂಧ್ರಪ್ರದೇಶ (ನೆಲ್ಲೂರ್ ಜಿಲ್ಲೆ), ಮಹಾರಾಷ್ಟ್ರ (ನಾಗ್ಪುರ), ಕೇರಳ (ಆಲಪ್ಪುಳ, ಕೋಟಯಂ, ಪತ್ತನಂತಿಟ್ಟ) ಮತ್ತು ಜಾರ್ಖಂಡ್ (ರಾಂಚಿ) ರಾಜ್ಯಗಳಲ್ಲಿ ಈಗಾಗಲೇ ಹಕ್ಕಿಜ್ವರದ ಪ್ರಕರಣಗಳು ವರದಿಯಾಗಿವೆ ಎಂದು ಸೂಚನೆಯಲ್ಲಿ ತಿಳಿಸಲಾಗಿದೆ.

ಹಕ್ಕಿಜ್ವರ ವೈರಾಣುವು ವೇಗವಾಗಿ ಪ್ರಸರಣವಾಗುತ್ತದೆ. ಅದು ಮಾನವರಿಗೂ ತಗುಲುವ ಅಪಾಯವಿದೆ. ಅದರ ಪ್ರಸರಣವನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸಲಹೆ ನೀಡಿದೆ.


ಹಕ್ಕಿಜ್ವರದ ಲಕ್ಷಣ, ಕಾಯಿಲೆ ಸ್ವರೂಪದ ಕುರಿತು ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಲು ಸೂಚಿಸಿದೆ.

ಸೂರ್ಯನಿಗೆ ಪ್ರಧಾನಿಯಿಂದ ಅರ್ಘ್ಯ

ಕನ್ಯಾಕುಮಾರಿ (ಪಿಟಿಐ): ಇಲ್ಲಿನ ವಿವೇಕಾನಂದ ಸ್ಮಾರಕದಲ್ಲಿ ಗುರುವಾರ ಸಂಜೆ ಧ್ಯಾನ ಆರಂಭಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಶುಕ್ರವಾರ ಬೆಳಿಗ್ಗೆ ಸೂರ್ಯನಿಗೆ ಅರ್ಘ್ಯ ಸಮರ್ಪಣೆ ಮಾಡಿದರು. ಜೊತೆಗೆ ಎರಡೂ ಕೈಗಳನ್ನು ಜೋಡಿಸಿ, ನಮಸ್ಕಾರ ಮಾಡಿದರು.

ಧ್ಯಾನ ಮಂಟಪದಲ್ಲಿ ಕೇಸರಿ ಬಣ್ಣದ ಅಂಗಿ, ಶಾಲು ಮತ್ತು ಧೋತಿಯಲ್ಲಿರುವ ಚಿತ್ರಗಳನ್ನು ಸಹ ಬಿಜೆಪಿಯು 'ಎಕ್ಸ್' ಖಾತೆ ಸೇರಿದಂತೆ ತನ್ನ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ.

'ಅದೆಷ್ಟು ದೃಷ್ಟಿಕೋನಗಳು! ಅದೆಷ್ಟು ವಿಡಿಯೊಗಳು! ಸ್ವಾಮಿ ವಿವೇಕಾನಂದ ಮೌನವಾಗಿ ಇದ್ದಾರೆ' ಪ್ರಧಾನಿ ಮೋದಿ ಅವರು ಧ್ಯಾನ ಮಾಡುತ್ತಿರುವ ವಿಡಿಯೊ ಮತ್ತು ಚಿತ್ರಗಳನ್ನು ಪೋಸ್ಟ್ ಮಾಡಿದ ಬಿಜೆಪಿಗೆ ತಮಿಳುನಾಡು ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ. ಸೆಲ್ವಪೆರುಂಥಗೈ ಅವರು ಈ ರೀತಿ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ.



ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಸೂರ್ಯನಿಗೆ ಅರ್ಘ್ಯ ಸಮರ್ಪಿಸಿದರು —ಪಿಟಿಐ ಚಿತ್ರ

ಪಣಜಿ: ಬಾಂಬೆ ಹೈಕೋರ್ಟ್‌ನ ಗೋವಾ ಪೀಠದ ನ್ಯಾಯಮೂರ್ತಿ ಅನುಮತಿ

ಮೊದಲ 'ಮರಣ ಇಚ್ಛೆಯ ಉಯಿಲು' ಕಾರ್ಯಗತ

ಪಣಜಿ(ಪಿಟಿಐ): ಬಾಂಬೆ ಹೈಕೋರ್ಟ್‌ನ ಗೋವಾ ಪೀಠವು ಶುಕ್ರವಾರ ವ್ಯಕ್ತಿಯೊಬ್ಬರ 'ಮರಣ ಇಚ್ಛೆಯ ಉಯಿಲು' (ಲಿವಿಂಗ್ ವಿಲ್) ಕಾರ್ಯಗತಗೊಳಿಸಲು ಅನುಮತಿ ನೀಡಿದೆ.

ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ, ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿ ಎಂ.ಎಸ್.ಸೋನಕ್ ಅವರು 'ಮರಣ ಇಚ್ಛೆಯ ಉಯಿಲು' ಪತ್ರಕ್ಕೆ ಒಪ್ಪಿಗೆ ನೀಡಿದರು.

ಈ ಮೂಲಕ ನ್ಯಾಯಮೂರ್ತಿ ಸೋನಕ್ ಅವರು, ಮಾರಣಾಂತಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಗೆ ಅಳವಡಿಸಿರುವ ಜೀವ ರಕ್ಷಕ ಸಾಧನ ತೆಗೆಯುವುದಕ್ಕೆ ಸಂಬಂಧಿಸಿದ 'ಮರಣ ಇಚ್ಛೆಯ' ಉಯಿಲಿಗೆ ಸಮ್ಮತಿ ನೀಡಿದ ದೇಶದ ಮೊದಲ ನ್ಯಾಯಮೂರ್ತಿ ಎನಿಸಿದ್ದಾರೆ.

ಅದೇ ರೀತಿ ಗೋವಾ, 'ಮರಣ ಇಚ್ಛೆಯ ಉಯಿಲು' ಸೌಲಭ್ಯವನ್ನು ಅನುಷ್ಠಾನಕ್ಕೆ ತಂದ ಮೊದಲ ರಾಜ್ಯವೆನಿಸಿದೆ. ವ್ಯಕ್ತಿಯೊಬ್ಬರ 'ಮರಣ ಇಚ್ಛೆಯ ಉಯಿಲು' ಪತ್ರಕ್ಕೆ ಡಾ.ಸಂದೇಶ ಚೋಡನಕರ್ ಹಾಗೂ ದಿನೇಶ ಶೆಟ್ಟಿ ಎಂಬುವವರು ಸಾಕ್ಷಿಗಳಾಗಿದ್ದರು.

ಈ ವೇಳೆ ಮಾತನಾಡಿದ ನ್ಯಾಯಮೂರ್ತಿ ಸೋನಕ್, 'ಮರಣ ಇಚ್ಛೆಯ ಉಯಿಲಿಗೆ ಸಂಬಂಧಿಸಿ ಎದುರಾಗುವ ತೊಡಕುಗಳನ್ನು ಜನರು ಅರ್ಥ ಮಾಡಿಕೊಂಡು, ನಂತರವಷ್ಟೆ ಸೂಕ್ತ ನಿರ್ಧಾರ ಕೈಗೊಳ್ಳುವುದು ಉತ್ತಮ' ಎಂದು ಮನವಿ ಮಾಡಿದರು.


ಇದೇ ವೇಳೆ, ಮರಣ ಇಚ್ಛೆಯ ಉಯಿಲಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಒಳಗೊಂಡ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

ನ್ಯಾಯಮೂರ್ತಿಗಳಾದ ವಾಲ್ಮೀಕಿ ಮೆನೆಜಸ್ ಹಾಗೂ ಜಿತೇಂದ್ರ ಜೈನ್, ವೈದ್ಯಕೀಯ ಸೇವೆಗಳ ನಿರ್ದೇಶನಾಲಯದ ಮುಖ್ಯ ವೈದ್ಯಾಧಿಕಾರಿ ಡಾ.ಮೇಧಾ ಸಾಲ್ಕರ್, ಐಎಂಎ ಗೋವಾ ಶಾಖೆ ಅಧ್ಯಕ್ಷ ಡಾ.ಶೇಖರ್ ಸಾಲ್ಕರ್ ಉಪಸ್ಥಿತರಿದ್ದರು.

ಮಾರಣಾಂತಿಕ ಕಾಯಿಲೆಯಿಂದ ಬಳಲುವ ವ್ಯಕ್ತಿಯು, ತನಗೆ ಅಳವಡಿಸಲಾಗಿರುವ ಜೀವ ರಕ್ಷಕ ಸಾಧನಗಳನ್ನು ತೆಗೆಯುವುದಕ್ಕೆ ಸಂಬಂಧಿಸಿ ಈ ಉಯಿಲಿನ ಮೂಲಕ ನಿರ್ದೇಶನ ನೀಡಬಹುದಾಗಿದೆ.

ಮುಖ್ಯಾಂಶಗಳು

- ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿ ಎಂ.ಎಸ್. ಸೋನಕ್ ಅವರಿಂದ ಒಪ್ಪಿಗೆ
- ಈ ಸೌಲಭ್ಯವನ್ನು ಅನುಷ್ಠಾನಕ್ಕೆ ತಂದ ಮೊದಲ ರಾಜ್ಯ ಗೋವಾ
- ಮಾರಣಾಂತಿಕ ಕಾಯಿಲೆಯಿಂದ ಬಳಲುವ ವ್ಯಕ್ತಿಗೆ ಅನುಮತಿ




ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನ ನಾಲ್ಕನೇ ಹೀಟ್‌ನಲ್ಲಿ ಶಿವರಾಜ್ ಬಾಬು ಅಲೆಗಳ ಮೇಲೆ ಕಸರತ್ತು ನಡೆಸಿದ ರೀತಿ –ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ರಾಷ್ಟ್ರೀಯ ಓಪನ್ ಸರ್ಫಿಂಗ್ • ತಮಿಳುನಾಡು ಸರ್ಫರ್‌ಗಳ ಪಾರಮ್ಯ

ಎಂಟರ ಘಟ್ಟಕ್ಕೆ ಶಿವರಾಜ್

• ವಿಕ್ರಂ ಕಾಂತಿಕೆರೆ

ಮಂಗಳೂರು: ಅಗ್ರ ಶ್ರೇಯಾಂಕಿತ, ತಮಿಳುನಾಡಿನ ಶಿವರಾಜ್ ಬಾಬು ಇಲ್ಲಿನ ಸಸಿಹಿತ್ಲು ಬೀಚ್‌ನಲ್ಲಿ ಶುಕ್ರವಾರ ಆರಂಭಗೊಂಡ ರಾಷ್ಟ್ರೀಯ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಗರದ ಮಂತ್ರ ಸರ್ಫ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಷನ್ ಸಹಯೋಗದಲ್ಲಿ ಭಾರತ ಸರ್ಫಿಂಗ್ ಫೆಡರೇಷನ್ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಮೊದಲ ದಿನ ತಮಿಳುನಾಡು ಕ್ರೀಡಾಪಟುಗಳು ಪಾರಮ್ಯ ಮೆರೆದರು.

ರಾಷ್ಟ್ರಮಟ್ಟದಲ್ಲಿ ನಾಲ್ಕನೇ ಕ್ರಮಾಂಕದಲ್ಲಿರುವ ಶಿವರಾಜ್ ಬಾಬು ರೋಮಾಂಚಕಾರಿ ಪ್ರದರ್ಶನದ ಮೂಲಕ 6.37 ಸ್ಕೋರ್ ಅಂತರದಲ್ಲಿ ಗೆದ್ದು ಸಂಭ್ರಮಿಸಿದರು. 9ನೇ ಕ್ರಮಾಂಕದ ಅಜೀಶ್ ಅಲಿ ಜೊತೆ ಶ್ರೀಕಾಂತ್, ಹರೀಶ್ ಎಂ, ತಯಿನ್ ಅರುಣ್ ಹಾಗೂ ಮಣಿಕಂಠನ್ ಕೂಡ ಎಂಟರ ಘಟ್ಟಕ್ಕೆ ಲಗ್ಗೆ ಇರಿಸಿದರು. ಆತಿಥೇಯ ಮಂತ್ರ ಸರ್ಫ್ ಕ್ಲಬ್‌ನ ಸುಬ್ರಮಣಿ ಕ್ವಾರ್ಟರ್ ಫೈನಲ್ ತಲುಪಿದ ಕರ್ನಾಟಕದ ಏಕೈಕ ಕ್ರೀಡಾಪಟು.

ಎರಡನೇ ಸುತ್ತಿನ ನಾಲ್ಕನೇ ಹೀಟ್‌ನಲ್ಲಿ ಸ್ಪರ್ಧಿಸಿದ ಶಿವರಾಜ್ ಬಾಬು 15.50 ಸ್ಕೋರ್ ಕಲೆ ಹಾಕಿದರು. 9.13 ಸ್ಕೋರು ಗಳಿಸಿದ ಮಣಿಕಂಠನ್ ಇದೇ ಹೀಟ್‌ನಿಂದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಸೆಲ್ವಂ ಮತ್ತು ಮಂತ್ರ ಸರ್ಫ್ ಕ್ಲಬ್‌ನ ಹಣಮಂತ ಪೂಜಾರ್ ಹೊರಬಿದ್ದರು. ಹಣಮಂತ ಪೂಜಾರ್ ಮೊದಲ ಸುತ್ತಿನಲ್ಲಿ ಗೆಲುವು ಸಾಧಿಸಿದ್ದರು. ಶಿವರಾಜ್, ಮೊದಲ ದಿನ ಗರಿಷ್ಠ ಸ್ಕೋರ್ ಕಲೆ ಹಾಕಿದ ಸರ್ಫರ್ ಎಂಬ ಗರಿಮೆಗೂ ಪಾತ್ರರಾದರು. ಎರಡನೇ ಸುತ್ತಿನ 4ನೇ ಹೀಟ್‌ನಲ್ಲಿ ಸ್ಪರ್ಧೆಗೆ ಇಳಿದ ಅಜೀಶ್ ಅಲಿ 15.33 ಸ್ಕೋರ್‌ನೊಂದಿಗೆ ಎರಡನೇ ಅತಿಹೆಚ್ಚು ಸ್ಕೋರ್ ಗಳಿಸಿದ ಕ್ರೀಡಾಪಟು ಎನಿಸಿದರು. ಅಖಿಲನ್ ಎಸ್ ಅವರಿಗಿಂತ ಅಜೀಶ್ 5.36 ಸ್ಕೋರ್‌ಗಳ ಮುನ್ನಡೆ ಸಾಧಿಸಿದರು.

> **ಪರಿಸ್ಥಿತಿ ಸವಾಲಿನಿಂದ ಕೂಡಿತ್ತು. ಆದರೂ ಎಂಟು ಅಲೆಗಳನ್ನು ಎದುರಿಸುವ ಅವಕಾಶ ಲಭಿಸಿತು. ಅವೆಲ್ಲವನ್ನೂ ಸಮರ್ಪಕವಾಗಿ ನಿರ್ವಹಿಸಿದ್ದರಿಂದ ಉತ್ತಮ ಸ್ಕೋರು ಗಳಿಸಲು ಸಾಧ್ಯವಾಯಿತು.**
> **ಶಿವರಾಜ್ ಬಾಬು,** ತಮಿಳುನಾಡು ಸರ್ಫರ್

ದಿನದ ಕೊನೆಯ ಸ್ಪರ್ಧೆ, ಎರಡನೇ ಸುತ್ತಿನ 7ನೇ ಹೀಟ್‌ನಲ್ಲಿ ಶ್ರೀಕಾಂತ್ ಡಿ 13.50 ಸ್ಕೋರ್ ಗಳಿಸಿ ಮಣಿವಣ್ಣನ್ ಟಿ (7.26) ಅವರನ್ನು ಹಿಂದಿಕ್ಕಿದರು.

ಮೊದಲ ದಿನದ ಎರಡನೇ ಸುತ್ತಿನ ಫಲಿತಾಂಶಗಳು: ಪುರುಷರ ಮುಕ್ತ ವಿಭಾಗ: 1ನೇ ಹೀಟ್: ಹರೀಶ್ ಎಂ–1. ಸ್ಕೋರು: 12.33, ತಯಿನ್ ಅರುಣ್–2 (9.33), ರಾಹುಲ್ ಪನೀರ್‌ಸೆಲ್ವಂ–3 (8.67); 2ನೇ ಹೀಟ್: ಅಜೀಶ್ ಅಲಿ–1 (15.33), ಅಖಿಲನ್ ಎಸ್–2 (9.97), ದಿನೇಶ್ ಸೆಲ್ವಮಣಿ–3 (7.43), ಕಾರ್ತಿಕ್ ಮುನುಸ್ವಾಮಿ–4 (3.54); 3ನೇ ಹೀಟ್: ಸಂಜಯ್ ಸೆಲ್ವಮಣಿ–1 (8.33), ಸುಬ್ರಮಣಿ ಎಂ–2 (5.44), ಕಿರಣ್‌ಜೀತ್ ಕುಮಾರ್–3 (4.87), ಲೆನಿನ್ ಅರುಮುಗಂ–4 (3.60); 4ನೇ ಹೀಟ್: ಶಿವರಾಜ್ ಬಾಬು–1 (15.50), ಮಣಿಕಂಠನ್ ಐ–2 (9.13), ಸೆಲ್ವಂ ಎಂ–3 (5.77), ಹಣಮಂತ ಪೂಜಾರ್–4 (4.43); 5ನೇ ಹೀಟ್: ಸೂರ್ಯ ಪಿ–1 (12.66), ಸಂಜಯ್ ಕುಮಾರ್ ಎಸ್–2 (8.07), ಸಂತೋಷ್ ಎಂ–3 (6.97), ಮಣಿಕಂಠನ್ ಡಿ (6.37); 6ನೇ ಹೀಟ್: ರೂಬನ್ ವಿ–1 (8.00), ಮಣಿಕಂಠನ್ ಎಂ–2 (6.36), ಕಲಪತಿ ಎಸ್–3 (6.10), ಕಾಮೇಶ್ ಎಸ್–4 (2.23); 7ನೇ ಹೀಟ್: ಶ್ರೀಕಾಂತ್ ಡಿ–1 (13.50), ಮಣಿವಣ್ಣನ್ ಟಿ–2 (7.26), ರಾಜು ಎಸ್–3 (6.34).

ನೀರಜ್ ವಿದೇಶದ ತರಬೇತಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಪ್ಯಾರಿಸ್ ಕ್ರೀಡಾಕೂಟಕ್ಕೆ ಸಿದ್ಧತೆಯಾಗಿ ಜಾವೆಲಿನ್ ಥ್ರೋಪಟು ನೀರಜ್ ಚೋಪ್ರಾ ಅವರು ಕೋಚ್ ಕ್ಲಾಸ್ ಬಾರ್ಟೋನಿಯೆಟ್ಜ್ ಮತ್ತು ಫಿಸಿಯೋ ಇಶಾನ್ ಮಾರ್ವಾಹಾ ಅವರೊಂದಿಗೆ 60 ದಿನ ಯುರೋಪ್‌ನಲ್ಲಿ ತರಬೇತಿ ಪಡೆಯಲು ಕ್ರೀಡಾ ಸಚಿವಾಲಯ ಗುರುವಾರ ಅನುಮೋದನೆ ನೀಡಿದೆ.

ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ಪದಕ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ ಚೋಪ್ರಾ ಮೇ 29 ರಿಂದ ಜುಲೈ 28 ರವರೆಗೆ ಯುರೋಪ್‌ನ ವಿವಿಧೆಡೆ ತರಬೇತಿ ಪಡೆಯಲಿದ್ದಾರೆ.

ಜೂನ್ 10ರಿಂದ 21 ರ ವರೆಗೆ ಹಂಗೇರಿಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಕೋಚ್ ವೇಯ್ನ್ ಪ್ಯಾಟ್ರಿಕ್ ಲೊಂಬಾರ್ಡ್ ಅವರನ್ನು ಸೇರಿಸಿಕೊಳ್ಳಲು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ವಿನೇಶಾ ಫೋಗಾಟ್ ಅವರ ಪ್ರಸ್ತಾಪಕ್ಕೆ ಮಿಷನ್ ಒಲಿಂಪಿಕ್ ಸೆಲ್ ಒಪ್ಪಿಕೊಂಡಿದೆ.

ಟಿ20 ವಿಶ್ವಕಪ್: ಭಾರತ–ಬಾಂಗ್ಲಾ ಅಭ್ಯಾಸ ಪಂದ್ಯ ಇಂದು

11ರ ಬಳಗದ ಆಯ್ಕೆಗೆ ಪ್ರಯೋಗ

ನ್ಯೂಯಾರ್ಕ್ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಶನಿವಾರ ಇಲ್ಲಿ ಬಾಂಗ್ಲಾದೇಶ ತಂಡದ ಎದುರು ಅಭ್ಯಾಸ ಪಂದ್ಯ ಆಡಲಿದೆ.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತವು ತನ್ನ ಮೊದಲ ಪಂದ್ಯವನ್ನು ಜೂನ್ 5ರಂದು ಆಡಲಿದೆ. ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಲಿರುವ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರಿಗೆ ತಮ್ಮ ಲಯಕ್ಕೆ ಮರಳಲು ಇದು ಉತ್ತಮ ಅವಕಾಶವಾಗಿದೆ.

ತಂಡದಲ್ಲಿರುವ 15 ಆಟಗಾರರೂ ಇತ್ತೀಚೆಗೆ ಮುಗಿದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡಿದ್ದಾರೆ. ಇದರಿಂದಾಗಿ ಟಿ20 ಮಾದರಿಯಲ್ಲಿ ಉತ್ತಮ ಪೂರ್ವಾಭ್ಯಾಸ ಅವರಿಗಾಗಿದೆ. ಎಲ್ಲರೂ ಪ್ರತಿಭಾನ್ವಿತರಾಗಿದ್ದು, 11 ಆಟಗಾರರ ಸಂಯೋಜನೆಯನ್ನು ಮಾಡಿ ಕಣಕ್ಕಿಳಿಸುವುದು ತಂಡದ ಮ್ಯಾನೇಜ್‌ಮೆಂಟ್ ಮುಂದೆ ಇರುವ ಸವಾಲು.

ಕಳೆದ 13 ವರ್ಷಗಳಿಂದ ಯಾವುದೇ ಮಾದರಿಯಲ್ಲಿಯೂ ಐಸಿಸಿ ಟ್ರೋಫಿಯನ್ನು ಭಾರತ ತಂಡ ಜಯಿಸಿಲ್ಲ. ಈ ಬಾರಿ ಟ್ರೋಫಿ ಗೆದ್ದು ಪ್ರಶಸ್ತಿ ಬರ ನೀಗಿಸುವ ಕನಸು ಕಾಣುತ್ತಿದೆ.

ಅಮೆರಿಕದ ತಾಣಗಳಲ್ಲಿ ಇದೇ ಮೊದಲ ಸಲ ವಿಶ್ವಕಪ್ ಟೂರ್ನಿ ನಡೆಯುತ್ತಿದೆ. ಹೊಸ ಪಿಚ್‌ಗಳು 'ಆಟ' ತೋರಿಸಲು ಕಾಯುತ್ತಿವೆ. ಆದ್ದರಿಂದ ಇಲ್ಲಿಯ ವಾತಾವರಣ ಹಾಗೂ ಪಿಚ್‌ಗಳಿಗೆ ಹೊಂದಿಕೊಳ್ಳಲು ಅಭ್ಯಾಸ ಪಂದ್ಯಗಳಲ್ಲಿ ಆಡುವುದು ಮಹತ್ವದ್ದಾಗಿದೆ.


ಅಭ್ಯಾಸ ನಿರತ ಭಾರತ ಕ್ರಿಕೆಟ್ ತಂಡ –ಪಿಟಿಐ ಚಿತ್ರ

ಅಲ್ಲದೇ ಈ ಪಂದ್ಯಗಳಲ್ಲಿ ಆಟಗಾರರ ಸಾಮರ್ಥ್ಯವನ್ನು ನೋಡಿ 11 ಜನರ ಆಯ್ಕೆಗೆ ಯೋಜಿಸಲು ಕೋಚ್ ರಾಹುಲ್ ದ್ರಾವಿಡ್ ಮತ್ತು ವ್ಯವಸ್ಥಾಪಕ ಮಂಡಳಿಗೆ ಅನುಕೂಲವಾಗಲಿದೆ.

ರೋಹಿತ್ ಅವರೊಂದಿಗೆ ಯಶಸ್ವಿ ಜೈಸ್ವಾಲ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಆದರೆ ಐಪಿಎಲ್‌ನಲ್ಲಿ ಆರಂಭಿಕ ಬ್ಯಾಟರ್ ಆಗಿ ಮಿಂಚಿರುವ ಕೊಹ್ಲಿ ಅವರನ್ನು ರೋಹಿತ್ ಜೊತೆ ಇನಿಂಗ್ಸ್ ಆರಂಭಿಸಲು ಅವಕಾಶ ಕೊಡುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು.

ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ ಅವರನ್ನು ಕಣಕ್ಕಿಳಿಸುವುದು ಸೂಕ್ತವಾಗಬಹುದು. ಬೌಲಿಂಗ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅವರೊಂದಿಗೆ ಅರ್ಷದೀಪ್ ಸಿಂಗ್ ಮತ್ತು ಮೊಹಮ್ಮದ್ ಸಿರಾಜ್ ಅವರನ್ನು ಸಿದ್ಧಗೊಳಿಸುವ ಸಾಧ್ಯತೆ ಇದೆ. ಆದ್ದರಿಂದ ಅಭ್ಯಾಸ ಪಂದ್ಯಗಳ ಪ್ರಯೋಗ ಮುಖ್ಯವಾಗಲಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಕೂಡ ಬೌಲಿಂಗ್ ವಿಭಾಗಕ್ಕೆ ಶಕ್ತಿ ತುಂಬಬಲ್ಲರು.

ಬಾಂಗ್ಲಾ ತಂಡವು ಮಧ್ಯಮ ಕ್ರಮಾಂಕದಲ್ಲಿ ಶಕೀಬ್ ಅಲ್ ಹಸನ್ ಅಥವಾ ಮೆಹದಿ ಹಸನ್ ಅವರಲ್ಲಿ ಯಾರನ್ನು ಕಣಕ್ಕಿಳಿಸಲಿದೆ ಎಂದು ಕಾದು ನೋಡಬೇಕಿದೆ. ವೇಗಿ ಮುಸ್ತಫಿಜುರ್ ರೆಹಮಾನ್ ಅವರು ಫಿಟ್‌ನೆಸ್ ಪರೀಕ್ಷೆ ಕೂಡ ಇಲ್ಲಿ ಆಗಬಹುದು.

ನ್ಯೂಯಾರ್ಕ್‌ಗೆ ಬಂದ ಕೊಹ್ಲಿ

ನ್ಯೂಯಾರ್ಕ್ (ಪಿಟಿಐ): ಭಾರತ ತಂಡದ 'ಬ್ಯಾಟಿಂಗ್ ತಾರೆ' ವಿರಾಟ್ ಕೊಹ್ಲಿ ಶುಕ್ರವಾರ ಇಲ್ಲಿಗೆ ಬಂದಿಳಿದರು. ಶನಿವಾರ ಅಭ್ಯಾಸ ಪಂದ್ಯದಲ್ಲಿ ಅವರು ಆಡುವ ಸಾಧ್ಯತೆ ಇದೆ.

'ವಿರಾಟ್ ಕೊಹ್ಲಿ ಅವರು ತಂಡದ ಹೋಟೆಲ್‌ಗೆ ಆಗಮಿಸಿದ್ದಾರೆ. ದೀರ್ಘ ಪ್ರಯಾಣ ದಿಂದ ಬಳಲಿರುವ ಅವರು ವಿಶ್ರಾಂತಿ ಪಡೆಯುತ್ತಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅವರು 16 ಗಂಟೆಗಳ ಪ್ರಯಾಣ ಮಾಡಿ ಇಲ್ಲಿಗೆ ತಲುಪಿದ್ದಾರೆ. ನಾಲ್ಕು ದಿನಗಳ ಹಿಂದೆ ಇಲ್ಲಿಗೆ ಭಾರತ ತಂಡದ ಮೊದಲ ಬ್ಯಾಚ್ ಬಂದಿತ್ತು.

ಕೊಹ್ಲಿ ಐಪಿಎಲ್‌ನಲ್ಲಿ 15 ಪಂದ್ಯಗಳಿಂದ 741 ರನ್ ಗಳಿಸಿ ಆರೆಂಜ್ ಕ್ಯಾಪ್ ಪಡೆದಿದ್ದರು.

ಬಾಲಾಜಿಗೆ ಜಯ, ಭಾಂಬ್ರಿ ನಿರ್ಗಮನ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಸಿನ್ನರ್, ಕೊಕೊಗೆ ಜಯ, ರುಬ್ಲೆವ್‌ಗೆ ಆಘಾತ

ಪ್ಯಾರಿಸ್ (ಪಿಟಿಐ/ಎಎಫ್‌ಪಿ): ಭಾರತದ ಎನ್.ಶ್ರೀರಾಮ್ ಬಾಲಾಜಿ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಚೊಚ್ಚಲ ಗೆಲುವು ದಾಖಲಿಸಿದರು. ಆದರೆ, ಭಾರತದ ಮತ್ತೊಬ್ಬ ಸ್ಪರ್ಧಿ ಯೂಕಿ ಭಾಂಬ್ರಿ ಅವರು ಮೊದಲ ಸುತ್ತಿನಲ್ಲಿ ನಿರ್ಗಮಿಸಿದರು.

ಪುರುಷರ ಡಬಲ್ಸ್‌ನಲ್ಲಿ ಬಾಲಾಜಿ ಮತ್ತು ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್ ವರೆಲಾ ಅವರು 6-3, 6-4 ಸೆಟ್‌ಗಳಲ್ಲಿ ಅಮೆರಿಕದ ರೀಸ್ ಸ್ಟಾಲ್ಡರ್ ಮತ್ತು ಡಚ್ ಆಟಗಾರ ಸೆಮ್ ವರ್ಬೀಕ್ ವಿರುದ್ಧ ಜಯ ಗಳಿಸಿದರು.

ಯೂಕಿ ಮತ್ತು ಅಲ್ಬಾನೊ ಒಲಿವೆಟ್ಟಿ ಜೋಡಿಯು ಆರಂಭಿಕ ಸುತ್ತಿನಲ್ಲಿ ಆಸ್ಟ್ರೇಲಿಯಾದ ಜಾನ್ ಪಿಯರ್ಸ್ ಮತ್ತು ರಷ್ಯಾದ ರೋಮನ್ ಸಫಿಯುಲಿನ್ ವಿರುದ್ಧ 3-6, 6-7 (5) ಸೆಟ್‌ಗಳಿಂದ ಪರಾಭವಗೊಂಡರು. ಆರಂಭಿಕ ಸೆಟ್‌ನಲ್ಲಿ ಯೂಕಿ ಮತ್ತು ಅವರ ಫ್ರೆಂಚ್ ಜೊತೆಗಾರ ಪರದಾಡಿದರು. ಆದರೆ, ಎರಡನೇ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿದರು.

ಬೋಪಣ್ಣ ಅವರು ಯೂಕಿ ಭಾಂಬ್ರಿ ಪಂದ್ಯವನ್ನು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ವೀಕ್ಷಿಸಿದರು. ಭಾರತದ ಅಗ್ರಗಣ್ಯ ಟೆನಿಸ್ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬಾಲಾಜಿ ಅಥವಾ ಭಾಂಬ್ರಿ ಅವರಲ್ಲೊಬ್ಬರು ಜೊತೆಗಾರ ಆಗಲಿದ್ದಾರೆ.

ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ಶನಿವಾರ ಅಭಿಯಾನ ಆರಂಭಿಸಲಿದೆ.


ಪೋಲೆಂಡ್‌ನ ಇಗಾ ಶ್ವಾಂಟೆಕ್ ಆಟದ ವೈಖರಿ –ಎಎಫ್‌ಪಿ ಚಿತ್ರ

ರುಬ್ಲೆವ್‌ಗೆ ಆಘಾತ: ಪುರುಷರ ಸಿಂಗಲ್ಸ್‌ನ ಮೂರನೇ ಸುತ್ತಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಆಂಡ್ರೆ ರುಬ್ಲೆವ್ 7-6 (6), 6-2, 6-4 ಸೆಟ್‌ಗಳಿಂದ ಮ್ಯಾಟಿಯೊ ಅರ್ನಾಲ್ಡಿ ವಿರುದ್ಧ ಸೋತು ಟೂರ್ನಿಯಿಂದ ನಿರ್ಗಮಿಸಿದರು.

ಎರಡನೇ ಶ್ರೇಯಾಂಕದ ಆಟಗಾರ ಯಾನಿಕ್ ಸಿನ್ನರ್ 6-4, 6-4, 6-4 ಸೆಟ್‌ಗಳಿಂದ ಪಾವೆಲ್ ಕೊಟೊವ್ ಅವರನ್ನು ಸೋಲಿಸಿದರು. ಸಿನ್ನರ್ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದರು.

ಶ್ವಾಂಟೆಕ್ ಮುನ್ನಡೆ

23ನೇ ವರ್ಷದ ಜನ್ಮದಿನದ ಸಂಭ್ರಮದಲ್ಲಿದ್ದ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್, ಮಹಿಳೆಯರ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ 6–4, 6–2ರಿಂದ ಮೇರಿ ಬೌಜ್ಕೋವಾ ಅವರನ್ನು ನಿರಾಯಾಸವಾಗಿ ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿಸಿದರು.

ಮೂರನೇ ಶ್ರೇಯಾಂಕದ ಕೊಕೊ ಗಾಫ್ 6-2, 6-4 ಸೆಟ್‌ಗಳಿಂದ ಉಕ್ರೇನ್‌ನ ಡಯಾನಾ ಯಾಸ್ಟ್ರೆಮ್ಸ್ಕಾ ಅವರನ್ನು ಸೋಲಿಸಿ ನಾಲ್ಕನೇ ಸುತ್ತಿಗೆ ಪ್ರವೇಶಿಸಿದರು. ಐದನೇ ಶ್ರೇಯಾಂಕದ ಮಾರ್ಕೆಟಾ ವೊಂಡ್ರೊಸೊವಾ 6-1 6-3 ರಿಂದ ಫ್ರಾನ್ಸ್‌ನ ಕ್ಲೋಯ್ ಪ್ಯಾಕ್ವೆಟ್ ಅವರನ್ನು ಮಣಿಸಿದರು.


ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ –ಎಕ್ಸ್ ಚಿತ್ರ

ಸೆಮಿಗೆ ಟ್ರಿಸಾ–ಗಾಯತ್ರಿ ಜೋಡಿ

ಸಿಂಗಪುರ (ಪಿಟಿಐ): ಭಾರತದ ಡಬಲ್ಸ್ ಆಟಗಾರರಾದ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಶುಕ್ರವಾರ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆರನೇ ಶ್ರೇಯಾಂಕದ ಜೋಡಿ ದಕ್ಷಿಣ ಕೊರಿಯಾದ ಕಿಮ್ ಸೋ ಯೊಂಗ್ ಮತ್ತು ಕಾಂಗ್ ಹೀ ಯಾಂಗ್ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಒಂದು ಗಂಟೆ 19 ನಿಮಿಷಗಳ ಕಾಲ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 18-21, 21-19, 24-22 ಅಂತರದಲ್ಲಿ ಜಯ ಸಾಧಿಸಿತು.

ವಿಶ್ವದ 30ನೇ ರ್‍ಯಾಂಕ್‌ನ ಭಾರತದ ಜೋಡಿ ಕಳೆದ ವರ್ಷ ಏಷ್ಯನ್ ಕ್ರೀಡಾಕೂಟದಲ್ಲಿ ಇದೇ ಎದುರಾಳಿಗಳ ವಿರುದ್ಧ ಅನುಭವಿಸಿದ ಸೋಲಿಗೆ ಇಲ್ಲಿ ಮುಯ್ಯಿ ತೀರಿಸಿಕೊಂಡಿತು.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತರಾದ ಟ್ರಿಸಾ ಮತ್ತು ಗಾಯತ್ರಿ ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ಎರಡನೇ ಸ್ಥಾನದ ಕೊರಿಯಾದ ಬೇಕ್ ಹಾ ನಾ ಮತ್ತು ಲೀ ಸೋ ಹೀ ಅವರನ್ನು ಸೋಲಿಸಿದ್ದರು.

ಟ್ರಿಸಾ ಮತ್ತು ಗಾಯತ್ರಿ ಶನಿವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಜಪಾನಿನ ನಮಿ ಮತ್ಸುಯಾಮಾ ಮತ್ತು ಚಿಹಾರು ಶಿಡಾ ಅವರನ್ನು ಎದುರಿಸಲಿದ್ದಾರೆ. ಈ ಟೂರ್ನಿಯ ಕಣದಲ್ಲಿರುವ ಏಕೈಕ ಭಾರತೀಯ ಜೋಡಿ ಇದಾಗಿದೆ. ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಗುರುವಾರ ತಮ್ಮ ಪಂದ್ಯಗಳಲ್ಲಿ ಸೋತಿದ್ದರು.

ನಾರ್ವೆ ಚೆಸ್: ವೈಶಾಲಿಗೆ ಜಯ

ಸ್ಟೆವೆಂಜರ್, ನಾರ್ವೆ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯಲ್ಲಿ ಅಮೆರಿಕದ ಹಿಕಾರು ನಕಾಮುರಾ ವಿರುದ್ಧ ಸೋಲುನುಭವಿಸಿದರು. ಆದರೆ, ಅವರ ಅಕ್ಕ ಆರ್. ವೈಶಾಲಿ ಅವರು ಸ್ವೀಡನ್‌ನ ಪಿಯಾ ಕ್ರಾಮ್ಲಿಂಗ್ ವಿರುದ್ಧ ಜಯ ಸಾಧಿಸಿದ್ದಾರೆ.

ಕ್ಲಾಸಿಕಲ್ ಮಾದರಿ ಚೆಸ್‌ನಲ್ಲಿ ಎರಡನೇ ಗೆಲುವಿನ ನಂತರ ವೈಶಾಲಿ ತನ್ನ ಮುನ್ನಡೆಯನ್ನು 2.5 ಅಂಕಗಳಿಗೆ ವಿಸ್ತರಿಸಿದರು. ಭಾರತದ ಆಟಗಾರ್ತಿ ಈಗ 8.5 ಅಂಕ ಹೊಂದಿದ್ದು, ಮಹಿಳಾ ವಿಶ್ವ ಚಾಂಪಿಯನ್ ಚೀನಾದ ವೆಂಜುನ್ ಜು ಮತ್ತು ಉಕ್ರೇನ್‌ನ ಅನ್ನಾ ಮುಜಿಚುಕ್ ನಂತರದ ಸ್ಥಾನದಲ್ಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಮುಜಿಚುಕ್ ಅವರು ಭಾರತದ ಕೊನೇರು ಹಂಪಿ ಅವರನ್ನು ಮಣಿಸುವ ಮೂಲಕ ಮೊದಲ ಗೆಲುವು ದಾಖಲಿಸಿದರು. ನಿರ್ಣಾಯಕ ಪಂದ್ಯದಲ್ಲಿ ವೆನ್ಜುನ್ ಅವರು ಸ್ವದೇಶದ ಟಿಂಗ್ಜಿ ಲೀ ವಿರುದ್ಧ ಜಯ ಗಳಿಸಿದರು.



ಪುರುಷರ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲಸನ್ ಸಾಂಪ್ರದಾಯಿಕ ಎದುರಾಳಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರನ್ನು ಸೋಲಿಸಿದರು. ದಿನದ ಮತ್ತೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಫಿರೌಜಾ ಅಲಿರೇಜಾ ಅವರು ಹಾಲಿ ವಿಶ್ವ ಚಾಂಪಿಯನ್ ಚೀನಾದ ಡಿಂಗ್ ಲಿರೇನ್ ಅವರನ್ನು ಸೋಲಿಸಿದರು.

ಟೂರ್ನಿಯಲ್ಲಿ ಇನ್ನೂ ಅನೇಕ ಪಂದ್ಯಗಳು ನಡೆಯಬೇಕಿದೆ. ಆದರೆ, ನಾಲ್ಕನೇ ಸುತ್ತಿನ ಕೊನೆಯಲ್ಲಿ ನಕಾಮುರಾ ಏಳು ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಕಾರ್ಲಸನ್ ಆರು ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದರೆ, ಪ್ರಜ್ಞಾನಂದ 5.5 ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೆ ಕುಸಿದಿದ್ದಾರೆ. ಈ ಹಂತದಲ್ಲಿ ಕರುವಾನಾ ಐದು ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿದ್ದರೆ, ಲಿರೇನ್ ಕೇವಲ 2.5 ಅಂಕಗಳೊಂದಿಗೆ ಕೊನೆಯ ಸ್ಥಾನದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾ ತಂಡಕ್ಕೆ ವೊಲ್ವಾರ್ಡ್ ನಾಯಕಿ

ಜೋಹಾನ್ಸ್‌ಬರ್ಗ್ (ಪಿಟಿಐ): ಅಗ್ರ ಕ್ರಮಾಂಕದ ಬ್ಯಾಟರ್ ಲಾರಾ ವೊಲ್ವಾರ್ಡ್ ಅವರು ಜೂನ್ 16ರಿಂದ ನಡೆಯುವ ಭಾರತ ಪ್ರವಾಸದಲ್ಲಿ ದಕ್ಷಿಣ ಆಫ್ರಿಕಾದ ಟೆಸ್ಟ್ ಮತ್ತು ಏಕದಿನ ತಂಡವನ್ನು ಮುನ್ನಡೆಸಲಿದ್ದಾರೆ.

ಟೆಸ್ಟ್ ಮತ್ತು ಏಕದಿನ ತಂಡ ಹೀಗಿದೆ: ಲಾರಾ ವೊಲ್ವಾರ್ಡ್ (ನಾಯಕಿ), ಅನೆಕೆ ಬೋಶ್, ತಸ್ಮಿನ್ ಬ್ರಿಟ್ಜ್, ನಡಿನ್ ಡಿ. ಕ್ಲರ್ಕ್, ಅನ್ನೆರಿ ಡೆರ್ಕ್ಸೆನ್, ಮೈಕೆ ಡಿ. ರಿಡ್ಡರ್, ಸಿನಾಲೊ ಜಾಫ್ತ, ಮರಿಜಾನೆ ಕಪ್, ಅಯಮೊಂಗಾ ಖಾಕ, ಮಸಾಬಟಾ ಕ್ಲಾಸ್, ಸುನೆ ಲೂಸ್, ಎಲಿಜ್ ಮಾರಿ ಮಾರ್ಕ್ಸ್, ನೊಂಕುಲುಲೆಕೊ ಮಾಬಾ, ತುಮಿ ಸೆಖುಖುನೆ, ನೊಂದುಮಿಸೊ ಶಂಗಾಸೆ, ಡೆಲ್ಮಿ ಟಕರ್.

ಅರ್ಹತೆ ಪಡೆದ ಭಾರತದ ಮೊದಲ ಪುರುಷ ಬಾಕ್ಸರ್

ನಿಶಾಂತ್‌ಗೆ ಪ್ಯಾರಿಸ್ ಒಲಿಂಪಿಕ್ಸ್ ಟಿಕೆಟ್


ನಿಶಾಂತ್ ದೇವ್

ಬ್ಯಾಂಕಾಕ್ (ಪಿಟಿಐ): ಭಾರತದ ನಿಶಾಂತ್ ದೇವ್ (71 ಕೆ.ಜಿ) ಶುಕ್ರವಾರ ಇಲ್ಲಿ ನಡೆದ ಎರಡನೇ ವಿಶ್ವ ಬಾಕ್ಸಿಂಗ್ ಒಲಿಂಪಿಕ್ ಅರ್ಹತಾ ಸುತ್ತಿನಲ್ಲಿ ಸೆಮಿಫೈನಲ್ ತಲುಪುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತದ ಮೊದಲ ಪುರುಷ ಬಾಕ್ಸರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಹಿಂದಿನ ಅರ್ಹತಾ ಪಂದ್ಯಗಳಲ್ಲಿ ಒಲಿಂಪಿಕ್ ಸ್ಥಾನವನ್ನು ತಪ್ಪಿಸಿಕೊಂಡಿದ್ದ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ, ಕ್ವಾರ್ಟರ್ ಫೈನಲ್‌ನಲ್ಲಿ ಮೊಲ್ಡೊವಾದ ವಾಸಿಲೆ ಸೆಬೊಟಾರಿ ಅವರನ್ನು 5-0 ಅಂತರದಿಂದ ಸೋಲಿಸಿ ಕೋಟಾ ಪಡೆದರು.

ಮಹಿಳಾ ಬಾಕ್ಸರ್‌ಗಳಾದ ನಿಖತ್ ಜರೀನ್ (50 ಕೆಜಿ), ಪ್ರೀತಿ ಪವಾರ್ (54 ಕೆಜಿ) ಮತ್ತು ಲವ್ಲಿನಾ ಬೊರ್ಗೊಹೈನ್ (75 ಕೆಜಿ) ಏಷ್ಯನ್ ಕ್ರೀಡಾಕೂಟದ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಪ್ರವೇಶ ಪಡೆದಿದ್ದಾರೆ. ನಿಶಾಂತ್ ದೇವ್ ಭಾರತದ ನಾಲ್ಕನೇ ಕೋಟಾ ಸ್ಥಾನವಾಗಿದೆ.

ಇದಕ್ಕೂ ಮುನ್ನ ಮಹಿಳೆಯರ 60 ಕೆ.ಜಿ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಅಂಕುಶಿತಾ ಬೋರೊ ಅವರು ಸ್ವೀಡನ್ ಆಗ್ನೆಸ್ ಅಲೆಕ್ಸಿಯಸನ್ ವಿರುದ್ಧ 2-3 ಅಂತರದಲ್ಲಿ ಸೋಲನುಭವಿಸಿದರು.

ಮಾಜಿ ವಿಶ್ವ ಯೂತ್ ಚಾಂಪಿಯನ್ ಬೋರೊ ಕಠಿಣ ಹೋರಾಟ ನಡೆಸಿದರು. ಆದರೆ, ಮಾಜಿ ಯುರೋಪಿಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಅನುಭವದ ಮುಂದೆ ಇವರ ಆಟ ನಡೆಯಲಿಲ್ಲ. ಮೊದಲ ಸುತ್ತಿನ ಕೊನೆಯಲ್ಲಿ ನೇರ ಹೊಡೆತಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು.

ಇಬ್ಬರೂ ಸಮಾನ ಅಂಕಗಳೊಂದಿಗೆ ಮೂರನೇ ಸುತ್ತು ಪ್ರವೇಶಿಸಿದರು. ಆದರೆ ಅಂತಿಮವಾಗಿ ಅಲೆಕ್ಸಿಯಸ್ಸನ್ ಗೆಲುವು ಸಾಧಿಸಿದರು.

ಅಮಿತ್ ಪಂಗಲ್ (51 ಕೆಜಿ) ಮತ್ತು ಸಚಿನ್ ಸಿವಾಚ್ (57 ಕೆಜಿ) ಅವರು ತಮ್ಮ ವಿಭಾಗದಲ್ಲಿ ಜಯ ಸಾಧಿಸಿ, ಪ್ಯಾರಿಸ್ ಟಿಕೆಟ್‌ಗೆ ಮತ್ತಷ್ಟು ಹತ್ತಿರವಾದರು.

ವಿಶ್ವ ಬಾಕ್ಸಿಂಗ್‌ಗೆ ಬಿಎಫ್‌ಐ

ನವದೆಹಲಿ (ಪಿಟಿಐ): ಬಾಕ್ಸಿಂಗ್ ಫೆಡರೇಷನ್ ಆಫ್ ಇಂಡಿಯಾ (ಬಿಎಫ್‌ಐ) ಶುಕ್ರವಾರ ಅಮಾನತುಗೊಂಡಿರುವ ಅಂತರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ತೊರೆದು ವಿಶ್ವ ಬಾಕ್ಸಿಂಗ್‌ಗೆ ಸೇರ್ಪಡೆಯಾಗಿದೆ.

ಹಣಕಾಸು ವಿಷಯದಲ್ಲಿ ಪಾರದರ್ಶಕತೆ ಕಾಪಾಡದ ಕಾರಣಕ್ಕೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ), ಬಾಕ್ಸಿಂಗ್ ಸಂಸ್ಥೆಯನ್ನು ನಿರ್ಬಂಧಿಸಿದೆ. 2020ರ ಟೋಕಿಯೊ ಒಲಿಂಪಿಕ್ಸ್ ಬಾಕ್ಸಿಂಗ್ ಸ್ಪರ್ಧೆಗಳನ್ನೂ, ಐಬಿಎ ನೆರವಿಲ್ಲದೇ ಐಒಸಿಯೇ ಸಂಘಟಿಸಿತ್ತು. ಐಬಿಎ ಜತೆ ರಾಷ್ಟ್ರೀಯ ಫೆಡರೇಷನ್‌ಗಳು ಗುರುತಿಸಿಕೊಳ್ಳುವುದನ್ನು ಮುಂದುವರಿಸಿದರೆ 2028 ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಿಂದ ಬಾಕ್ಸಿಂಗ್ ಹೊರಗಿಡುವುದಾಗಿ ಐಒಸಿ ಪುನರುಚ್ಚರಿಸಿದ ತಿಂಗಳ ನಂತರ ಈ ಕ್ರಮ ಕೈಗೊಳ್ಳಲಾಗಿದೆ.